ಕಲಕತ್ತೆಯಲ್ಲಿ ಜರಗಿದ ಸಮಗ್ರ ಭಾರತದ ಕಾಂಗ್ರೆಸ ಕಮೀಟಿಯ ಅಧಿವೇಶನದಲ್ಲಿ, ಅಂತ್ಯಜ ವರ್ಗದವರನ್ನೂ ಕಾಂಗ್ರೆಸ ಮೆಂಬರರನ್ನಾಗಿ ಸೇರಿಸಿಕೊಳ್ಳಬೇಕೆಂದೂ; ಕಾಂಗ್ರೆಸ ಸ್ಟೋರುಗಳಲ್ಲಿ ಕೈನೂಲಿನ ವಸ್ತ್ರಗಳ ವ್ಯಾಪಾರವೊಂದನ್ನೇ ಪ್ರೋತ್ಸಾಹಿಸಬೇಕೆಂದೂ, ಪ್ರಾಂತಿಕ ಕಮೀಟಿಗಳು ತಮ್ಮ ಖರ್ಚಿಗೆ ಬೇಕಾದ ಹಣವನ್ನು ಆಯಾ ಪ್ರಾಂತಗಳಲ್ಲಿಯೇ ಸಂಗ್ರಹಿಸಿ, ಸ್ವಾವಲಂಬಿಗಳಾಗಿರಬೇಕೆಂದೂ; ತಿಲಕಫಂಡಿಗೆ ಸಂಗ್ರಹವಾಗುವ ಹಣದ ಪಟ್ಟಿಗೆ ಸೇಕಡಾ ೫ ರಂತೆ ಪ್ರತಿ ಪ್ರಾಂತವು ಸಮಗ್ರ ಭಾರತದ ಕಾಂಗ್ರೆಸ ಕಮೀಟಿಗೆ ಕಳಿಸತಕ್ಕದೆಂದೂ; ಗಾಂಧಿ ದಿನವನ್ನು ಪಾಳಲು ಪ್ರಕಟಿಸಿರುವಂತೆಯೆ ಅವಶ್ಯಕತೆ ಕಂಡರೂ ನಿರ್ಧಾರವಾಗಿರುವುದಲ್ಲದೆ, ಅಸಹಕಾರಕ್ಕಾಗಿ ವಕೀಲ ವೃತ್ತಿಯನ್ನು ತ್ಯಾಗಮಾಡಿದವರ ಸಹಾಯ್ಯದ ಬಗೆಗೆ ಸಂಗ್ರಹಿಸಿದ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನು ದಾನಮಾಡಿದ ಶ್ರೀಯುತ ಜಮುನಾಲಾಲಜೀ ಆ ಘಟನೆ ಮೆಚ್ಚುಗಾರವನ್ನು ಸೂಚಿಸತಕ್ಕದಂದೂ; ಕರ್ನಾಟಕ ಪ್ರಾಂತದಿಂದ ಶ್ರೀಯುತ ಪ. ದೇಶಪಾಂಡೆ ಬೆಳಗಾಂವ ಇವರ ಮೂಲಕವೂ ತಮಿಳ, ಆಂಧ್ರ, ಮಲೆಯಾಳ ಪ್ರಾಂತಗಳಿಂದ ಶ್ರೀಯುತ ರಾಜಗೋಪಾಲಾಚಾರ್ಯರ ಮೂಲಕವೂ, ಧನ ಸಹಾಯವನ್ನು ಅಪೇಕ್ಷಿಸುವಂಥ ವಕೀಲರು, ಶ್ರೀ. ಜಮುನಾಲಾಲರವರಿಗೆ ಅರ್ಜಿ ಮಾಡಿಕೊಳ್ಳಬಹುದೆಂದೂ ನಿಶ್ಚಯವಾಗಿದೆ. ಕಟುಂಬಿಯರಿಗೆ ಕುಡುಕೆ ಹೊನ್ನು ಎಲ್ಲಿಗೆ ಸಾಕೆಂದು ಆಂಗ್ಲೋ ಇಂಡಿಯನ್ ಪತ್ರಿಕೆಗಳಿಗೆ ಹೇಳಲಿಕ್ಕಿಲ್ಲಂದು ಹೊಸದಾಗಿ!

ಕಂಠೀರವ.

ಮುಳಶೀ ಸತ್ಯಾಗ್ರಹ ಪ್ರಕರಣದಲ್ಲಿ ಕೇಸರಿಯ ಉಪಸಂಪಾದಕರಿಗೆ ಶಿಕ್ಷೆ.

—o—

ಶ್ರೀ. ತಾತ್ಯಾ ಸಾಹೇಬ ಕರಂದೀಕರ, ಡಾ, ವಳಸುಳೆ ಮೊದಲಾದ ೬ ಜನರ ಮೇಲೆ ಮುಳಶೀ ಸತ್ಯಾಗ್ರಹಕ್ಕಾಗಿ ಖಟ್ಲೆ ನಡೆದಿತ್ತಷ್ಟೇ. ಎಲ್ಲ ಜನರಿಗೂ ೩ ತಿಂಗಳ ಸಖ್ತ ಶಿಕ್ಷೆಯೂ ೫೦ರೂ ದಂಡವೂ, ದಂಡಕೊಡದಿದ್ದರೆ ಪುನಃ ೧ತಿಂಗಳ ಶಿಕ್ಷೆಯೂ ವಿಧಿಸಲ್ಪಟ್ಟಿವೆ. ಶಿಕ್ಷೆಯಾದವರ ಹೆಸರುಗಳು ೧ ಶ್ರೀ. ಕರಂದೀಕರ. ೨ ಡಾ. ವಳಸುಳೆ, ೩, ಡಾ, ಪೊರಗಾಂವಕರ, ೪ ಡಾ. ಪಾಟೀಲ, ೫ ಡಾ, ಧರ್ಮಾಧಿಕಾರಿ. ೬ ಬಪ್ಪು ಸ್ವ. ಕೇಳಕರು

ಜಡ್ಜರು ಮೌ, ಹಜರತ ಮೋಹಾನಿಯವರ ನಿರ್ದೋಷಿಗಳೆಂದರು.

——(೦)——

ಮೌಲಾನಾ ಹಜರತ ಮೋಹಾನಿಯವರ ಖಟ್ಲೆಯ ವಿಚಾರಣೆಯು ಮುಗಿಯಿತು. ಜಡ್ಜರು ವಿಕಮವರಿಂದ ಎರಡೂ ಆರೋಪದಲ್ಲಿ ನಿರ್ದೋಷಿಗಳೆಂದು ತಮ್ಮ ಅಭಿಪ್ರಾಯವನ್ನು ಕೊಟ್ಟರು. ನ್ಯಾಯಾಧೀಶರು ನಿಕಾಲೆಯನ್ನು ಇನ್ನು ಹೇಳಿಲ್ಲ.

* * *

ಕರೆಮನೆಯ ಅಧಿಕಾರಿಗಳ ಉಪದ್ವ್ಯಾಪವು.

——o——

ಶ್ರೀಕೃಷ್ಣನ ಫೋಟೋ ಇಡಲಿಕ್ಕೆ ಅಡ್ಡಿಯು.

——(೦)——

ಸ್ವಾಮಿ ಭಾಸ್ಕರ ತೀರ್ಥ ಎಂಬ ಸನ್ಯಾಸಿಗಳನ್ನು ರಾಜದ್ರೋಹದ ಆರೋಪದಿಂದ ಕರೆಮನೆಯಲ್ಲಿಟ್ಟಿರುವದಷ್ಟೇ? ಅವರನ್ನು ಈಗ ಲಖನೌ ಕರೆಮನೆಗೆ ಕಳಿಸಿದ್ದು. ಅಲ್ಲಿ ಕೂಡ ಅವರು ಮೊದಲಿನಂತೆ ತಾವು ಇರುವ ಕರೆ ಕೋಣೆಯಲ್ಲಿ ಶ್ರೀ ಕೃಷ್ಣನ ಭಾವಚಿತ್ರವನ್ನು ತೂಗುಹಾಕಿರುತ್ತಾರೆ. ಇದು ಕರೆಮನೆಯ ಸುಪರಿಂಟೆಂಡೆಂಟರಿಗೆ ಸಹನವಾಗದೆ ಅದನ್ನು ತೆಗೆದು ಹಾಕಲುಹೇಳಿದರು. ಸ್ವಾಮಿಗಳು ನಮ್ಮ ಇಷ್ಟದೇವತೆಗೆ ಅವಮಾನಗೊಳಿಸಬಾರದೆಂದು ಕೇಳಿಕೊಂಡರು. ಆದರೆ ಇದಕ್ಕೆ ಅವರು ಕಿವಿಗೊಡದೆ, ತಮ್ಮ ಅಧಿಕಾರಮದದಿಂದ ಉಪದ್ವ್ಯಾಪವನ್ನು ನಡಿಸಿ ಭಾವಚಿತ್ರವನ್ನು ಕಿತ್ತಿ ಒಗೆದರು.

ಸ್ವಾಮಿಗಳ ಧಾರ್ಮಿಕ ವೃತ್ತಿಯನ್ನು ಈ ವಿಧವಾಗಿ ನೋಯಿಸಿದ್ದರಿಂದ ರಾಜಕೀಯ ಕರೆಯಾಳುಗಳ ಮನಸು ನೊಂದವು. ಮತ್ತು ಸ್ವಾಮಿಗಳಂತೆ ಅವರೆಲ್ಲರೂ ತಂತಮ್ಮ ಸ್ಥಳದಲ್ಲಿ ಶ್ರೀ ಕೃಷ್ಣನಭಾವಚಿತ್ರವನ್ನು ಇಟ್ಟೇ ತೀರುವದೆಂದು ನಿರ್ಧರಿಸಿದರು

ಮರುದಿವಸ ಕರೆಮನೆಯ ಮುಖ್ಯಾಧಿಕಾರಿಗಳು ನೋಡಲಿಕ್ಕೆಂದು ಬಂದಾಗ ಪ್ರತಿಯೊಬ್ಬರ ಸ್ಥಳದಲ್ಲಿ ಒಂದೊಂದು ಶ್ರೀ ಕೃಷ್ಣನ ಚಿತ್ರವಿರುವದನ್ನು ಕಂಡು ಕೆಂಡವಾಗಿ, ಅವನ್ನೆಲ್ಲ ಕಿತ್ತಿ ತಿಪ್ಪಿಗೆ ಕಾಣಿಸಲಿಕ್ಕೆ ಹುಕುಮುಕೊಟ್ಟರು. ಅದಕ್ಕೆ ಕರೆಯಾಳುಗಳು ಖಂಡಿತವಾಗಿ ಅಲ್ಲಗಳೆದರು. ಇದರಿಂದ ಕರೆಮನೆಯ ಮುಖ್ಯಾಧಿಕಾರಿಗಳು ರೇಗಿ ಇಬ್ಬರು ಕರೆಯಾಳುಗಳನ್ನು ಫೈಜಾಬಾದ ಜೇಲಿಗೆ ಕಳಿಸಿದರು.

ಕರೆಯಾಳುಗಳು ಧಾರ್ಮಿಕ ಆಚರಣೆಯಲ್ಲಿ ಈ ಮೇರೆಗೆ ತಿರುತಿರುಗಿ ಕೈಹಾಕಿ ಅವರಿಗೆ ಅವಮಾನಗೊಳಿಸುವದರಿಂದ ಮುಕ್ತ ಕರೆಯಾಳುಗಳಿಗೆ ಸಂತಾಪವುಂಟಾಗಿ, ಎಲ್ಲರೂ ಏನು ಮಾಡಿದರೂ ಶಾಂತವಾಗಿರಲಿಕ್ಕೆ ಮನಸು ಮಾಡಿಕೊಂಡಿದ್ದಲ್ಲದೆ, ಅದೇ ಕರೆಮನೆಯಲ್ಲಿರುವ ಶ್ರೀ. ರಂಗಯ್ಯನವರನ್ನು ತಮ್ಮ ಮುಖಂಡರನ್ನಾಗಿ ಮಾಡಿದರು. ಮಾರನೇ ದಿವಸ ಮುಖ್ಯಾಧಿಕಾರಿಯು ಕರೆಮನೆಗೆ ಬರಲು, ಕೆಲವು ಕಾರಣದಿಂದ ಅವರಿಗೂ ಶ್ರೀ ರಂಗಯ್ಯನವರಿಗೂ ಏನೋ ಮಾತು ಮಾತಿಗೆ ಬಾಯಿ ಬಾಯಿಗೆ ಬಾಯಿ ಹತ್ತಿತು. ಇದರಿಂದ ಮುಖ್ಯಾಧಿಕಾರಿಗಳು ಸಿಟ್ಟಾಗಿ ಶ್ರೀ. ರಂಗಯ್ಯನವರನ್ನು ಡಿಸ್ಟ್ರಿಕ್ಟ ಜೇಲಿಗೆ ಕಳಿಸಿದರೂ, ಶ್ರೀ. ರಂಗಯ್ಯನವರು ಆನಂದದಿಂದ ತಮ್ಮ ಕೈಯಲ್ಲಿ ಶ್ರೀಕೃಷ್ಣನ ಭಾವಚಿತ್ರದೊಂದಿಗೆ ಆ ಕರೆಮನೆಗೆ ತೆರಳಿದರು ಪಂಡಿತ ಮೋತಿಲಾಲರು ಅದೇ ಕರೆಮನೆಯಲ್ಲಿರುವರು ಅವರಿಗೆ ಈ ಸಂಗತಿಯನ್ನು ತಿಳಿಸಿ, ಜೇಲ ಅಧಿಕಾರಿಯು ಶ್ರೀ. ರಂಗಯ್ಯನವರನ್ನು ೧ತಿಂಗಳ ಪರ್ಯಂತರ ಕೋಣೆಯಲ್ಲಿ ಇಡಿಸುವೆನೆಂದು ಹೇಳಿದರು, ಅದರಂತೆ, ಹಾಗೆ ಮಾಡದೆ, ರಂಗಯ್ಯನವರನ್ನು ಒಂದು ಗಾಳಿ ಇರದ ಕತ್ತಲೆ ಕೋಣೆಯಲ್ಲಿ ಎರಡು ದಿವಸಗಳ ವರೆಗೆ ಹಾಕಿಟ್ಟರು. ಅವರಿಗೆ ಮಲಮೂತ್ರ ವಿಸರ್ಜನೆ ಮಾಡಲಿಕ್ಕೆ ಸಹ ಹೊರಗೆ ಬಿಡಲಿಲ್ಲ; ಇದರಿಂದ ಶ್ರೀ ರಂಗಯ್ಯನವರು ಮಲ ಮೂತ್ರ ವಿಸರ್ಜನೆಮಾಡಿದ ಸ್ಥಳದಲ್ಲಿಯೇ ಕುಳಿತುಕೊಂಡು ಊಟಕ್ಕೆ ಒಲ್ಲೆಂದು ಉಪವಾಸ ಮಾಡಿದರು. ಕೊನೆಗೇನೋ ಕನಿಕರ ಹುಟ್ಟಿ ಅವರನ್ನು ಯುರೋಪಿಯನ್ನರ ಕೋಣೆಗೆ ಒಯ್ದರು, ಅಲ್ಲಿ ಹೊರಗೆ ಶೌಚ ಮೂತ್ರಕ್ಕಾಗಿ ಒಯ್ಯುವರೆಂದು ತಿಳಿಯುತ್ತೇನೆ. ಎರಡು ದಿವಸಗಳ ವರೆಗೆ ಒಂದೇಸಮನೇ ಕತ್ತಲೆಕೋಣೆಯಲ್ಲಿರುವದರಿಂದ ಶ್ರೀ. ರಂಗಯ್ಯನವರ ಪ್ರಕೃತಿ ಮೇಲೆಕಟ್ಟಿನಿಂದ [illegible] ವದಾಗಿ ತಿಳಿಯುತ್ತದೆ. ಅಧಿಕಾರಿಗಳ [illegible] ಕ್ಕೆ ಏನನ್ನಬೇಕು.

ಮೌ. ಹಜರತ ಮೋಹಾನಿಯವರ ಖಟ್ಲೆಯ ತೀರ್ಪು

—o—

ಮೌ. ಹಜರತ ಮೋಹಾನಿಯವರ ಮೇಲೆ ಇಟ್ಟ ರಾಜದ್ರೋಹ ಆರೋಪಗಳ ಬಗ್ಗೆ ಜೂರಿ ಜನರ ಮತಗಳು ಭಿನ್ನವಾಗಿವೆ. ಮಿ. ವಿಸೋಲ್ಸನ ಕೆಲಸ್ಕ ಜಜ್ಜರವರು ಆರೋಪಿಯು ದೋಷಿಯಾದವನು ಎಂದು ಎರಡು ವರ್ಷಗಳ ಸಕ್ತ ಶಿಕ್ಷೆಯನ್ನು ವಿಧಿಸಿದರಷ್ಟೇ ಆರೋಪಿಯು ಗಡೀಪಾರ, ಅಥವಾ ಶಿಪಾಯಿಗಳೇ ಎಂಬುದನ್ನು ನಿಶ್ಚಯಿಸುವ ಅಧಿಕಾರವಿದ್ದ ಮ್ಯಾಜಿಸ್ಟ್ರೇಟರಿಗೆ ವಿಚಾರ ಮಾಡುವ ಶಕ್ತಿಯನ್ನು ದೇವರು ಕೊಟ್ಟೇ ಇರುವನು. ಅಂಥಾ ಜಗದೀಶ್ವರನು ಕೊಟ್ಟ ವಿಚಾರ ಶಕ್ತಿಯ ದುರುಪಯೋಗವನ್ನು ಮಾತ್ರ ಮಾಡಬಾರದು. ಒಂದು ವೇಳೆ ದುರುಪಯೋಗ ಮಾಡಿದ್ದೇ ಆದರೆ ಸರ್ವಶಕ್ತನಿಂತನು ಅವರ ಯೋಗ್ಯ ಶಾಸನ ಮಾಡದೆ ಇರಲಿಕ್ಕಿಲ್ಲ ಸಾಗಲಿ.

ಮಿ. ಕೆಂಪರವರ ಭಾಷಣ

ಒಂದೇ ವೇಳೆಯಲ್ಲಿ ಮೂರು ಫೌಜದಾರಿ ಖಟ್ಲೆಗಳನ್ನು ಇವಕರಿ ಮಾಡುವದಕ್ಕೆ ಬರುತ್ತದೆಂದು ಹೇಳಿ ಆ ಬಗ್ಗೆ ಕ್ರಿ. ಪ್ರೊ. ಕೋ ನ ಕೆಲವು ಆಧಾರಗಳನ್ನು ತೋರಿಸಿದರು. ಆ ಮೇಲೆ ಜೂರಿ ಜನರನ್ನು ಉದ್ದೇಶಿಸಿ ಆರೋಪಿಯು ಎರಡು ಗುನ್ಹೆಗಳನ್ನು ಮಾಡಿದ್ದಾನೆ. ಅಹಮದಾಬಾದಿಯ ಭಾಷಣಯುತೆಯಲ್ಲಿ ಸರಕಾರದ ವಿರುದ್ಧ ಅಪ್ರೀತಿಯನ್ನು ಹುಟ್ಟಿಸಿದ ಆರೋಪಕ್ಕೆ ಪಾತ್ರನಾಗುವನು ಇದನ್ನು ನೀವು ಲಕ್ಷ್ಯಕ್ಕೆ ತನ್ನಿರಿ. ಕಾಂಗ್ರೆಸಿನಲ್ಲಿ ಅಥವಾ ಮುಸ್ಲಿಮ್‌ಲೀಗದ ಸಭೆಯಲ್ಲಿ ಸದ್ಯದ ಸರಕಾರವು ನಮ್ಮ ಮನಸಿಗೆ ಬರುವದಿಲ್ಲ. ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಧ್ಯೇಯವು ಎಂದು ಆರೋಪಿಯು ತನ್ನ ಭಾಷಣದಲ್ಲಿ ಹಾರಾಡಿದ್ದಾನೆ. ಬ್ರಿಟಿಶ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಇಷ್ಟೆಯನ್ನು ಒಡಸುವದು ಯಾನೂ ಅಪರಾಧವೆಂದು ಅನಿಸುವದಿಲ್ಲ. ಆದರೆ ಸಂಪೂರ್ಣ ಸ್ವತಂತ್ರತೆಯನ್ನು ಬೇಡುವ ಕಲ್ಪನೆಯು ಯುಕ್ತೀ ಉದಾತ್ತ ಮತ್ತು ಉಚ್ಚ ತರದ್ದು ಇದ್ದಾಗ್ಯೂ ಅದರ ಯೋಗದಿಂದ ಸದ್ಯದ ಸರಕಾರ ವಿಷಯದ ಪ್ರೀತಿಯು ನಷ್ಟವಾಗುತ್ತ ಹೋಗುತ್ತದೆ ಕಾರಣ ಸರಕಾರಕ್ಕೆ ಈ ಭೀತಿಕೆಯು ಎಂದೂ ಸಹನವಾಗುವದಿ ಮೇಲಾಗಿ ಸದ್ಯದ ಪರಿಸ್ಥಿತಿಯ ಮೇರಿಂದ ಈ. ಭಾಷಣಗಳನ್ನು ದುರ್ಲಕ್ಷ್ಯಮಾಡಿ ನಡೆಯುವಂತಿಲ್ಲ. ದೇಶದಲ್ಲೆಲ್ಲ ಅಸ್ವಸ್ಥತೆ ಇದ್ದ ಸಮಯದಲ್ಲಿ ಭಾರತದ ಸಂಪೂರ್ಣಸ್ವತಂತ್ರತೆಯನ್ನು ಬೇಡುವ ವಿಷಯದಲ್ಲಿ ಜನರನ್ನು ಹುರಿದುಂಬಿಸುವ ಭಾಷಣಗಳನ್ನು ಆರೋಪಿಯು ಮಾಡಿದ್ದಾನೆ. ಮತ್ತು ಬ್ರಿಟಿಶ ಸಾಮ್ರಾಜ್ಯ ಹಾಗೂ ಅವರ ಸತ್ತೆಯನ್ನು ಬುಡಮೇಲು ಮಾಡಲಿಕ್ಕೇಬೇಕು, ಹೀಗೆ ಮಾಡಿದರೇನೇ ಸ್ವಾತಂತ್ರ್ಯ ಸಿಗುವದು. ಬ್ರಿಟಿಶ ಸರಕಾರದಲ್ಲಿ ಖಿಲಾಫತ ಮತ್ತು ಪಂಜಾಬ ಇವುಗಳ ವಿಷಯಗಳಲ್ಲಿ ನ್ಯಾಯವು ಎಂದಿಗೂ ಸಿಕ್ಕಲಾರದು ಎಟ್ಟಿನಮೇಲೆ ಸರಕಾರದ ಮೇಲಿನಿಷ್ಠೆಯು. ಅನಿಮಾಸನ್ನಾಗುವ ಯುದ್ಧವನ್ನು ಮಾಡುವದರಿಂದ ಕ್ರಿ. ಪ್ರೊ, ಕೋಡಿನ ೧೨೧ ಅ ಕಲಮು ಸಮವಾಗಿ ಲಾಗು ಹೇಳುತ್ತದೆ. ಇನ್ನು ೧೨೧ ನೇ ಕ, ವಿಷಯವಾಗಿ ಹೇಳುವದಾದರೆ ಆರೋಪಿಯು, ಕಾಂಗ್ರೆಸ ಸಭೆಯಲ್ಲಿ ಅವನು ಮಾಡಿದ ಭಾಷಣದಲ್ಲಿ ಸಂಪೂರ್ಣ ಸ್ವತಂತ್ರತೆಯನ್ನಷ್ಟೇ ಬೇಡುವನು. ಅದರೆ ಮುಸ್ಲಿಮಲೀಗದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದಾಗ್ಗೆ ಮಾಡಿದ ಭಾಷಣದಲ್ಲಿ ಸ್ವತಂತ್ರ ಸರಕಾರವನ್ನೇ ಸ್ಥಾಪಿಸಿ ಸರಕಾರದ ಕರ್ತವ್ಯವನ್ನು ನಾವೇ ಇನ್ನು ಮೇಲೆ ನಡಿಸತಕ್ಕದ್ದು, ಇದೇನು ಶಾಂತತೆಯ ಮಾರ್ಗದಿಂದ ಸಾಧಿಸುವ ಮಾತಲ್ಲ. ಈ ರೀತಿ ಮೊದಲು ಮಾತಾಡಿ ಆ ಮೇಲೆ ಒಂದು ವೇಳೆ ಸರಕಾರವು ದಡಪಡಶಾಹಿಯನ್ನು ಶುರುವು ಮಾಡಿದ್ದೇರೆ ಅಥವಾ ಲಷ್ಕರೀ ಕಾಯ್ದೆಯನ್ನು ಉಪಯೋಗಿಸಿದರೆ ಮುಸಲ್ಮಾನರು ಮುಖ್ಯವೆಂದು ಗನಿಮಿ ಕಾವ್ಯದ ಲಢಾಯಿಯನ್ನೇ ಪ್ರಾರಂಭಿಸಬೇಕು. ಮತ್ತು ಸಿಕ್ಕ ಸ್ಥಳದಲ್ಲಿ ತಾರ ಹೊಡೆಯಬೇಕು. ಅಥವಾ ಅವರನ್ನು ನರಕದ ಕುಂಡದಲ್ಲಿ ನೂಕಬೇಕು ಮುಂತಾದ ಚಿಥಾವಣಿದ ಶಬ್ದಗಳನ್ನು ಪ್ರತಿಪಾದಿಸಿದರು. ಹೀಗೆಂದು ಆರೋಪಿಯು ಮೇಲೆ ದೋಷಾರೋಪಣೆ ಮಾಡುವದಲ್ಲಿ ಯೇನೂ ಕಡಿಮೆ ಮಾಡಲಿಲ್ಲ. ಒಂದು ವೇಳೆ ಆ ಪದೇಶದ [illegible] ಇದರಿಂದ ಖಂ [illegible]

ಹಾಯಕೋರ್ಟಿನಲ್ಲಿ ನಡೆದ ವಿಜಯದ ವಿಚಾರಣೆ.

—o:(·)(o)(:)o—

ಸಾರ್ವಭೌಮ ಚಕ್ರವರ್ತಿಗಳ [illegible]
ಮುಂಬೈ [illegible] ಹಾಯಕೋರ್ಟಿನ
ಕ್ರಿಮಿನಲ್ ಅರ್ಜಿ ನಂ- ೧೦೩ ಸನ್ ೧೯೨೨ ಇಸ್ವಿ.

[illegible]

೧ [illegible]

[illegible]

ಮುಂಬೈ [illegible]
೧೨-೫-೧೯೨೨ [illegible] ಸರಕಾರೀ ವಕೀಲರ ಕಚೇರಿ
ಹಾಯಕೋರ್ಟ
[illegible]
ಎಸ್. ಎಸ್. [illegible]
[illegible]
ವಿಜಯ ತಾ- ೧೩-೨-೧೯೨೨ ಇಸ್ವಿ

- o—o—

[illegible] - ಮಿಸ್ಟರ್ - ಶಿವಲಿಂಗಪ್ಪ ಇವರ [illegible]

— o—

[illegible]

—— -c ——

[illegible]

[illegible]

* * * * *

[illegible]

[illegible]

——(೨)——

[illegible]

……

ಸ್ವಾರ್ಥತ್ಯಾಗವೂ ಸ್ವರಾಜ್ಯವೂ.

——o——

[illegible]

ರಾಜ- ಪ್ರಜೆಗಳಲ್ಲಿಯ ಮತಭೇದವು ದೂರಾಗುವ ಬಗೆ.

—o—o—

ರಾಜ- ಪ್ರಜೆಗಳಲ್ಲಿಯ ಮತಭೇದವನ್ನು ತೆಗೆದೊಗೆಯುವದುಬಹು ದುಸ್ತರವಾದದ್ದು. ರಾಜರು ಬಹುಶಃ ವಿಷಯಲೋಲುಪರು. ಶ್ರೀಮಂತಿಕೆಯಲ್ಲಿ ಉರುಳಾಡುವವರು. ಲಕ್ಷ್ಮೀವಶರಾದ್ದರಿಂದಲೋ ಏನೋ ವಿಶೇಷತಃ ಚಂಚಲ ಸ್ವಭಾವದವರು. ಜನತೆಯನ್ನಂತೂ ಕಂಡು ಅರಿಯರು ಆ ಶಾಸತ್ರಯುಗಳ ಕಲ್ಪನೆಯೋ ಅವರಿಗಾಗದು. ಅವರ ಸುತ್ತಲಿನ ಪ್ರಭಾವಳಿಯ ವರ್ಗವೂ ರಾಜರ ಮನಸಿನ ಒಲವಿನಂತೆ ಗೋಣುಹಾಕುವವರು. ಹಾಗಾಗಬಿದ್ದಲ್ಲಿ ರಾಜರ ಅವಕೃಪೆಗೆ ಗುರಿಯಾಗಬೇಕಾಗುವದು. ಅವಕೃಪೆಗೆ ಪಾತ್ರರಾಗದೆ ಕೃಪೆಗೆ ಪಾತ್ರರಾಗಬೇಕೆಂಬುವೇ ಆ ಪ್ರಭಾವಳಿಯ ಮಂಡಳದಲ್ಲಿರುವವರೆಲ್ಲರೂ ಬಯಸುವದು. ಅಂತೇ

ಹೌಗಪ್ಪನ ಚಾವಡಿಯಲ್ಲಿ ಹೌಗಪ್ಪ!
ಅಲ್ಲಪ್ಪನ ಚಾವಡಿಯಲ್ಲಿ ಅಲ್ಲಪ್ಪ!

ಎಂಬಂತೆ ಪ್ರಭಾವಳಿಯ ವರ್ಗವಲ್ಲವೊ ತನ್ನ ವರ್ತನವನ್ನಿಟ್ಟಿರುವರು. ನಿಷ್ಪಕ್ಷಪಾತ ಮಂಡಳಿಯು ಪ್ರಭಾವದಲ್ಲಿ ಸೇರುವದೇ ಮೊದಲು ಕಠಿಣ. ಸೇರುವರೆ ಅಲ್ಲಿ ಉಳಿಯುವದಂತೂ ತೀರ ಕಠಿಣ. ಉಳಿದರೂ ಕೂಡಾ ಪ್ರಭಾವಳಿಯಲ್ಲಿ ಅವರ ಅಟಿಸಾಗುವದಂತೂ ಕಠಿಣಾತಿ ಕಠಿಣ. ಸದ್ಯದ ಸುಧಾರಣಾಯುಗದಲ್ಲಿ ವ್ಯಕ್ತಿಗತಃ ರಾಜನಿರದಿದ್ದರೂ ಪ್ರೆಸಿಡೆಂಟರೆಂಬ ಹೆಸರಿನಿಂದ ಅಥವಾ ಇನ್ನಾವದಾದರೂ ಹೆಸರಿನಿಂದ ಆ ಸ್ಥಾನವು ಇದ್ದೇ ಇರುವದು. ಸ್ಥಾನವು ಇತ್ತೆಂದಬಳಿಕ ಪ್ರಭಾವಳಿಯು ಇರಲೇ ಬೇಕು

ಪ್ರಭಾವಳಿಯು ಯಾವಾಗಲೂ
ತನ್ನ ಮೋಳಿಗೆಯನ್ನು ತುಪ್ಪದಲ್ಲಿ
ಚಲ್ಲಿಕೊಳ್ಳುವ ಪ್ರಯತ್ನಮಾಡುವದು ಸಹಜವೇ!

ಹೀಗಾಗಿ ರಾಜನಾಗಲಿ, ಆ ಹೆಸರಿನ ಬೇರೊಂದು ವ್ಯಕ್ತಿಯಾಗಲಿ, ಸುತ್ತಲಿನ ಪ್ರಭಾವಳಿಯೊಳಗ [illegible] ಯಲೇಬೇಕೆಂಬ ಗ್ರಹಿಕೆಯಿಂದ ಯುಕ್ತಾಯುಕ್ತ [illegible] ರಾವರು. ಅವರಿಗೆ ತಾವೇನುಮಾಡುವೆವು? ಇದರ ಪರಿಣಾಮವೇನಾಗುವದೆಂಬ ಅರಿವಿರುವದು ಅಸಂಭವವು. ಅರಿವಿದ್ದರೂ ಕೃತಿಯಿಂದಾಗುವದು ತೀರಾ ಅಸಂಭವವು. ಪ್ರಜೆಗಳು ತಮ್ಮ ಕಷ್ಟಗಳನ್ನು ದೂರಮಾಡಿಕೊಳ್ಳಲು ಯತ್ನಿಸತಕ್ಕವರೇ!

ಪ್ರಜೆಗಳಿಗೆ ತೊಂದರೆಗಳು ಹೆಚ್ಚು. ಅವನ್ನು ಅವರು ದೂರಮಾಡಿಕೊಳ್ಳಲು ಯತ್ನಿಸಲಿಕ್ಕೇಬೇಕು. ಹಾಗಾಗದಿದ್ದರೆ ಅವರ ದೈನ್ಯ ತೀರ. ಬೇಳೆಯೇ ಬೇಯ್ಯುವಹಾಗಿಲ್ಲ.

ಅವರು ಸದಾ ದುಃಖಿಗಳಾಗಿಯೇ ಇರಬೇಕಾಗುವದು. ಪ್ರಜೆಗಳು ತಮ್ಮ ದುಃಖದ ಸ್ಥಿತಿಯನ್ನು ದೂರಮಾಡಿಕೊಳ್ಳಲೆತ್ನಿಸುವದು ಸ್ವಾಭಾವಿಕವೇ ಸರಿ. ಪ್ರಜೆಗಳ ಈ ಕೋರಿಕೆಯು ಕೈಗೂಡಿದರೆ ಪ್ರಭಾವಳಿ ಸಹಿತವಾದ ಮಂಡಳಿಗೆ ಸಮಾಧಾನವಾಗುವ ಬಗೆಯೆಂತು? ಅದಕ್ಕಾಗಿ ಪ್ರಭಾವಳಿಯ ವರ್ಗವು ಮನಸುಟ್ಟಿ ಪ್ರಯತ್ನಮಾಡುವದು. ಈ ಪ್ರಸಂಗವು ಬಂದೊದಗಿದಾಗಲೇ ರಾಜ- ಪ್ರಜೆಗಳಲ್ಲಿ ಮತಭೇದವುಂಟಾಗುವದು.

ಈ ಮತಭೇದವು ಪರಸ್ಪರ ಪ್ರೇಮವು ಬೆಳೆಯದ ಹೊರತು ದೂರಾಗಲಾರದು ಅದಕ್ಕಾಗಿ ಅರಸರಾಗಲಿ, ಅವರ ಪ್ರಭಾವಳಿಯ ಮಂಡಳಿಯಾಗಲಿ ಯಾವಾಗಲೂ ಪ್ರಜೆಗಳ ಹೀನಸ್ಥಿತಿಯನ್ನೂ, ಅವರ ದುರವಸ್ಥೆಯನ್ನೂ ಅವರ ಪಾರತಂತ್ರ್ಯತೆಯನ್ನೂ, ಸಾಂಪತ್ತಿಕ ಸ್ಥಿತಿಯನ್ನೂ ದೂರ ಮಾಡಲೆತ್ನಿಸಬೇಕೇ ಹೊರತು ಪ್ರಜೆಗಳ ಆಕಾಂಕ್ಷೆಗಳನ್ನು ಮುರಿದು ಮೂಲೆಗೊತ್ತಿದರೆ, ರಾಜರ ಹಾಗೂ ಅವರ ಪ್ರಭಾವಳಿಯ ಮಂಡಳಿಯ ಮತಭೇದವು ದೂರಾಗುವದೆಂತು? ಹಾಗೆ ಮಾಡದೆ, ಅಧಿಕಾರ ಬಲದಿಂದಾಗಲಿ, ಶಕ್ತಿಸಾಮರ್ಥ್ಯದಿಂದಾಗಲಿ, ದಬ್ಬಾಳಿಕೆಯಿಂದಾಗಲಿ, ರಾಜಪ್ರಜೆಗಳ ಮತಭೇದವು ದೂರಾಗದೆ, ಮತ್ತು ಮತ್ತೂ ಪ್ರಜೆಗಳ ಅಸಂತೋಷವು ಹೆಚ್ಚುತ್ತಲೇ ಹೋಗುವದು ಅವರಲ್ಲಿ ರಾಜರ ಹಾಗೂ ಅವರ ಪ್ರಭಾವಳಿಯ ಮಂಡಳಿಯ ಮೇಲಿನ ವಿಶ್ವಾಸವು ಹಾರುವದು. ಅರಸರನ್ನು ಕಂಡರೆ ಪ್ರಜೆಗಳು ತಿರಸ್ಕಾರ ಬುದ್ಧಿಯನ್ನೇ ವ್ಯಕ್ತಮಾಡುವರು. ಅದಕ್ಕಾಗಿ ಅಧಿಕಾರವರ್ಗವು ಯಾವಾಗಲೂ ಪ್ರಜೆಗಳ ಹಿತಕ್ಕೆ ಯತ್ನಿಸಬೇಕಲ್ಲದೆ, ಅಹಿತಕ್ಕೆ ಯತ್ನಿಸಕೂಡದು. ಪ್ರಜೆಗಳಾದರೂ ಅಧಿಕಾರೀ ವರ್ಗವು ಒಂದು ವೇಳೆ ಅಜ್ಞಾನದಿಂದಾಗಲಿ, ತಮ್ಮ ಅಧಿಕಾರಕ್ಕೆ ಕುಂದು ಬರುವದೆಂದಾಗಲಿ, ಯಾವದೇ ಕಾರಣದಿಂದಾಗಲಿ, ತಮ್ಮ ಬೇಡಿಕೆಗಳನ್ನು ಪೂರ್ಣಮಾಡದಿದ್ದರೆ ಆ ಬೇಡಿಕೆಗಳು ಪೂರ್ಣವಾಗುವವರೆಗೆ, ಅಧಿಕಾರೀ ವರ್ಗಕ್ಕೆ ತಿಳಿಯುವ ಹಾಗೆ ಚಳವಳಿಯನ್ನು ನಡೆಯಿಸಲೇ ಬೇಕು ಅದಕ್ಕಾಗಿ ಸ್ವಾರ್ಥತ್ಯಾಗವನ್ನು ಮಾಡಿ ಸಾಧ್ಯವನ್ನು ಸಾಧಿಸಿಕೊಳ್ಳಲೇಬೇಕು. ಹಾಗೂ ಈ ಪ್ರಸಂಗದಲ್ಲಿ ಪ್ರಜೆಗಳು ತಮ್ಮ ಬೇಡಿಕೆಗಾಗಿ ಯಾವ ತರದ ಹಿಂಸಾ ಕೃತಿಯನ್ನೂ ಯತ್ನಿಸಕೂಡದು. ಯಾಕೆಂದರೆ ಅದರಿಂದ ಒಂದು ವ್ಯಕ್ತಿಯ ಸ್ಥಳದಲ್ಲಿ ಮತ್ತೊಂದು ವ್ಯಕ್ತಿಯೇ ಬರುವದೇ ಹೊರತು ಅವರ ಬೇಡಿಕೆಗಳು ಕೈಗೂಡಿ ಬರಲಾರವು. ಹಾಗೂ ಉಚ್ಚಿಗದ್ದ ಅಧಿಕಾರೀ ವರ್ಗವು ಮೂಲಕಾರಣವನ್ನು ಶೋಧಿಸಲಿಕ್ಕೆ ಯತ್ನಿಸದೆ ನಿಸ್ಸ್ತ್ರರಾದ ಪ್ರಜೆಗಳ ಮೇಲೆಯೇ ಹರಿಹಾಯ್ದು ನಿಷ್ಕಾರಣವಾಗಿ ಹಾನಿಯನ್ನುಂಟು ಮಾಡುವದು.

ಹೀಗೆ ಮಾಡದೆ ಸಮಯದಲ್ಲಿ ರಾಜ-ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದ ಜನರದೊಂದು ವಿಚಾರ ಸಭಾ ಕಮಿಟಿಯಿಂದ ಇಬ್ಬರೂ ತಮ್ಮ ವರ್ತನವನ್ನು ಸುಧಾರಿಸಿಕೊಳ್ಳಲೇಬೇಕು. ರಾಜಪ್ರಜೆಗಳ ಮತಭೇದದಿಂದ ಇಬ್ಬರಿಗೂ ಸುಖವಿಲ್ಲ. ದೇಶಕ್ಕೆ ಲಾಭವಿಲ್ಲ. ಈ ವಾದದಲ್ಲಿ ಕಲ್ಯಾಣ ಸುದ್ದಿಯೇ ಇಲ್ಲ. ಅದಕ್ಕಾಗಿ ರಾಜರೂ ಪ್ರಜೆಗಳೂ ಕೂಡಿಯೇ ಅಸಂತೋಷದ ಕಾರಣಗಳನ್ನು ಶೋಧಿಸಿ ತಗೆಯಲಿಕ್ಕೆ ಪ್ರಯತ್ನ ಮಾಡಿದರೇ ಮತಭೇದವು ದೂರಾಗುವದು. ಇಲ್ಲವಿದ್ದರೆ ದಿನಕೊಂದು ಸರಿಯಾಗಿ ಬೆಳೆಯುತ್ತ ಹೋಗಿ ರಾಷ್ಟ್ರಕ್ಕೇ ಭಯಂಕರವಾದ ಹಾನಿಯಾಗುವದು.

* * * * *

ಪಂಜಾಬ [illegible] ಯಪದ್ದು

ಅಂ [illegible]

[illegible] ಯದ ಪ್ರಾ [illegible]

ಪಂಜಾಬ [illegible] ಕಾರಣದ ಸ [illegible] ಯಿದಂತಾಯಿತು.

ಜಾಣರೂ ಮತ್ತುಂತಿಕನ್ಮಾಸತ್ತಿನ ಹಾವೃತ್ತೀ-ಸ್ಥಿತಿಯನ್ನು ಹೇಗೆ ಸುಧಾರಿಸಬೇಕೆಂದ [illegible] ತರ್ಕಶಾಲಿಗಳೂ ಇದ್ದದ್ದು ಇಲ್ಲಿಯವರೆಗೆ ಹಿಂದುಸ್ಥಾನಕ್ಕೆ ಗೊತ್ತಾಗಿದ್ದರೆ ಇವರನ್ನು ಹಿಂದುಸ್ಥಾನದಿಂದ ಅಟ್ಟಿರೆಂದು ಯಾರೂ ಅನ್ನುತ್ತಿದ್ದಿಲ್ಲ. ಇವರು ವಿಲಾಯತಿಯಲ್ಲಿ ಕುಳಿತುಕೊಂಡು ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿಯನ್ನು ಹೇಗೆ ಸುಧಾರಿಸಬೇಕೆಂಬ ಕೆಲವು ಸೂಚನೆಗಳನ್ನು "ಡೇಲಿ ಟೆಲಿಗ್ರಾಫ" ಪತ್ರದಲ್ಲಿ ಕೊಟ್ಟಿದ್ದಾರೆ. ಅವರು ಹಿಂದುಸ್ಥಾನದ ಜನರ ಮೇಲೆ ಸಧ್ಯದ ಕರಗಳಿಗಿಂತ ಕಡಿಮೆ ಕರವಿರುತ್ತದೆಂದು ಉಲ್ಲೇಖಿಸಿರುತ್ತಾರೆ. ಇವರ ಪರದೇಶದ ಸ್ಥಿತಿಯು ಹಿಂದುಸ್ಥಾನದಗಿಂತ ಎಷ್ಟು ಪಟ್ಟು ಹೆಚ್ಚಿಗಿರುತ್ತದೆಂದು ಸ್ವಲ್ಪ ವಿಚಾರವು ಇವರ [illegible] ಸ್ವಲ್ಪ ವೇಳೆ ನೆಲೆಸಬೇಕಾಗಿತ್ತು. ಒಬ್ಬ ಹಿಂದು ಮನುಷ್ಯನ ಒಂದು ವರ್ಷದ ಸರಾಸರಿ ಉತ್ಪನ್ನವು ೩೦ ರೂಪಾಯಿಗಿಂತ ಹೆಚ್ಚು ಇರುವದಿಲ್ಲ, ಆದರೆ ಅದೇ ವಿಲಾಯತಿಯಲ್ಲಿಯ ಒಬ್ಬ ಮನುಷ್ಯನ ಸಾಧಾರಣ ಉತ್ಪನ್ನವು ೪೦೦ಗಿಂತ ಹೆಚ್ಚು ಇರುತ್ತದೆ. ಇದು ಅಲ್ಲದೆ ಹಿಂದುಸ್ಥಾನದ ಮೇಲೆ ಸಾಲವನ್ನು ಹಾಕಿರುತ್ತದೆ ಇದನ್ನೆಷ್ಟು ಈ ದೊಡ್ಡ ಸಾಹೇಬರು ವಿಚಾರ ಮಾಡಿ ತಮ್ಮ ಅಭಿಪ್ರಾಯಗಳನ್ನು ಬರೆದಿದ್ದರೆ ಇವರ ಪಾಂಡಿತ್ಯವು ನಗೆಗೆ ಈಡಾಗುತ್ತಿದ್ದಿಲ್ಲ ಅಂತೂ ಈ ಬಗೆಯ [illegible] ದ ಈ ಕಾರಭಾರವನ್ನು ಬಿಡುವದೇ ಉಚಿತವು.

ಕಾಟಿಕಸವು ಮಾಡುವದು ಮೋಡಕಾ
ಬಬ್ಬೂರದ ವ್ಯಾಪಾರದಂತೆ

ಗಣಿತಶಾಸ್ತ್ರಜ್ಞರೂ ಮತ್ತು ತರ್ಕಜ್ಞಾನಿಗಳೂ ಒಂದೇ ಸ್ಥಳದಲ್ಲಿ ಸ್ವಲ್ಪ ವೇಳೆ ಕುಳಿತರಾಗಿ ತಮ್ಮ ತಲೆಗಳೊಳಗಿನ ಎಲ್ಲ ಬುದ್ಧಿಯನ್ನು ಕೂಡಿಸಿ ಹಿಂದುಸ್ಥಾನದ ಲಷ್ಕರಿ ಖರ್ಚಿನ ಬಗ್ಗೆ ಸ್ವಲ್ಪ ವಿವೇಚನೆ ಮಾಡಿದರೆ ಚನ್ನಾಗಿ ತಿಳಿಯುವದು. ಒಬ್ಬಾಯೂರರಂಥ ದೊಡ್ಡ ಸಾಹೇಬರಿಗೆ ಇಲ್ಲಿಯ ಲಷ್ಕರೀ ಖರ್ಚು ಕಡ್ಡಿಯಂತೆ ತೋರುತ್ತಿರಬಹುದು. ಈ ದೇಶದ ಉತ್ಪನ್ನ, [illegible] ಮತ್ತು ಲಷ್ಕರೀ ಖಾತೆ ಇವು ತಲೆಯಲ್ಲಿ ಸೇರದೆ ಹಾಳು ಸುಣ್ಣದಿಂದ ತುಂಬಿದ ತಲೆಗಳು ಮಾತ್ರ ಬೇಕಾಗಿರುವದಿಲ್ಲ. ಇವುಗಳ ಸಂಬಂಧಿ ವಿಚಾರಣೆಯ ಕುರಿತೆಂದು ನೇಮಿಸುವ ನಾಗರೀಕ ಕಮಿಟಿಗಳಾದರೂ ಬೇಕಾಗಿರುವದಿಲ್ಲ. ಈ ಕಮಿಟಿಗಳು ಉದಯವಾದ ತಾರೀಖು ಮಾತ್ರ ಗೊತ್ತಾಗುವದು ಹೊರ್ತಾಗಿ ಇವುಗಳ ಠರಾವು ಮಾತ್ರ ಗೊತ್ತಾಗುವಂತೆ ಇಲ್ಲ. ಒಂದು ವೇಳೆ ಠರಾವುಗಳು ಬಂದರೂ ಕೂಡ "ಮೋಡಕಿ ಬಬ್ಬೂರದವರು ಬಿಡಿಯಗಿಂತ ಮೊದಲೇ ಕಿಮ್ಮತ್ತು ಹೆಚ್ಚು ಹೇಳುವರು ಮತ್ತು ಜಾಣರಾದ ಗ್ರಾಹಕರು ಸ್ವಲ್ಪ ದರವನ್ನು ಇಳಿಸಿಕೊಳ್ಳಬಹುದು. ಆದರೆ ಅವರಿಗೆ ಮಾತ್ರ ಯೋಗ್ಯ ಕ್ರಯವು ದೊರಕದೇ ದೊರೆಯುವದು. ಇದರಂತೆಯೇ ಸರಕಾರದವರು ಖಾತೆಗಳ ಖರ್ಚ ಮೊದಲೇ ಹೆಚ್ಚಿಗ ಈ ಕಮಿಟಿಗೆ ತೋರಿಸುವದು ಮತ್ತು ಇವರು ಕಡಿಮೆ ಮಾಡಿ ಅದರಲ್ಲಿ ಕಾಟಿಕಸರ ನವಾಗುವದು ಮೋಡಕಿ ಬಬ್ಬೂರದ ವ್ಯಾಪಾರದಂತೆಯೇ ಇರುವದು. (ವಿಚಾರಕರ)

ಹೆಂಡದ ಕಮಿಟಿ.

—o—

ಸರಕಾರದಿಂದ ನೇಮಿಸಲ್ಪಟ್ಟ ಹೆಂಡದ ಕಮೀಟಿಯಲ್ಲಿ ಸರಕಾರಪಕ್ಷದಿಂದ ಬಂದ ಸಾಕ್ಷಿದಾರರೆಲ್ಲ ಮದ್ಯಕ್ಕೆ ಪ್ರತಿಬಂಧ ಮಾಡಬಾರದೆಂಬ [illegible] ಕ್ಕೆ ಹೋದಿಸಿರುವರು ಆದರೆ ಅವರ ಅಭಿಪ್ರಾಯದಂತೆ ಅನುಭವಿಕರಲ್ಲಿಯೂ ಕೂಡಾ ಮದ್ಯ ಪ್ರತಿಬಂಧಕ್ಕೆ ಯಾರೂ ಅಡ್ಡಿಮಾಡಲಿಲ್ಲ. ದೊಡ್ಡ ಉತ್ಪನ್ನವು ಕಡಿಮೆಯಾಗಿ ಖರ್ಚಿಗೆ ತೊಂದರೆಯಾಗುವದು. ಈ ಉಳಿ ಹನೆಯಲ್ಲಿ ಕರ ಹಾಕುವದನ್ನು ಬಿಟ್ಟರೆ ಬಿಡ [illegible] ಮೊದಲಾದ ನಿರರ್ಥಕ ಮುದ್ದೆಗಳನ್ನು ಅಂತೂ ಇಂತೂ ಮುಂದೆ ಮಾಡುತ್ತಿದ್ದಾರೆ. ಅಮೇರಿಕಾ ದೇಶದಲ್ಲಿ ಮದ್ಯಪ್ರತಿಬಂಧವಾಗಿದ್ದರೆ ಇಲ್ಲಿಯೂ ಯಾಕಾಗಬಾರದು? ಹಿಂದಿನ ಜನರು ದಮ್ಮಿನಿಂದಲೇ ಅದನ್ನು [illegible] ದ್ದಾರೆ. ಈಗಿನ ಪರಿಗುಡದ ತನ್ನದ ಭರ [illegible] ಗಣಂಗಗಳ ಸುರೆಪಾನ ಹಾಗೂ ಬಡಜನರ ದಾಸತ್ರಯುಗಳಿಂದಲೇ ಪ್ರತಿನಿತ್ಯ ಅದೇ ಗಣಂಗಗಳು ಇಲ್ಲದಂತಾದರೆ ಕುಡಿಯುವ ಭಗ [illegible] ಯಾತು? [illegible] ತವೂ ಇದಕ್ಕೆ ಪ್ರತಿಕೂಲವಿಲ್ಲ [illegible] ಜನಸ [illegible] ಬಂದಿದ್ದರೆ ಹಿಡಿದು ಬಂದಾಗಲೂ ಉತ್ಪನ್ನ ಕಡಿಮೆಯಾಗುವದೆಂದು ಸ್ಮೃತರನ್ನ ತರೆಕುಡಿಯ ಪತ್ನಿ ವಿಷ್ಟು ಇವನಿದೇವದ ನ್ಯಾಯವು? ಉತ್ಪನ್ನ ಕಡಿಮೆ ಆದರೆ ಬಿಸ್ತರೀ ಖರ್ಚನ್ನು ಇಳಿಸಿ. ದೈಶದಲ್ಲಿ ಸಾಂಪತ್ತಿಕ ಸ್ಥಿತಿಯು ಹೆಚ್ಚು ಹಾಗೆ ಮಾಡಿರಿ. ಅಂದರೆ ಕಾಲುವೇಸುನಂತೆ ಅವರು ಬೇಕಾದಾಗ ಬೇಕಾದಷ್ಟು ಹಣವನ್ನು ಕೊಡುವರು.

ಮುಳಶೀ ಸತ್ಯಾಗ್ರಹ
ಸೇನಾಪತಿಯ ಮೇಲಿನ ಖಟ್ಲೆ

—o—

ಮುಳಶೀ ಸತ್ಯಾಗ್ರಹ ಮಂಡಳಿಯ ಸೇನಾಪತಿಗಳಾದ ಶ್ರೀ ತಾತ್ಯಾ ಸಾಹೇಬ ಕರಂದೀಕರರ ಖಟ್ಲೆಯು ೧೯ನೇ ತಾರೀಖಿಗೆ ಇತ್ತು. ತಾತ್ಯಾ ಸಾಹೇಬರು ತಮ್ಮ ತರ್ಫೆಯಲ್ಲಿ ಶ್ರೀ. ಎ. ಎಸ್. ಬಾಪಟರು ಬರಬೇಕೆಂದು ಹೇಳಿರುವರು. ಅವರ ತರ್ಫೆಯಲ್ಲಿ ಶ್ರೀ. ವಾಸುದೇವರಂತೆ ತಾತ್ಯಾಸಾಹೇಬರ ಖಟ್ಲೆಯಲ್ಲಿ ಹೆಸರು ಪಡೆದಿದ್ದಲ್ಲ ಮುಗಿದ ಬಳಿಕ ಖಟ್ಲೆಗೆ ಪ್ರತಿಬಂಧವೇಕೆಂದು ಕೇಳಿ, ಮಹಾಲ್ಯೇ ಬನರ ಒಡೆಯರುಗಳು ಅವರ ಪರದಲ್ಲಿ ಉಳಿಯಬೇಕು. ಖಟ್ಲೆಗೆ ಪ್ರತಿಬಂಧವಾಗಬೇಕು ಎಂದು ಹೇಳಿದರು. ಆ ಬಳಿಕ ಪೋಲೀಸರ ಕಡೆಯ ಸಾಕ್ಷಿಗಳಾದ ಬಳಿಕ ಡಾ ಪಳಪುಳಿಯವರ ಖಟ್ಲೆಯು ನಡೆಯಿತು. ಅಂದೇ ಅವರಿಗೆ ಸಮನ್ಸು ಆಗಲೂ ಆಗಿತ್ತು. ಫೋ. ರ ಸಾಕ್ಷಿ-ಪುರಾವೆಗಳಾದವು ನಾಲ್ಕಾರು ದಿವಸಗಳಲ್ಲಿ ಖಟ್ಲೆಯ ನಿರ್ಣಯವು ಹೊರಬೀಳುವದದೆ.

* * * * *

ತುರಂಗ ದಂಗೆಯಿಂದಾದ ಹಾನಿ.

—o—

ಕಲಕತ್ತಾ ಪ್ರೆಸಿಡೆನ್ಸಿ ಜೇಲಿನ ಕೈದಿಗಳ ಮೊದಲಾಟದಲ್ಲಿ "ಗೋದಾವ್ರನ" ಭಸ್ಮೀಭೂತವಾಯಿತು ಕೆಲಸವೆಲ್ಲ ಬಂದು ಬಿದ್ದಿದೆ. ಗೋಲೀಬಾರಿನಲ್ಲಿ ೫ ಕೈದಿಗಳು ಮೃತಪಟ್ಟಿರು. ಆಸ್ಪತ್ರಿಯಲ್ಲಿ ಇಬ್ಬರು ಸತ್ತರು. ೪೨ ಜನರಿಗೆ ಗಾಯವಾಗಿದೆ. ಜೇಲರ ೫ ಬಲಸ್ಯಗೆ ಒಳಿತಾಗ ಏಟು ತಗಲಿದೆ. ಸುಪರಿಂಟೆಂಡೆಂಟರಿಗೂ ಹೊಡತ ತಗಲಿದೆ. ಇದರಿಂದ ೪ ಲಕ್ಷದ ಹಾನಿಯಾಗಿದೆ. ೧೯ ಕೈದಿಗಳು ಓಡಿಹೋಗಿದ್ದಾರೆ. ಅವರಲ್ಲಿ ಇಬ್ಬರನ್ನು ಹಿಡಿದರು. ದಂಗೆಯ ಕಾರಣವನ್ನು ಪ್ರೆಸಿಡೆನ್ಸಿ ಮ್ಯಾ [illegible] ಶೋಧಿಸ ಮಾಡುತ್ತಿದ್ದಾರೆ.

---

೧ ಲಕ್ಷ ೭೦ ಸಾವಿರದ ಹಾನಿಯು

—o—

ಅಹಮದಾಬಾದ ಮ್ಯುನಿಸಿಪಾಲಿಟಿಯ ೩೨ ಅಧಿಕಾರಿಗಳ ಮೇಲೆ ಕಾಯಿದೆಗೆ ವಿರುದ್ಧವಾಗಿ ೧ ಲಕ್ಷ ೭೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದರಿಂದ ಸ್ವಂತ ಆಸ್ತಿಗಳ ಮೇಲಿನಿಂದ [illegible] ಹಾನಿಯಾಗಿದೆ. ಹಿಂದಕ್ಕೂ ಸ್ಟೊರತ ಮ್ಯುನಿಸಿಪಾಲಿಟಿಯ ಮೇಲೆಯೂ ಇದೇ ತರದ ದಾವೆಯಾಗಿತ್ತು.

* * * * *

೧೫ ಸಾವಿರದ ಮತ್ತೊಂದು ಹಾನಿಯು.

—o—

ನಡಿಯಾದದ ಮ್ಯುನಿಸಿಪಾಲಿಟಿಯ ಸೇವಕರಲ್ಲಿ ೧೦ ಜನರ ಪಾರ್ಟಿಗಳ ಮೇಲೆ ೧೫ ಸಾವಿರ ರೂ. ಗಳನ್ನು ಕಾಯಿದೆಗೆ ವಿರುದ್ಧವಾಗಿ ಖರ್ಚ ಮಾಡಿದರೆಂಬ ನಿಮಿತ್ತವಾಗಿ ಎರಡನೇ ಹಾನಿಯು ನಡೆದಿದೆ.

ಪಾಟಣಾದಲ್ಲಿ ಗೋಲೀಬಾರು.

—o—

ಕಾಶೀರದ ರಾಜಾ ಹಾಗೂ ಅವರ ಸೈನಿಕರಲ್ಲಿ ಕೆಲವೊಂದು ಕಾರಣಕ್ಕಾಗಿ ವಾದವೆದ್ದಿತು [illegible] ಸೈನಿಕರ ವಸತಿಸ್ಥಾನದಲ್ಲಿ ಪೋ. ಸು. ರವರಿದ್ದರು. ಸೈನಿಕರು ಕೆಲವು ಗುಂಡುಗಳನ್ನು ತೆಗೆದುಕೊಂಡು ಹೋಗುವದನ್ನು ಕಂಡು ಪ್ರತಿಬಂಧಿಸಿ, [illegible] ಕೊಂಡರನ್ನು ಹಿಡಿದರು. ಆ ಸಮಯದಲ್ಲಿ ಗೋಲೀಬಾರು ಮಾಡಲಾಗಿ ಒಬ್ಬನು ಸತ್ತನು. ಇಬ್ಬರು ಗಾಯವಾದರು.

* * * * *

ಭಯಂಕರ ಸ್ಫೋಟ.

—o—

ಮೋಸಸ್ಪರ ([illegible]) ದಲ್ಲಿ ಭಯಂಕರ ಸ್ಫೋಟವಾಗಿ ಇಮಾರತಿಯಲ್ಲ ಆಗ [illegible] ದರಲ್ಲಿಯ ಅನೇಕ ಜನರೂ ಆದರ ಕೆಳಗಿದ್ದವರು [illegible] ಸಿಪಾಯರೂ ಮತ್ತು ನೂರಾರಲ್ಲಿ ಅನೇಕ ಜನರೂ ಮರಣಕ್ಕೆ ಗುರಿಯಾದರು. ಅಗ್ನಿಸ್ಫೋಟಕ್ಕೆ ಕಾರಣವೇನು?

ಪಿರುಗಾಳಿಯಿಂದ ಬಂಗಾಲದ ಎಷ್ಟೋ ಮನೆಗಳು ಹಾಳಾಗಿಹೋದವು ಉಪಾಯವೇ ಇಲ್ಲ.

ಜಪಾನದಲ್ಲಿ ವಾಸಿಸುವ ಹಿಂದವಾಸಿಗಳು ಪ್ರಿನ್ಸ್ ಆಫ್ ವೇಲ್ಸರ ಆಗಮನಕ್ಕೆ ಬಹಿಷ್ಕಾರ ಹಾಕಿರುವರು. ಅಲ್ಲಿಯೂ ಬೆನ್ನು ಬಿಡಬಾರದೆ?

ಸಂಯುಕ್ತ ಪ್ರಾಂತದ ಡಾ. ಕಟಜೂರಿಯವರು ಸ್ವತ್ತಿ ವಿಷಯಕ ಕಾಯಿದೆ ಭಂಗಕ್ಕೆ ಒಪ್ಪಿಕೊಳ್ಳುತ್ತಿರು ಇನ್ನೇನು ಮತ್ತೆ ದಬ್ಬಾಳಿಕೆಯು ನಡೆಯಲಿ.

……

ಪುಣೆಯ ಮಿ. ವಿ. ಆ. ಸುರಾಡಿಯವರು ಜಾಮೀನು ಕೊಡದೆ ೬ ತಿಂಗಳು ತುರಂಗವಾಸವನ್ನೇ ಸ್ವೀಕರಿಸಿದರು. ವಿಹಿತವೇ ಸರಿ.

ಮೋಜರ ವಿಷ್ಣುಪ್ಯಾಸು ಎಂಬ ಒಬ್ಬ ಯುರೋಪಿಯನ್ನ ಸಾಹೇಬರು ಒಡೋಲಯಲ್ಲಿ ಹಂದಿಬೇಟೆಯನ್ನು ಆಡಲಿಕ್ಕೆ ಹೋದಾಗ್ಗೆ ಕುದುರೆಯಿಂದ ಕೆಳಗೆ ಬಿದ್ದು ಅವರ ಬರ್ಜಿಯು ಅವರನ್ನೇ ಇರಿದದ್ದರಿಂದ ಮೃತಪಟ್ಟರು. ವಿಧಿಘಟನೆಯೋ ವಿಚಿತ್ರವು.

ಹಿಂದುಸ್ಥಾನದಲ್ಲಿ ಈ ವಾರದಲ್ಲಿ ೧೩ ಲಕ್ಷ ರೂಪಾಯಿಯ ಪರದೇಶೀ ಅರವಿಯು ಬಂದಿರುತ್ತದೆ. ಹೋದವರ್ಷ ಇದೇ ವಾರದಲ್ಲಿ ೨೭ ಲಕ್ಷ ರೂಪಾಯಿಯ ಅರವಿಯು ಬಂದಿತ್ತು. ಖಾದಿಯ ಮಹಿಮೆ.

ಬುಲಂದರ ಶಹರದ ಇಬ್ಬರನ್ನು ಸಂಘಸಭಾಕಾಯದೆಯಿಂದ ಹಿಡಿದು ಪಟ್ಟಣದ ಬೀದಿಯಲ್ಲಿ ಹೊರಟ ಮೆರವಣಿಗೆಗೆ ೧೪೪ ಕಲಮಿನ ಆತಂಕವಾಯಿತು. ಮೆರವಣಿಗೆ ಹೊರಟರೆ ಅಧಿಕಾರಿಗಳದೇನು ಬಿಗಡಾಗುತ್ತಿತ್ತು?

ತುಕಾರಾಮ ಕೊಡಬಿನ ಸ್ನೇಹ ಬೆಳಸದ ಹೊರತು ನಮಗೆ ಸುಖಶಾಂತಿಯು ದೊರೆಯುವದು

—೧—೦—

ಅಂತರ್ ತಾ|| ೩ ರೋಜಿ ಮೇಲ ಪತ್ರದ ವಾ ತಾರ್ದಾಯಕನು, ಫೀಲ್ಡ ಮಾರ್ಶಲ ಮಿ|| ಮಿಲ್ಲ ನ್ ಇವರಿಗೆ ಭೆಟ್ಟಿಯಾದಾಗ್ಗೆ ನಡೆಯುವದು [illegible] ದನ್ನು.

ಮಿಸ್ಸರ ಇಂಗ್ಲೀಷ ಜಾಕ್ ಇವರು [illegible] ಸ್ತಾನದ ಮತ್ತು ತುರ್ಕಸ್ತಾನ ಈ ಎರಡೂ ಸ್ಥಳಗ ಳಲ್ಲಿ [illegible] ಒದಗಿಬರತಕ್ಕ ಸಕ್ತನ್ನು ವ ತ್ತಿ [illegible] ಯುರೋಪಿನ ಸ್ಥಳ [illegible] ಪೋಲಿಸ ಭುವ ಪ್ರ ಮತ್ತು ಹಿಂದುಸ್ತಾನ ಈ ಸ್ಥಳಗಳಲ್ಲಿ ನಮಗೆ ಸು ಖಶಾಂತಿಯು ದೊರಕುವದು ಅವಶ್ಯವಾಗಿಯದೆ. [illegible] ಸ್ಥಳಗಳಲ್ಲಿ ತೀವ್ರವಾಗಿಯೇ [illegible] ವಿಷ್ಯದಿಂದ [illegible] ಕರಾರ [illegible] ಮಾಡಿ ಕೊಡುವದು ಹಿತಕರವು.

ಸಂಯುಕ್ತಪ್ರಾಂತ ಮ್ಯಾಜಿಸ್ಟ್ರೇಟರ ನ್ಯಾಯ

———(೦)———

ಶಾಲೆಯಲ್ಲಿ ಇಬ್ಬರು ಹುಡುಗರು ಓದುತ್ತಿದ್ದರು. ಅವರಲ್ಲಿ ೧೧ ವರ್ಷದ ವಯಸ್ಸಿನ ಒಬ್ಬ ಹುಡುಗನು ಕರೇ ಬಣ್ಣದ ವಸ್ತ್ರಗಳನ್ನು ಧರಿಸಿ ಕೊಂಡು ಗಾಂಧೀಜಿಯವರಿಗೆ 'ಬಹಿಷ್ಕಾರ ಕೂ ಡ ಸರಕಾರವನ್ನು ಮಾಡಿರಿ ವಿಲಾಯಿತಿಯ ಬಟ್ಟೆಗಳನ್ನೇ ಕೊಳ್ಳಿರಿ." ಎಂದು ಕೂಗುತ್ತ ಬೀದಿ ಬೀದಿಗಳ ತಿರುಗುತ್ತಲಿದ್ದನು. ಅನೇ ಮತ್ತೊಬ್ಬ ೧೨ ವರ್ಷದ ವಯಸ್ಸಿನ ಹುಡುಗನು ಖಾದ್ರಿಯ ಬಿಳಿ ಬಣ್ಣದ ಬಟ್ಟೆಗಳನ್ನು ಧರಿಸಿಕೊಂಡು "ಅಸ ಹಕಾರವನ್ನು ಮಾಡಿರಿ. ಖಾದಿಯ ಬಟ್ಟೆಗಳನ್ನೇ ಧ ರಿಸಿಕೊಳ್ಳಿರಿ" ಎಂದು ಘೋಷಿಸುತ್ತ ಬಜಾರ ಪತ್ರಿಕೆ ಗಳನ್ನು ಜಾಗ್ರತೆಗೊಳಿಸುತ್ತ ಸಂಚರಿಸುತ್ತಿದ್ದನು. ಇವರಿಬ್ಬರನ್ನು ಪೋಲೀಸರು ಹಿಡಿದು ಮ್ಯಾಜಿ ಸ್ಟ್ರೇಟರ ಮುಂದೆ ನಿಲ್ಲಿಸಿದರು. ಕೂಡಲೇ ಅವರು ಇವರಿಬ್ಬರನ್ನು ಕುರಿತು "ನಿಮಗೆ ಓಗ ಳೆಗಳೆತ್ತ ತಿಳಿಯಿತೆಂದು ಮಾಡಿದರೂ ಕಲಿಸಿದವ ರೋ ದ್ಯಾಗೆ ಎಂದು ಕೇಳಿದರು. ಅದಕ್ಕೆ ಅವರು ನ ಮಗೆ ಯಾರೂ ಕಲಿಸಿಲ್ಲ. ಎಲ್ಲೋ ಆದೇಶವುತ್ತಿ ದ್ದೆವು ಎಂದು ಹೇಳಿದರು. ಇದನ್ನು ಕೇಳಿ ಮ್ಯಾ ಜಿಸ್ಟ್ರೇಟರು ಪೋಲೀಸರನ್ನು ಕರೆದು ಈ ಹುಡುಗರ ನ್ನು ಅವರವರ ಮನೆಗೆ ಮುಟ್ಟಿಸಿ ೧೨-೧೨ ಛಡಿಯ ಶಿಕ್ಷೆ ಕೊಡಬೇಕೆಂದು ಆಜ್ಞಾಪಿಸಿದರು. ಬು ದ್ಧಿಗೆ ಬೆಲೆಯೇ ಇಲ್ಲ!

ಪತ್ರವ್ಯವಹಾರ

ಶ್ರೀಯುತ ಬುದ್ಧಿವಾದಾಚಾರ್ಯರು ತಮ್ಮ ದಕ್ಷಿಣ ದೇಶದ ಪತ್ರಿಯ ಸಂಚಾರವನ್ನು ಮುಗಿಸಿ ಕೊಂಡು, ದಕ್ಷಿಣ ದೇಶದ ಪತ್ರಿಯಲ್ಲಿ [illegible] ನಾದ ಕರ್ನಾಟಕ ಗುರುಕುಲದ ಯೋಗ್ಯ [illegible] ವ್ಯ ಮಾಡಲಿಕ್ಕೂ ಮತ್ತು ಅವರ ಸಿದ್ಧಾಂತಗಳ ನ್ನು ತಿಳಿಯ ಮಾಡುವದಕ್ಕೂ ಮತ್ತು ದೊಡ್ಡ ದೊಡ್ಡ ವಿದ್ವಾಂಸರನ್ನು ಭೆಟ್ಟಿಯಾಗಲಿಕ್ಕೂ, ಗುರು ಕುಲವು ಹ್ಯಾಗೆ ನಡೆಯಬೇಕೆಂಬದನ್ನು ವಿಚಾರ ಮಾಡಲಿಕ್ಕೂ, ಅಖಿಲ ಕರ್ನಾಟಕದ ಪ್ರವಾಸಕ್ಕೆ ಹೊರಟಿದ್ದಾರೆ. ತನ್ನಿಮಿತ್ತ ಉತ್ಸವದ ದಿವಸ ವಿ ದ್ವಾಂಸರಿಗೆ, ರಾತ್ರಿ ೮|| ಘಂಟೆಗೆ ಕರ್ನಾಟಕ ವ್ಯಾಕರಣದಲ್ಲಿ, ಪರೀಕ್ಷೆಯನ್ನೂ ಆದಂಥ ರಕಮು ಹ ವಸೂಲಿಯನ್ನು ಅದರಿಂದ ಸ್ಥಾಪಿತವಾದ ಇಲ್ಲಿಯ ಶ್ರೀ ವಿದ್ಯಾರಣ್ಯ ಪಾಠಶಾಲೆಯಕ್ಕೆ ಕೊಡುವವರಿ ದ್ದಾರೆ. ಅದ್ದರಿಂದ ಎಲ್ಲ ನಾಗರೀಕರು ಪರೀಕ್ಷೆ ಗೆ ಬರಬೇಕೆಂದು ವಿನಂತಿಯುದೆ.

ತಾ. ೬-೬-೩೩
ಸೆಕ್ರೆಟರಿ.
ವಿದ್ಯಾರಣ್ಯ ಪಾ. ಶು. ಹುಬ್ಬಳ್ಳಿ.

* * *

ಚಂದಾದಾರರಿಗೆ ವಿನಂತಿ

—(೦)—

೧ [illegible] ಬರುತ್ತಿದ್ದ [illegible]

[illegible]

ರು ಸಂಸ್ಥೆಯಡನೆ ಪತ್ರವ್ಯವಹಾರ ಮಾಡದೆ. ಫೋಸ್ಟಿ ನೊಡನೆ ಮಾಡಬೇಕು.

೩ ಹೊಸದಾಗಿ ಚಂದಾದಾರರಾಗುವವರು ಹಣ ಮನಿಯಾರ್ಡರ ಮಾಡಬೇಕಲ್ಲದೆ, ವ್ಹಿ. ಪಿ. ಯಿಂದ ಪತ್ರಿಕೆ ಕಳಿಸಲಾಗದು. ಅದ್ದರಿಂದ ಸಿ ಪ್ಯಾರದಿಂದಾಗಿ ಅರ್ಧಕಾಗದವನ್ನು ಕಳುಹಿಸಕೂಡದಾ ದರು,

೪ ಚಂದಾಹಣಗಿದ ವರ್ಗದಾರರ ಸರ [illegible] ಗಳನ್ನು ("ಅವರ ಅವರ ಪತ್ರದ ಹಿಂದುಗಡೆಯ ಲ್ಲಿದ್ದ ಅಂಗಿಗಳನ್ನು) "ಚಂದಾದಾರರಿಗೆ ಸೂಚನೆ" ಈ ಮಧ್ಯದ ಕೆಳಗೆ [illegible] ಕೊಡುವ ಗಿವದ್ದರು ಚಂದಾ ಹಣವನ್ನು ಮನಿಯಾರ್ಡರ ಮಾ ಡುವಾಗ ಕೂಪನದಲ್ಲಿ ಪತ್ರವನ್ನು ಬರೆಯಬೇಕು.

೫ ಮುಂಗಡವಾಗಲಿ, ಎಲ್ಲಾಯ [illegible] ಬಾಕಿ ಎನೆ ಚಂದಾದಾರರ ಹೆಸರಿಕೆಯು ಪ್ರಕಟ ವಾಗದು.

೬ ಇವಕ್ಕೆಲ್ಲ [illegible] ಮಾಡಿದ ವೇಳಾದಲ್ಲಿ ಬಲ್ಲಾಯ ಬಿಟ್ಟುಕೊಳ್ಳಬಾರದು

ಮ್ಯಾ ವಿ ಧಾರವಾಡ

ಉತ್ತಮ ತರದ ಮಾಲು ಕ್ರಯ ಸುಲಭ



ಮುಕ್ಕಳ ಅಹೆರಿಗೆ ಕಯ ೩.೩ ಹುಚಮಲ ಸಗ ಸಣ್ಣ ಇಸ್ಟೆ ರೂ ೧-೪-೦ ಮಧ್ಯಮ ೩-೦-೦ ದೊಡ್ಡದು ರೂ. ೪-೮-೦ ದೊಡ್ಡದು ೫-೦-೦

[illegible] ಕಾಲಿಗೆ ಕಿವಿಯ [illegible] ಹಿಂದಿನ ಸ್ವಾಮಿ ನಮಗೆ ಎಸ್. ಯು. [illegible] ಮಾರಾಟದಾರರ ಕಂಪನಿ ಬೆಳಗಾವಿ [illegible] ಕಿವಿ ಗೀತ ಬೇಕು ನಮಗೆ ತಾರಿ! ಪಿಂತಾಂಬರ, ಶೀ ರೆ, ಖಣ, ಕಚ್ಚೀದಾ [illegible], ರುಮಾಲು, ಸ್ವದೇಶಿ ಮತ್ತು ಜಾಗೆ [illegible], ಟೋಪಿ, ಗೊಲ್ಡ ಪ್ರೋಟಿನ್ ಉಂಗುರ, ಪಾಸ ಬೇಕ ಹೊಳೆ, ನ ನಾಸರಿ, ಈ ಮುಂತಾದ ಮಾಲುಗಳು ದೊರೆಯ ವೆ. ಹಾಗಾದರೆ ಬಂದಾಗ ಟಿಕೆಟು ಕಳುಹಿಸಿ ಕ್ಯಾಟ ಲಾಗು ತರಿಸಿ ನೋಡಿರಿ

ವಿಳಾಸ ಎಸ್. ಯು. ನಾರಾಯಣಾಚಾರ್ಯ ಮ ತ್ತು ಕಂಪನಿ ಚೌಕಂಬಾ, ಬನಾರಸ (ಕಾಶಿ)

……

ಅತ್ಯಂತ ಧಾರುಪೌಷ್ಟಿಕ ವೀರ್ಯವರ್ಧಕ ಕಾಮೋತ್ತೇಜಕ ಶಕ್ತಿವರ್ಧಕ ಔಷಧ.

ಈ ಔಷಧದ ಸೇವನೆಯಿಂದ ಅಕಾಲದಲ್ಲಿ (ಬಾಲ್ಯಾವಸ್ಥೆಯಲ್ಲಿ) ಬಲಾತ್ಕಾರದಿಂದ ಇಂದ್ರಿಯ ಪತನವನ್ನು ಮಾಡಿ ಉಂಟಾದ ದುರ್ಬಲತೆಯನ್ನ ಹೋಗಲಾಡಿಸಿ, ಸ್ವಾಭಾವಿಕ ಬಲವನ್ನು ಉಂಟುಮಾ ಡುತ್ತದೆ. ೧೦. ೨ ತೊಲಿಗೆ ಐದು ರೂ

ರಾಮಬಾಣ ಗುಳಿಗೆ

ಸ್ವಪ್ನದೋಷ ಇಂಥ ರೋಗವನ್ನು ಇಂದಿನ ವರೆಗೆ ಯಾರೂ ಹೋಗಲಾಡಿಸಿಲ್ಲವೆಂದು ಪ್ರತಿಜ್ಞಾಪೂರ್ವಕ ಹೇಳುತ್ತೇವೆ. ೧೦. ೧೬ ಮಾತ್ರೆಗಳು ಐವತ್ತೈದು ಗುಳಿಗೆಗಳು. ೧೦. ೩೪ ಮಾತ್ರೆಗಳು ಮತ್ತೆ ಮೂರು ತಿಂಗಳಿನ ಜುಲಾಬಿನ ಡಬ್ಬಿಗಳು

ಇವೇ ಔಷಧಿಗಳಲ್ಲಿ ಗುಣಬಾರದಿದ್ದಲ್ಲಿ ಹಣವ ನ್ನು ಮರಳಿ ಕಳುಹಿಸುವೆವು. ೩ ದಬ್ಬಿಗಳ ಪ್ರತಿ ೧೦ ಕಿರಾಣಿ ಪಾಕ

ಅಸ್ತಿಗತ ಜ್ವರವನ್ನು ಹೋಗಲಾಡಿಸಿ, ರಕ್ತ ವೃದ್ಧಿಯನ್ನು ಮಾಡುವದು. ೧ ಡಬ್ಬಿಯ ಬೆಲೆ ೨ ರೂಪಾಯಿ

ಮೂಲವ್ಯಾಧಿಯ ಔಷಧ.

ರಕ್ತಮೂಲವ್ಯಾಧಿ. ಮೋಳೆಯುಳ್ಳ ಮೂಲ ವ್ಯಾಧಿ ಮುಂತಾದ ಯಾವತ್ತೂ ತರದ ಮೂಲವ್ಯಾ ಧಿಗಳನ್ನು ಬಂದು ವಾರದೊಳಗಾಗಿ ಗುಣ ಪಡಿಸುತ್ತ ದೆ. ೧ವಾರದ ಔಷಧದ ಬೆಲೆ ೩ ರೂಪಾಯಿ

೧ ಹಿಂಗಾಷ್ಟಕ ಚೂರ್ಣ ೧೦. ೧೦ ತೊಲೆ.
೨ ಸೀತೋಪಲಾದಿ ಚೂರ್ಣ ೧೦. ೮ ತೊ

ದಂತಮಂಜನ

೧ ಡಬ್ಬಿಯ ಬೆಲೆ. ೫ ಆಣೆ. ೧ ಡ. ೬ ಡ ಬ್ಬಿಗಳು.

ಡಾ. ಎನ್. ಎಸ್. ಬೆಟಗೇರಿ
ಆಯುರ್ವೇದಿಯ ಹ್ಯಾಂಡ ಬಾಯೋಕೆಮಿಸ್ಟ

ಚಂದಾದಾರರಿಗೆ ಸೂಚನೆ

೧ ಈ ಕೆಳಗಿನ ಚಂದಾದಾರರ ಹೆಸರಿನ ಮುಂದೆ ಇದ್ದ ನಂಬರಿನ ಚಂದಾದಾರರು ತಮ್ಮ ೩-೧೨-೦ ರೂ. ಚಂದಾ ಹಣವನ್ನು ೧೯೩೩ ಜೂನ ತಿಂಗಳ ಮೊದಲನೇ ವಾರದೊಳಗಾಗಿ ಮನಿಯಾರ್ಡರ ದ್ವಾರದಿಂದ ಕಳಿಸಿ ಕೊಡದಿದ್ದಲ್ಲಿ, ಅವರ ಚಂದಾ ಹಣವು ತೀರುವರೆಗೆ ಪತ್ರವನ್ನು ಬಂದುಮಾಡುವೆವು. ವ್ಹಿ. ಪಿ. ಮಾಡಿ ಕಳಿಸಲಾಗುವದು ಸೂಚನೆಗಾಗಿ ಕಾರಣವಿಲ್ಲ ಬರೆಯಲಾಗಿದೆ.

೨ ಚಂದಾ ಹಣವನ್ನು ಮನಿಯಾರ್ಡರ ಮಾಡುವ ಚಂದಾದಾರರ ಮನಿಯಾರ್ಡರ ಕೂಪನದಲ್ಲಿ ತಮ್ಮ ಸಂಪೂರ್ಣ ವಿಳಾಸವನ್ನು ಸುವಾಚ್ಯ ಅಕ್ಷರಗಳಿಂದ ಬರೆಯಬೇಕು.

೩ ಹಾಗೆ ಸಂಪೂರ್ಣ ವಿಳಾಸವನ್ನು ಬರೆಯುವ ಚಂದಾದಾರರ ಪತ್ರವ್ಯವಹಾರಕ್ಕೆ ಅಡಚಣವಾದರೆ ಅದ ಕ್ಕೆ ನಾವು ಜವಾಬದಾರರು ಇಲ್ಲ.

ಜೂನ ಮೊದಲನೇ ವಾರದಲ್ಲಿ ಹಣ ಕಳಿಸತಕ್ಕ ಚಂದಾದಾರರು

[illegible]

ಮ್ಯಾ. ವಿ. ಧಾ.

ಪ್ರತ್ಯಕ್ಷ ಫಲ ಸಂಚ ಸಿದ್ಧಿ.

ಇದು ರಾಮಾಯಣ ದಿಗ್ದರ್ಶಕವು.

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ, [illegible], ದ್ವಾರಕಾ, ಅಯೋಧ್ಯಾ, ಜಗ ನ್ನಾಥ ಇವೇ ಆದಿಯಾದ ತೀರ್ಥಕ್ಷೇತ್ರಗಳಿಗೆ ಹೋಗಿ, ಅಲ್ಲಲ್ಲಿ ಇರುವ ಸಾಧು, ಸಂತ, ಗೋಸಾವಿ [illegible] ಗಳೊಡನೆ ಭೆಟ್ಟಿಯಾಗಿ ಅವರ [illegible] ಪ್ರತಿಯೊಂದು [illegible]

[illegible] ಮಂತ್ರ, ತಂತ್ರ, ಯಂತ್ರ [illegible] ದೇವತೆಗಳು ಪ್ರತ್ಯಕ್ಷರಾಗುವದಕ್ಕೆ [illegible] ಪ್ರಯೋಗ ಇದೆ.

[illegible] ಪ್ರಕರಣದಲ್ಲಿ ಪ್ರಸ್ತಾಪ್ಯ [illegible] ಹೊರಡುವ [illegible] ಮಾಡುವದು [illegible]

[illegible] ಸ್ವಪ್ನದ [illegible] ಮತ್ತು, ಕೆಲವು [illegible] ಅನುಭವ [illegible]

[illegible] ಮತ್ತು [illegible] ಸ್ಥಳವು ಅವರ [illegible]

[illegible] ಪ್ರಕರಣದಲ್ಲಿ [illegible] ವಿಷಯಗಳನ್ನು [illegible] ಈ ಗ್ರಂಥವು [illegible] ಎಲ್ಲ ದೇವಾನುದೇವತೆಗಳೂ ಪ್ರತ್ಯಕ್ಷ [illegible] ಮಾಂತ್ರಿಕರೂ [illegible] ಮನೆಮನೆಗಳಲ್ಲಿ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು [illegible] ನೋಡಿರಲಿಕ್ಕಿಲ್ಲ [illegible] ನೋಡಬೇಕೆಂದು ಇದರ ಬೆಲೆ [illegible] ೨-೮-೦ [illegible] ಆಣೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ, ನಾಟಕ ಕಾವ್ಯ ಕಥೆ ಗಳು ಮುಂತಾದ ಇನ್ನೂ ಅನೇಕ ಪುಸ್ತಕಗಳು ಸಿಗುತ್ತವೆ. [illegible]

ಎ ಆರ್. ಶಿವನಾಗಪ್ಪ ವಾಗ್ಲಿವಾಲ
ಹುಬ್ಬಳ್ಳಿ

ಸುಪ್ರಸಿದ್ಧ **ಶಾಂತವೀರ** ಸುವಾಸಿಕ

ದಂತಿನ ಔಷಧ	ಚೀಟು ೧೦೦ಕ್ಕೆ	೪-೩-೦	೯ ಕಸ್ತುರಿ ಮಲಮು ಡಬ್ಬಿ	೧ಕ್ಕೆ	೦-೪-೦
ದಂತಮಂಜನ	೧೦೦	೪-೩-೦	೧೦ ಗಜಕರ್ಣ ಮಲಮು ,,	,,	೦-೪-೦
ತೀರ್ಥಸಂಭವ	,,	೪-೬-೦	೧೧ ಇಸಬಿನ ಮಲಮು ,,	,,	೦-೪-೦
೩ ಜೇನಿನ ಶೀತ ನಾಶಕ ,,	,,	೧-೧೨-೦	೧೨ ವ್ರಣನಾಶಕ ಮಲಮು ,,	,,	೦-೦-೦
೯ ಕಣ್ಣು ಬೇನೆಯ ಔಷಧ ,,	,,	೧-೦-೦	೧೩ ಮುಕತೆಮೂಲವ್ಯಾಧಿಗೆ ಮಲಮು ,,		೧-೦-೦
೪ ಕ್ರಿಮಿನಾಶಕ(ಜಂತುನಾಶಕ)	,,	೪-೦-೦	೧೪ ರಕ್ತಮೂಲವ್ಯಾಧಿನಾಶಕ ಚೂರ್ಣ ,,		೧-೦-೦
೫ ಜ್ವರದ ಚೂರ್ಣ ,,	,,	೧-೦-೦	೧೫ ಜಾಡ್ಯಾಂತಕ ಗುಳಿಗೆಗಳು ,,	,,	೬-೦-೦
೬ ಪಿತ್ತಶಾಂತಿಮಾಡುವವಕ್ಕೆ	,,	೪-೦-೦			
೭ ಸ್ತ್ರೀರೋಗಕ್ಕೆ ಮತಿಷ್ಕವಿ ,,		೧-೦-೦			
ಅಕ್ಕಿಗನ್ನತುಂಬಿಕ ಗುಳಿಗೆ	,,	-೦-೦	ಪಕುಸಂಜೀವನ (ಜನದ ಔಷಧಿ) ,,		೧-೬-೦

ಸೂಚನೆ—ಪ್ರತಿಸಿದ್ಧ ಔಷಧಿಗಳು ಚೀಟುಗಳು [illegible] ಎಲ್ಲ ಪ್ರಸಿದ್ಧ [illegible] ಸಿಗುವದು. ಪಿತ್ತಕ [illegible] ೧ ದಿವಸದ [illegible] ಔಷಧ ನಮ್ಮಲ್ಲಿ [illegible] ವಳಬಹುದು [illegible] ಔಷಧವನ್ನು ಹೇಳುವದು. [illegible] ಶು. ಟಪಾಲ ಖರ್ಚು ಬೇರೆ.

ಡಾಕ್ಟರ—ಎಸ್. ಆರ್. ತಿಮ್ಮಪ್ಪ (V. D)

ಶಾಂತಪ್ರಸಾದ
ಶಾಂತವೀರ, ದಾವಣಗೆರೆ

[illegible]
[illegible]

ಜಾಹೀರ ನೋಟೀಸು.

ಯಾವತ್ತು ಜನರಿಗೆ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ—

ನಮ್ಮ ಅಂಗಡಿಯಲ್ಲಿ ಇದ್ದ [illegible] ಗುಮಾಸ್ತನಾಗಿದ್ದ [illegible] ಈತನು ನಮ್ಮ ಅಂಗಡಿಯೊಳಗಿಂದಾ [illegible] ಸಾವಿರ [illegible] ರೂಪಾಯಿಗಳ ಹಾನಿ [illegible] ಮಾಡಿ ಕೊಂಡು ಹೋಗಿರುತ್ತಾನೆ. ಈತನ್ನ ಇವನ ಮೇಲೆ ಫಿರ್ಯಾದಿಯಲ್ಲಿ [illegible] ಹೊರಗಿನವರ ಕೂಡಾ ಯಾರೂ ನಮ್ಮ ಅಂಗಡಿಯ ಹೆಸರಿನಿಂದ [illegible] ವ್ಯವಹಾರ ಮಾಡ ಬಾರದು. ಹಾಗೆ ಮಾಡಿದರೆ ಅದಕ್ಕೆ ನಮ್ಮ ಜವಾಬದಾರಿ ಇರುವದಿಲ್ಲ [illegible]

[illegible]

ಜಾಹಿರನೋಟೀಸು

[illegible] ಸಾಯಂದಿರ [illegible] ಯೊವತ್ತು [illegible] ಕುಲಕರ್ಣಿ [illegible] ಗ್ರಾಮಗಳಲ್ಲಿ [illegible] ಉಪಯೋಗಿಸಿ [illegible] ನಡೆಸಿಕೊಳ್ಳ [illegible] ಇದ್ದರೆ [illegible] ಕೂಡದು [illegible]

[illegible]
ದೇಶಪಾಂಡೆ [illegible]

ರಕ್ತಶುದ್ಧ [illegible] ಮುಗ್ಧ [illegible]

ಲವಂಗಾದಿಲೇಹ್ಯವು

ಈ ಲೇಹವು [illegible] ವಿಷಯವು ಶನಿಗೆ [illegible] ಅನೇಕ ವೈದ್ಯರು [illegible] ಬಹಳ ಸೇವಿಸಿದ [illegible] ರಕ್ತಪಿತ್ತ ಕ್ಷಯ [illegible] ಶಕ್ತಿಗಳ ನೋವು [illegible] ರಕ್ತವನ್ನು ಶುದ್ಧಗೊಳಿಸಿ [illegible] ಸಲ ತರಿಸಿ [illegible] ನೀಂದರು ವಂಚನೆ [illegible] ಪತ್ರಿಕೆಯು [illegible] ಸಂಗಡಲೇ [illegible]

[illegible] ೩-೦-೦ [illegible] ರು ೮ ೮-೦ ಡಜನ್ ಡಬ್ಬಿಗಳು ತರಿಸಿದರ ರು ೧ [illegible] ವಿಶೇಷ ಪ್ರತ್ಯೇಕ

ನಮ್ಮ ವಿಳಾಸ
ಹೆಚ್ ಯಂ ಸಿದ್ದಾಂತಿಗಳು ಬಳ್ಳಾರಿ.

---

೫೦ ರೂಪಾಯಿಗಳ ಬಹುಮಾನವು

ಸಪ್ತ ಧಾತು		ಶಕ್ತಿ
ಧಾತುಪೋಷಕ	**ಶಕ್ತಿವರ್ಧಕ**	**ಕಾಮೋತ್ತೇಜಕ.**

ಪ್ರತ್ಯಕ್ಷಾನುಭವದ
ಶತಪುಟ [illegible] ಭಸ್ಮಯುಕ್ತ ಮಾಡಿ

ಮದನ ಕಾಮೇಶ್ವರಿ ವಟಿಕಾ.

ಶೊ॥ [illegible] ದಯಕರಂ । [illegible] ।
ದೃಷ್ಟಾಯಂ [illegible] ವ್ಯತಾಂ ॥

ಈ ಪ್ರಕಾರವಾಗಿ [illegible] ಹೇಳಲ್ಪಟ್ಟ [illegible] ಈ ದಿವ್ಯ ಔಷಧಿಯು [illegible] ಸಂಗದಲ್ಲಿ [illegible] ಧಾತು [illegible] ಸ್ವಪ್ನ [illegible] ಕಷ್ಟ, ಮೂತ್ರದ [illegible] ಸಂಧಿವಾತ [illegible] ನಾಶಗೊಳಿಸಿ [illegible] ಹೊಟ್ಟೆಶೂಲಿ [illegible] ಮುಖಕಾಂತಿ [illegible] ಮಾಡುವದು [illegible] ದೂರಮಾಡಿ [illegible] ಶುದ್ಧಗೊಳಿಸಿ [illegible] ವಿಶೇಷ ಶಕ್ತಿಯುಂಟಾಗಿ ರತಿ ಸುಖ [illegible] ಇದನ್ನು [illegible] ಶಾಸ್ತ್ರ [illegible] ಬಹುಮಾನ ಹಣವನ್ನು ಕೊಡುತ್ತೇನೆ [illegible] ಡಬ್ಬಿ [illegible]

೬ ೧೨ ೨೧ **ಹೆಚ್ ಯಂ ಲೋಕೇಶ್ವರ ವೈದ್ಯರು ಬಳ್ಳಾರಿ**

ಸತ್ಯಮೇವಜಯತೆ
[ಗುಣ [illegible] ಹಣವಾಪಸ]
[illegible] ಇಂದ್ರಿಯ ಸಂಶೋಧಿತ

ಮದನೋದ್ಭವ ಗುಳಿಗೆ

ಅನಿಸೆ [illegible] ನಪುಂಸಕತ್ವ [illegible] ಈ ಗುಳಿಗೆಯು ಸೇವನೆಯಿಂದ [illegible] ಇಂದ್ರಿಯ [illegible] ಗುಪ್ತಪ್ರದೇಶದ [illegible] ಪಿತ್ತದ ಬಾಧೆಗಳ [illegible] ರತಿ [illegible] ಗುಳಿಗೆ [illegible] ರೂಪಾಯಿ, ಇದನ್ನು ಸೇವಿಸ [illegible] ನಪುಂಸಕತ್ವಾರಿ ತೈಲ [illegible]

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ [illegible] ಗುಣ [illegible] ಸುಖವನ್ನು [illegible] ಉಪಯೋಗ [illegible] ಗುಳಿಗೆಗಳನ್ನು [illegible] ತಿಳಿಸಿದರೆ [illegible]

[illegible] ವೈದ್ಯ [illegible] ಕಂಪನಿ
[illegible]

ಕುಲಕರ್ಣಿ ಸನ್ಸ ಕಂಪನಿ, ಧಾರವಾಡ ಇವರ ವತನದಾರ ರೆಂಟೆಗಳು



ಈ ರಂಟೆಯ ಶ್ರೇಷ್ಠ ಗುಣಗಳೆಂದರೆ—
[illegible] ಇನ್ನ ಎತ್ತಿ [illegible]
[illegible] ಇರುವದರಿಂದ [illegible]
[illegible] ರೆಂಟೆಯು [illegible] ಹೊಡೆಯ [illegible]
[illegible] ಮತ್ತು [illegible] ಅಂತರ [illegible]

ಇವರಿಬ್ಬರಿಗೆ [illegible] ವಿಶೇಷ ಸಂಗತಿ [illegible]
[illegible] ೧ [illegible] ಕುಲಕರ್ಣಿ ಸನ್ಸ ಕಂಪನಿ ಧಾರವಾಡ

ಶ್ರೀ ಭಾರತ [illegible]

[illegible]) ೫೦೦ ರೂಪಾಯಿ ಬಕ್ಷೀಸ ([illegible]

[illegible] ರೂಪಾಯಿ ಬಕ್ಷೀಸ

[illegible] ॥ ಶ್ರೀ ರೇವಣಸಿದ್ದೇಶ್ವರ ಪ್ರಸನ್ನ ॥ [illegible]

[illegible] ಕಾರಖಾನಾ [illegible] ಜಿಲ್ಲಾ [illegible]
ಕಳಕ (ಬತ್ತಿ) ರಸ [illegible] ಔಷಧ [illegible]

[illegible]) ಮೃತ್ಯುಂಜಯ ಗುಳಿಗೆಗಳು. ([illegible]

ಇದರಿಂದ [illegible] (ಊಷ್ಣ) [illegible] ಪ್ರಕಾರದ [illegible] ರೋಗದಿಂದ ಉತ್ಪನ್ನವಾದ [illegible] [ಉಪದಂಶ] [illegible] ಇಂದ್ರಿಯ [illegible] ರಕ್ತ [illegible] ಅಂಗಳಕ್ಕೆ [illegible] ಜನನೇಂದ್ರಿಯ [illegible] ಧಾತು [illegible] ಸಂಭೋಗದ ವೇಳೆಯಲ್ಲಿ [illegible] ಅನೇಕ ರೋಗಗಳ [illegible] ಜನರ [illegible] ಧಾತು [illegible] ರೋಗಗಳು [illegible] ಸಂತತಿಗೂ [illegible] ಇಂಥ ರೋಗವು [illegible] ರೋಗದ [illegible] ನಮ್ಮ ಔಷಧ ಗುಳಿಗೆಗಳನ್ನು [illegible] ಹೊಂದಿ [illegible] ಉತ್ತಮ [illegible] ಗುಳಿಗೆ [illegible] ರೂಪಾಯಿ [illegible] ಔಷಧದ [illegible] ನಮ್ಮ ಕಾರಖಾನೆಯೊಳಗೆ [illegible] ಶಾಸ್ತ್ರೋಕ್ತ [illegible] ಕಳಿಸುತ್ತೇವೆ

ಪತೆ ಡಾ॥ ಹಿರೇಮಠ [illegible]
೨೧-೩ ೨೨ **[illegible] ಬೆಳಗಾಂವ**

[illegible] ಔಷಧವು [illegible] ದೇಹಾರೋಗ್ಯ

ಆತಂಕನಿಗ್ರಹ ಮಾತ್ರೆಗಳು.

ಬೆಲೆ ಒಂದು ರೂಪಾಯಿ ಮಾತ್ರವೆ
ಆತಂಕ ನಿಗ್ರಹ ಔಷಧ [illegible] ಮದರಾಸು

ಉನ್ನತ ಪರಿಮಾಣದಲ್ಲಿ ಈ ಗುಳಿಗೆಗಳು [illegible] ಕೆಲಸ ಮಾಡುವವು [illegible] ಔಷಧಗಳು [illegible] ವಿವಿಧವಾದ [illegible] ವರ್ಷಪೂರ್ತಿ [illegible] ಗುಳಿಗೆಗಳೆಂದರೆ ಆತಂಕ ನಿಗ್ರಹ ಗುಳಿಗೆಗಳೆ
[illegible] ಇದು [illegible]
ಒಂದು ರೂಪಾಯಿಂದ ಯತ್ನ ನೋಡಿರಿ. ಈ ತರವಾದ ಔಷಧಿಗಳು ಬೇಕಾಗಿರುವಲ್ಲಿ ಬರೆಯಿರಿ.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜಿ
೩೮-೩ ೨೨ **[illegible] ಮದರಾಸ**

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ

ಬ್ರ್ಯಾಂಚ ಆಫೀಸ- ಹುಬ್ಬಳ್ಳಿ

ಸೇವಿಂಗ್ಸ ಬ್ಯಾಂಕ

ಕೆಳಗೆ ಬರೆದಿರುವ ಶರ್ತುಗಳ ಪ್ರಕಾರ ಈ ಬ್ಯಾಂಕಿನವರು ಸೇವಿಂಗ ರಕಮುಗಳನ್ನು ಸ್ವೀಕರಿಸುವರು.
೧ [illegible] ಒಂದು ವರ್ಷದಲ್ಲಿ [illegible] ೩೧ ನೇ ಡಿಸೆಂಬರದೊಳಗಾಗಿ ೨೦೦೦ ರೂ. [illegible] ಸ್ವೀಕರಿಸುವದಿಲ್ಲ.
[illegible] ಜನರ ಹೆಸರಿನಲ್ಲಿ [illegible] ಸ್ವೀಕರಿಸುವರು ಮತ್ತು [illegible] ಹಣ [illegible]
೩ ೧೦೦೦೦ [illegible] ಬಡ್ಡಿಯು ಕೊಡಲ್ಪಡುವದು.
೪ ಬ್ಯಾಂಕಿನ ಮಾಹಿತಿಯನ್ನೆಲ್ಲ [illegible] ಪುಸ್ತಕಗಳು ಬ್ಯಾಂಕ [illegible] ಮಾಡಿಸಿಕೊಳ್ಳಬಹುದು.
೨೭ ೪-೧೯೨೨

[illegible]

[illegible] ಇವರು [illegible] ಮುದ್ರಿಸಿ ಪ್ರಸಿದ್ಧಮಾಡಿದರು.

ಚಂದಾದಾರರಿಗೆ ವಿನಂತಿ

—(೦)—

೧ ಇನ್ನು ಪೋಸ್ಟಿನ ದರವು ಏರಿಸಲ್ಪಟ್ಟಿದರಿಂದ ಮಹತ್ವದ ಪ್ರಸಂಗದ ಹೊರತು ಬಂದ ಕಾರ್ಡುಗಳಿಗೆ ಉತ್ತರಹಾಕೆವು,

೨ ನಾವು ಪತ್ರಗಳನ್ನು ಸರಿಯಾಗಿ ಪೋಸ್ಟಿಗೆ ಹಾಕುತ್ತಿರುವದರಿಂದ ಪತ್ರ ಮುಟ್ಟದ ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ಮಾಡದೆ, ಪೋಸ್ಟಿನೊಡನೆ ಮಾಡಬೇಕು.

೩ ಹೊಸದಾಗಿ ಚಂದಾದಾರರಾಗುವವರು ಹಣ ಮನಿಆರ್ಡರ ಮಾಡಬೇಕಲ್ಲದೆ, ವ್ಹಿ. ಪಿ. ಯಿಂದ ಬೇಕಾದರೆ ಕಳಿಸಲಾರೆವು. ಆದ್ದರಿಂದ ನಿಷ್ಕಾರಣವಾಗಿ ಅರ್ಧ ಆಣೆಯನ್ನು ಕಳೆದುಕೊಳ್ಳಬಾರದು,

೪ ಚಂದಾಹಾಕುವ ವರ್ಗಣೀದಾರರ ನಂಬರುಗಳನ್ನು (ಅಂದರೆ ಅವರ ಹೆಸರಿನ ಹಿಂದುಗಡೆಯಲ್ಲಿದ್ದ ಅಂಕಿಗಳನ್ನು) " ಚಂದಾದಾರರಿಗೆ ಸೂಚನೆ " ಈ ಹೆಡ್ಡಿಂಗಿನ ಕೆಳಗೆ ಪ್ರಸಿದ್ಧಿಸುವೆವು. [illegible] ಗಳಿದ್ದವರು ಚಂದಾ ಹಣವನ್ನು ಮನಿಆರ್ಡರ ಮಾಡಬೇಕು. ಇಲ್ಲವಾದರೆ ಪತ್ರವನ್ನು [illegible].

೫ ಮುಂಗಡಹಣವಾಗಲಿ, ವ್ಹಿ.ಪಿ.ಯು [illegible] ವಾಗಲಿ ಬರದೆ ಚಂದಾದಾರರ ಬೇಡಿಕೆಗಳು ಪೂರ್ಣವಾಗವು.

೬ ಇದಕ್ಕೆ ಹೆಚ್ಚಿನ ಮಾಹಿತಿಯು ಬೇಕಾದರೂ ಬೇಕಾದಲ್ಲಿ ಟಿಕೀಟು ಇಟ್ಟು ಕೇಳಬಹುದು

ವ್ಯಾ. ವಿ. ಧಾರವಾಡ.



ಉತ್ತಮ ತರದ ಮಾಲು
ಕ್ರಯ ಸುಲಭ

ಮತ್ಸ್ಯ ಅವತಾರದ [illegible] ಸುವರ್ಣ [illegible] ಸಣ ಸೆಟ್ಟು ೧ಕ್ಕೆ ರೂ ೧-೧೪-೦ ಮಧ್ಯದು ೩-೦ ಚಿಕ್ಕದು ರೂ. ೪-೮-೦ ದೊಡ್ಡದು ೫-೦-೦

ಮುಂತಾದ [illegible] ಯಾವ [illegible] ಎಸ್. ಯು. ನಾರಾಯಣಾಚಾರ್ಯರ [illegible] ತಿಳಿಸುವೆವು. [illegible] ಬೇಕಾದ [illegible] ಪೀತಾಂಬರ, [illegible], [illegible], ಸ್ಫಟಿಕಲಿಂಗ [illegible], [illegible], [illegible], [illegible] ಕಸ್ತೂರಿ ನಾಮರ್ದಿ, ಈ ಮುಂತಾದ ಮಾಲುಗಳು ಬೇಕಾಗಿನೆ, ಹಾಗಾದರೆ ಒಂದೊಂದೆ ಟಿಕೀಟು ಕಳುಹಿಸಿ ಕೆಟ್ಲೆಲ್ಲಾಗು ತರಿಸಿ ನೋಡಿರಿ.

ವಿಳಾಸ ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ ಚೌಕಂಬಾ, ಬನಾರಸ (ಕಾಶಿ)

ಪ್ರತ್ಯಕ್ಷ ಫಲ ಮಂತ್ರ ಸಿದ್ಧಿ.

[illegible]

ಶ್ರೀಕಾಶಿ, ಗಯಾ, ಪ್ರಯಾಗ, ಹರಿದ್ವಾರ, ಬದರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇವೇ ಅನೇಕ ಕ್ಷೇತ್ರಗಳಿಗೆ ಹೋಗಿ, ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾವಿ, ಯೋಗಿಗಳೊಡನೆ ಭೆಟ್ಟಿಯಾಗಿ ಅವರ ಕೃಪೆಯಿಂದ ಅನುಭವಕ್ಕೆಬಂದ ಪ್ರತಿಬಂಧ ಸಿದ್ಧಿ ಮಾಡಿಕೊಂಡು ಬರೆದಿರುವರು

[illegible] ಮಾತ್ರ ಪಠಣದಿಂದಲೂ, ಮಂತ್ರ, ಯೋಗದಿಂದಲೂ ಯಾವ ದೇವಾನು ದೇವತೆಗಳು ಪ್ರತ್ಯಕ್ಷರಾಗುವದಕ್ಕೆ ಸಿದ್ಧಿ ಮಾಡಿಕೊಳ್ಳುವ ಪ್ರಯತ್ನ ಇದೆ.

[illegible] ಪ್ರಕರಣದಲ್ಲಿ ಪ್ರತ್ಯಕ್ಷ [illegible] ಆಸನಪಟದಲ್ಲಿ ರೂಪಾದಿಗಳು ಹೊರಡುವಿಕೆ [illegible] [illegible] ಇನ್ನೂ ನೂರಾರು ವಿಷಯಗಳು ಇದರಲ್ಲಿ ಇದೆ [illegible]. ಅವನ್ನು ಸಿದ್ಧಿ ಮಾಡಿಕೊಳ್ಳುವ ವಿವರವೂ ಇದೆ

[illegible] ಪ್ರಕರಣದಲ್ಲಿ ಸ್ತ್ರೀಯೊಂದು ಜ್ಯೋತಿಷ್ಯದಲ್ಲಿ ಯಾವದು ಸಿದ್ಧಿಯಾಗುವದೋ [illegible] ಅನುಭವ ತಗೆದುಕೊಂಡು ತಿಳಿಸಿರುವರು,

[illegible] ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಯಿಂದ ಯಾವ ಯಾವ ರೋಗಗಳಿಗೆ [illegible] ಅನುಭವ [illegible] ತಿಳಿಸಿದವರು. ಮತ್ತು ಬಾದಶಾಹಿಗಳ [illegible] [illegible] ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳ [illegible] [illegible], ಮತ್ತು [illegible] [illegible].

[illegible] ಗೃಹಸೌಖ್ಯ ನಿವಾರಣ ಭಗಿತ. [illegible], [illegible], [illegible] ಅನುಭವ [illegible] ಇವರಲ್ಲಿ ತಿಳಿಸಿರುವರು. [illegible] ವಿಷಯಗಳನ್ನು ಬರೆದಿರುವರು. ಈ ಗ್ರಂಥದಲ್ಲಿ [illegible] ದೇವದೇವತೆಗಳು ಪ್ರತ್ಯಕ್ಷ, [illegible], [illegible]. [illegible] ಇದೆ. ಇಂಥ ಗ್ರಂಥವು ಯಾರು ಕಣ್ಣಿಂದ [illegible] ಬೆಲೆ [illegible] ಆಯಿತು, [illegible] ಇವು ಎಲ್ಲವು ನಮ್ಮಲ್ಲಿ [illegible], ಜ್ಯೋತಿಷ್ಯ, [illegible] ಗಳು ಯಾವತ್ತು ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ೧೫-೧೧-೩೧

ಎ. ಆರ್. ಶಿವನಾಗಪ್ಪಾ ಹಾಗ್ರಿಬಾಸ-
ಹುಬ್ಬಳ್ಳಿ

ಜಾಹೀರಾತಿಗಾಗಿ.

೧೨ ತಿಂಗಳಿಗೆ	೧೪೫ ರೂ.
೬ ”	೭೫ ರೂ.
೩ ”	೪೦ ರೂ.

ಅರ್ಧ ಹಣಾ ಮುಂಚಿತವಾಗಿ ಕಳಿಸಬೇಕು.

ಈ ಪತ್ರವನ್ನು ಸತ್ಯಬೋಧ ರಾಮಚಂದ್ರ ಆಡಬಡ್ಡಿ ಇವರು ತಮ್ಮ ವಾತ್ಸರ್ಯಹರ ಪ್ರೆಸನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ವಿಜಯ

ನಿತ್ಯ ಪತ್ರ

- ಸ್ಥಾಪಕರು -
ದಿ. ಶ್ರೀ. ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.
(೧೯೨೦)

ಬೆಲೆ ೬ ಪೈ

ವರ್ಷ ೩) ಧಾರವಾಡ, ಬುಧವಾರ ತಾರೀಖು ೧೦ನೇ ಮೇ ೧೯೨೨. (ಸಂಚಿಕೆ ೧೦೪

ಧಾರವಾಡ ಸ್ವದೇಶೀ ನೇಯುವ ಸಂಘ.

ನಮ್ಮ ಸಂಘದ ನೇಯುವ ಕಾರಖಾನೆಯಲ್ಲಿ ಖಾತ್ರಿಯ ದೇಶೀ ಗಿರಣಿಯ ನೂಲಿನಿಂದ ಅಥವಾ ಕೈನೂಲಿನಿಂದ ಕೈಮಗ್ಗದ ಮೇಲೆ ನೆಯ್ದ ಎಲ್ಲಂದದ ದೇಶೀ ಸೀರೆ, ಖಣಗಳು, ಧೋತರ ಉತ್ಪನ್ನಗಳು ಯೋಗ್ಯದರದಿಂದ ದೊರೆಯುತ್ತವೆ.

ಸದ್ಯದಲ್ಲಿ ಊರೊಳಗೆ ದೇಶೀ ಗಿರಣಿಯ ನೂಲಿನ ವಸ್ತ್ರಗಳನ್ನು ವಿಶ್ವಾಸದಿಂದ ಕೊಳ್ಳಲಿಕ್ಕೆ ಹೋದ ಗಿರಾಕಿಗಳಿಗೆ ಅನೇಕರು ವಿಲಾಯಿತೀ ಮತ್ತು ಜಪಾನೀ ನೂಲಿನ ವಸ್ತ್ರಗಳನ್ನು ಕೊಟ್ಟು ಮೋಸಿಸುತ್ತಿರುವರು. ಈ ಪ್ರಕಾರ ಜನರು ಮೋಸ ಹೋಗದೇ ಖಾತ್ರಿ ದೇಶೀ ವಸ್ತ್ರಗಳನ್ನು ಕೊಂಡು ಉಪಯೋಗಿಸಿ "ಸ್ವದೇಶೀ" ವ್ರತವನ್ನು ಆಚರಿಸಲಿಕ್ಕೆ ತೀವ್ರ [illegible] ಸಹಾಯ ಮಾಡಬೇಕೆಂಬ ಉದ್ದೇಶದಿಂದಲೇ ಈ ಸಂಘವು ಸ್ಥಾಪಿಸಲ್ಪಟ್ಟಿದೆ.

ಈ ಕಾರಖಾನೆಯಲ್ಲಿ ಇದೇ ದೇಶದಲ್ಲಿ ತಯಾರಾದ ಬಣ್ಣಗಳನ್ನೇ ಉಪಯೋಗಿಸಲ್ಪಡುತ್ತವೆ. ಆದ್ದರಿಂದ ಜನರು ಸಮಕ್ಷ ಅಥವಾ ಪತ್ರದ್ವಾರಾ ವಸ್ತ್ರಗಳನ್ನು ತರಿಸಿಕೊಂಡು ಖಾತ್ರಿ ಮಾಡಿಕೊಳ್ಳಬಹುದು.

ಸಂಘದ ಕಾರಖಾನೆಯು ಹಾಲಗೇರಿ ಕೆಳಗಿನ ಓಣಿಯಲ್ಲಿದ್ದಂಥ ನವಲೂರ ದೇಸಾಯರ ವಾಡೇದ ಹಿಂದಿನಭಾಗದಲ್ಲಿರುವದು.

ಪತ್ತೆ- ವ್ಯವಸ್ಥಾಪಕ ಸ್ವದೇಶೀ ನೇಯುವ ಸಂಘ
ಮೋತೀತಲಾವಗಲ್ಲಿ ಧಾರವಾಡ

WANTED.

Agents who have a perfect knowledge of business line and best influences to canvass FORWARD BUSINESS of cotton Greins, Seeds, and bullions from Gadag, Bijapur, Bagalkot, Bellary and Davangeri centres. Liberal commission will be allowed according to qualification

Apply to
UMIASHANKAR VIRGI.
HUBLI.

ವರ್ಗಣಿಯ ದರಗಳು.

ನಿತ್ಯಪತ್ರಕ್ಕೆ	೧೨	ತಿಂಗಳಿಗೆ	೧೨-೮-೦ ರೂ.
,,	೬	,,	೭-೦-೦ ರೂ.
,,	೩	,,	೪-೦-೦ ರೂ.
,,	೧	,,	೧-೮-೦ ರೂ.

ವಾರಪತ್ರಕ್ಕೆ ವಾರ್ಷಿಕ ವರ್ಗಣಿ ೩-೧೨-೦ ರೂ
ವಿಶೇಷಮಾಹಿತಿಕೆಳಗಿನ ವಿಳಾಸಕ್ಕೆ.
ಮ್ಯಾ. ವಿಜಯ

ಅಸಹಕಾರವೇ ಸ್ವರಾಜ್ಯದ ಮೂಲಸ್ತಂಭವು.

ನಾವು ಲೋ. ಟಿಳಕರವರ ದಾಸಾನುದಾಸರು. ಇತ್ತಿತ್ತಲಾಗಿ ಕೆಲವು ಜನರು ಲೋ. ರವರ ಮೇಲೆ ಇಲ್ಲದ ಟೀಕೆಯನ್ನು ಮಾಡಹೋದಂತಿರುವರು. ಇದು ನಿಜವಾಗಿ ಖೇದದಾಯಕ ವಾರ್ತೆಯು ಸ್ಸನೆ? ಲೋ. ರವರ ತತ್ವವೇ ಮಹಾತ್ಮರ ತತ್ವವು. ಹಿಂದಕ್ಕೆ ಬಲವತ್ತರವುಳ್ಳದ ಲೋ. ರವರ ಧ್ಯೇಯವೇ ಇದಕ್ಕೆ ಪ್ರಬಲವಾದ ಆಧಾರವು. ಅಹಿಂಸಾತ್ಮಕ, ಶಾಂತಿಮಯ, ಅಸಹಕಾರದಿಂದಲೇ ಸ್ವರಾಜ್ಯವನ್ನು ಸಂಪಾದಿಸಿಕೊಳ್ಳುವ ನಿಜವಾದ ಆಶ್ರಯವು ಲೋ. ರವರು ಸಾವಿರಸಾರೆ ಹೇಳಿರುವರು. ನಮ್ಮ ಸರಕಾರವು ಯುದ್ಧದ ಬಿಕ್ಕಟ್ಟಿನ ಪ್ರಸಂಗದಲ್ಲಿದ್ದಾಗ್ಗೆ ನಮ್ಮ ಯಾಚನೆ ಮಾಡಿಕೆಗಳನ್ನು ಪೂರೈಸುವೆನೆಂದು ವಾಗ್ದಾನ ಮಾಡಿದ್ದನ್ನು ಈವರೆಗೂ ನೆರವೇರಿಸಲಿಲ್ಲ. ಸರಕಾರವು ತಾನು ಕೊಟ್ಟ ಮಾತನ್ನು ನಡೆಸಲಿಕ್ಕಿಲ್ಲವೆಂದು ಮತಿ ಮೀರಿ ದಬ್ಬಾಳಿಕೆಯುಕ್ತ ಹಿಂದೀ ಜನಾಂಗಳಿಗೆ ಕೆಂಗೆ ನೂರೆಯಬೇಕೆನು? ರೌಲೆಟ್ ಬಿಲ್ಲೇ. ಅದರಿಂದ ಮಹಾತ್ಮರ ಸಾತ್ವಿಕ ಸಂತಾಪವು ತಲೆದೋರಿತು. ಸ್ವದೇಶದ ರಾಜ್ಯವ್ಯವಸ್ಥೆಯ ಮೇಲಿನ ವಿಶ್ವಾಸವು ಸಂಪೂರ್ಣವಾಗಿ ಹಾರಿ ಹೋಗಿರುವದು. ಆ ಮೇಲೆ ಅಸಹಕಾರವೆಂಬ ಆತ್ಮಶುದ್ಧಿಯ ಚಳವಳಿಯನ್ನು ಎಲ್ಲ ಕಡೆಗೂ ನಡೆಸಿದರು. ಅಸಹಕಾರವೇ ಸ್ವರಾಜ್ಯ ಸ್ಥಾಪನೆಯ ಮೂಲಸ್ತಂಭವು. ಈ ಚಳವಳಿಯಿಂದ ಯಶಸ್ಸು ಪಡೆಯಬೇಕು. ಇಂಥ ಆತ್ಮಶುದ್ಧಿಯ ಸಮಯವು ಎಂದಿಗೂ ದೊರೆಯಲಿಕ್ಕಿಲ್ಲ. ಇದು ವಿಜಯವನ್ನು ಸಂಪಾದಿಸಿಕೊಡುವ ಯೋಗ್ಯ ಸಮಯವು. ಇಂಥ ಸುಸಂಧಿಯನ್ನು ವ್ಯರ್ಥವಾಗಿ ಕಳೆಯುವವನು ದ್ರೋಹದ ಪಾಪಿಯೇಸರಿ. ಈ ಚಳವಳಿಯು ಸಂಪೂರ್ಣವಾಗಿ ಯಶಸ್ವಿಯಾಗುವದೆಂದು ಕಂಡು ಬರುವದಿಲ್ಲೆಂಬ ಗ್ರಹಿಕೆಯು ಕೆಲವು ಜನರಲ್ಲಿಯಾಗಿದೆ. [illegible] ವಿದ್ಯಾರ್ಥಿಗಳು, ವಕೀಲರು ಎಷ್ಟು ಮುಂದರಿಯಬೇಕೋ ಅಷ್ಟು ಮುಂದರಿಯಲಿಲ್ಲ. ಇದು ಯಾರ ತಪ್ಪು ಇದು ಕಾರ್ಯಕ್ರಮದ ತಪ್ಪೋ? ಅಥವಾ ನಮ್ಮದೋ? ಎಂಬುವದನ್ನು ಚನ್ನಾಗಿ ವಿಚಾರಮಾಡಿ

೨. ಹಿಂದುಸ್ತಾನದಲ್ಲಿ ವೀರ ಪುರುಷರಿರುವರೆಂದೂ ಮತ್ತು ಈ ಆತ್ಮಯಜ್ಞಕ್ಕೆ ಸಿದ್ಧರಾಗುವರೆಂದೂ ಮಹಾತ್ಮರ ಗ್ರಹಿಕೆಯಾಗಿತ್ತು. ಆದರೆ ಇಲ್ಲಿಯ ನಾಮರ್ದ ಪುರುಷರಲ್ಲಿ ಈ ಸಾಮರ್ಥ್ಯವು ಎಲ್ಲಿಂದ ತಾನೇ ಬರಬೇಕು? ಇದೊಂದು ಬಾಯಬಡಕರ ಬಾಜಾರವಾಗಿದೆ. ಮಹಾತ್ಮರ ಹಿಂದಿನೆರಡು ವಿಷಯಗಳ ಹೊರ್ತಾಗಿ ಬಾಕಿ ಯಾವತ್ತು ಬಾಬುಗಳಲ್ಲಿ ಅವರಿಗೆ ಯಶವು ದೊರಕದೇ ಇರುವದು. ದಿನದಿನಕ್ಕೂ ಅಸಹಕಾರ ಚಳವಳಿಯ ಮಹತ್ವವು ಹೆಚ್ಚುತ್ತಲೇ ನಡೆದಿದೆ. ಚೌರಿ ಚೌರಾದಂಥ ಅನಿಷ್ಟ ಪ್ರಕಾರವು ಸಂಭವಿಸದಿದ್ದರೆ ಮಹಾತ್ಮರ ಕಾರ್ಯದ ಬೆಳಕು ಸರಕಾರಕ್ಕೆ ಚನ್ನಾಗಿ ಕಂಡು ಬರುತ್ತಲೇ ಇತ್ತು.

ಖಾದಿಯ ಚಳವಳಿಯು ಯಶಸ್ವಿಯಾಗುವದಿಲ್ಲೆಂದು ಎಷ್ಟೋ ಜನರು ತಿಳಿದುಕೊಂಡಿದ್ದರು. ಆದರೆ ದಿನ ದಿನಕ್ಕೆ ಖಾದಿಬಟ್ಟೆಯ ವ್ಯಾಪಾರವು ಹೆಚ್ಚುತ್ತ ನಡೆದಂತೆ ಪರದೇಶಿ ವಸ್ತ್ರಗಳ ವ್ಯಾಪಾರಸ್ಥರ ಕಾಲು ಹಾರಿ ಹೋಗಿದೆ. ಮ್ಯಾಂಚೆಸ್ಟರ, ಲ್ಯಾಂಕಾಶಾಯರ ಇಂಥ ಸ್ಥಳಗಳಲ್ಲಿ ವ್ಯಾಪಾರಸ್ಥರ ಅವಸ್ಥೆಯು ಏನಾಗಿರುವದನ್ನು ಬೇರೆ ಹೇಳುವ ಅವಶ್ಯವಿಲ್ಲ. ಇನ್ನು ಮೇಲೆ ಮಹಾತ್ಮರ ಕಾರ್ಯಕ್ರಮವನ್ನು ಹಚ್ಚಿಟ್ಟು ಜೋರಿನಿಂದ ಮುಂದಕ್ಕೊಯ್ಯಬೇಕಾಗಿದೆ. ಅದಕ್ಕಾಗಿ ನಾವು ಮಾಡತಕ್ಕ ಕರ್ತವ್ಯವೇನು? ಸ್ವರಾಜ್ಯವು ದೊರೆಯುವ ಹೊರ್ತು ವಿಶ್ರಾಂತಿಯನ್ನು ತೆಗೆದುಕೊಳ್ಳತಕ್ಕಲ್ಲೆಂದು ಪ್ರತಿಯೊಂದು ವ್ಯಕ್ತಿಯು ಪ್ರತಿಜ್ಞೆಯನ್ನು ಮಾಡಲೇಬೇಕು. ನೂಲನ್ನು ತೆಗೆಯುವದು ಖಾದಿಯ ಬಟ್ಟೆಗಳನ್ನು ಧರಿಸುವದು, ಅಸ್ಪೃಶ್ಯವರ್ಗದವರನ್ನು ಬಂಧುಭಾವದಿಂದ ಕಾಣುವದು, ಬ್ರಾಹ್ಮಣ- ಬ್ರಾಹ್ಮಣೇತರರೆಂಬ ಕಲಹವನ್ನು ತಪ್ಪಿಸಿ ಐಕ್ಯಮತ್ಯವನ್ನು ಬೆಳಿಸುವದು, ಶಾಂತತೆಯನ್ನು ಕಾಯ್ದುಕೊಳ್ಳುವದಕ್ಕಾಗಿ ದೀರ್ಘ ಪ್ರಯತ್ನ ಮಾಡುವದು ಇವೇ ಮೊದಲಾದ ಕರ್ತವ್ಯಗಳ ವಿಷಯವಾಗಿ ಸಂಪೂರ್ಣ ದಕ್ಷತೆಯನ್ನು ತೆಗೆದುಕೊಳ್ಳಬೇಕು. ಸುಮಾರು ೨೫ ಸಾವಿರ ದೇ. ಭಕ್ತರು ಕಾರಾಗ್ರಹದಲ್ಲಿ ಇರುವರು. ಆದಾಗ್ಯೂ ಚಳವಳಿಯು ಕಡಿಮೆಯಾಗುವ ಲಕ್ಷಣವಿಲ್ಲ. ನಮ್ಮ ಅತಿರಥಿ ಮಹಾರಥಿಕ ಮುಂದಾಳುಗಳು ತುರಂಗದಲ್ಲಿರುವರು. ಪ್ರತ್ಯಕ್ಷ ಮಹಾತ್ಮರೇ ಕಾರಾಗ್ರಹವನ್ನು ಸೇರಿದರೂ ಚಳವಳಿಯೇನೂ ಕಡಿಮೆಯಾಗಲಿಲ್ಲ. ಸರಕಾರದ ದಡಪಶಾಹಿಯು ಹೆಚ್ಚಾಗುತ್ತ ನಡೆದಂತೆ ನಮ್ಮ ಅಸಹಕಾರ ಚಳವಳಿಯನ್ನು ಹೆಚ್ಚೆಚ್ಚು ಜೋರಿನಿಂದ ನಡಿಸಿದರಾಯಿತು. ಎಂದು ನಮ್ಮ ಸವಿನಯ ಪ್ರಾರ್ಥನೆ.

ಚೀನದ ಯಾದವಿಯಲ್ಲಿ ಚಾಂಗತ್ಸೊಲಿನರವರು ಪರಾಜಯ ಹೊಂದಿ ಪಲಾಯನ ಸೂಕ್ತ ನಡಿಸಿರುವರು.

[illegible]

ಕೊಲ್ಹಾಪುರದ ಶ್ರೀಮಂತ ಶಾಹು ಮಹಾರಾಜರು ಅಕಸ್ಮಾತಾಗಿ ಮೃತಪಟ್ಟರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಮಹಾರಾಜರವರು ಮುಂಬೈಯಲ್ಲಿ ಮೃತಪಟ್ಟಿದ್ದು, ಅಂತ್ಯ ವಿಧಿಗಳು ಕೊಲ್ಹಾಪುರದಲ್ಲಿ ಆಗತಕ್ಕವು. ಅದಕ್ಕಾಗಿ ಶವವನ್ನು ಸ್ಪೆಶಲ್ ಟ್ರೇನಿನಿಂದ ಕೊಲ್ಹಾಪುರಕ್ಕೆ ತಂದಿರುವರು.

[illegible]

ಇದು ಯಾರ ಸಾಮ್ರಾಜ್ಯವೆಂದು ತಿಳಿಯುತ್ತಿರುವಿರಿ?

ನನ್ನದೇ!

ನಾನೇ ಅಲ್ಲವೆ ವಿದೂಷಕನು?

(೦)

ಮೂರಕ್ಕೆ ಒಂಭತ್ತರಿಂದ ಗುಣಿಸಲಿಕ್ಕೆ ಬರುವಂತೆ ತೋರುವದಿಲ್ಲ. ಆಗಲಿ ನಾನೇ ಹೇಳುವೆ. ಟ್ವೆಂಟಿಸ್ ಸೆವ್ವನ್ (ಇಪ್ಪತ್ತೇಳು) ಆಯಿತು. ಅಂದೇ ನಾನು ಈ ಊರಿಗೆ ಒಂದು ಸಲ ಬಂದಿದ್ದೆ. ವಿಜಯಕಾರರನ್ನು ಕಂಡಿದ್ದೆ. ನಿನ್ನೆ ತಾನೆ ಬೆಂಗಳೂರಿನಿಂದ ವಿಜಯಕಾರರನ್ನು ಕಾಣಬೇಕೆಂದು ಇಲ್ಲಿಯವರೆಗೆ ಬಂದು ಬಿಟ್ಟೆ. ಅವರನ್ನು ಕಾಣಬೇಕಾದರೆ ಮುಂಬೇ ಹಾಯಕೋರ್ಟಿಗೆ ತಾನೆ ಹೋಗಬೇಕಾಗುತ್ತೆಂದು ವಿಜಯ ಪತ್ರದ ಆಕ್ಟಿಂಗ ಮ್ಯಾನೇಜರರು ಹೇಳಿಬಿಟ್ಟರು. ಮೊನ್ನಿನ ಸಲ ಬಂದಾಗ್ಗೆ ಒಳ್ಳೇ ಸೊಗಸಾದ ನೀಕಲಾಟವನ್ನು ಗಂಟುಹಾಕಿ ಬಿಟ್ಟಿದ್ದಾರೆ. ಅಬ್ಬಾ! ಏನಪ್ಪಾ!! ಧಾರವಾಡದ ಜನಗಳು ಶಾಣೆ ವರಟು ಜನಗಳಪ್ಪಾ. ನಾನು ಒಳ್ಳೆನೆಂದು ಎಷ್ಟು ವಿಧವಾಗಿ ಹೇಳಿಕೊಂಡಾಗ್ಯೂ ಕೂಡ "ಏನು ಸ್ವಾಮೀ ನಮ್ಮ ದೇಶದ ಜನಗಳನ್ನು ಕಂಡು ಸುಮ್ಮನೆ ಹೆದರಿ ಬೀಳುವಿರಲ್ಲ; ನಾನು ಗೊತ್ತುಪಡಿಸಿದ ಕನ್ನಿಕೆಯು ತಮಗೆ ಅನುರೂಪಳಾಗಿದ್ದಾಳೆ." ಎಂದು ಇಲ್ಲದ ನುಸ್ಲಾಳತನದ ಮಾತುಗಳನ್ನಾಡಿ ನನ್ನನ್ನು ತುಂಬಾ ತೊಂದರೆಯಲ್ಲಿ ಹಾಕಿಬಿಟ್ಟಿದ್ದಾರೆ. ನಾನು ಮೊನ್ನೆ ತಾನೆ ಒಳ್ಳೆ ಸೊಗಸಾದ ಇಟ್ಯಾಲಿಯನ್ ಫೇಲ್ಟಕ್ಯಾಪ ಟ್ವೆಲ್ವ (ಹನ್ನೆರಡು) ರುಪೀಸ್ ಕೊಟ್ಟು ಪರಚೇಸ್ (ಕೊಂಡುಕೊಳ್ಳು) ಮಾಡಿದ್ದು ಅದನ್ನೆ ತಾನೆ ಹಾಕಿಕೊಂಡು ಮನೆಗೆ ಹೋದದ್ದೊಂದೇ ತಪ್ಪು ನನ್ನ ಪತ್ನಿಯವರು ಕೂಡಲೆ "ಈ ಟೊಪ್ಪಿಗ್ಗೇ ಎಷ್ಟು ರೊಕ್ಕಾ ಕೊಟ್ರಿ. ಇಂಥಾದ್ದ್ಯಾಕ ತೊಗೊಂಡು ಬಂದ್ರಿ. ಮನ್ಯಾಗಿನ ಹೇನತಿ ಮೈಮೇಲೆ ಗುಂಜೆತೂಕ ಬಂಗಾರ ಇಲ್ಲದಿದ್ದರೂ ಚಿಂತಿ ಇಲ್ಲ. ಈ ಬೆಂಗಳೂರ ವೈಭವದ ಜನಕ್ಕ ಇಂಥ ಒಣ ಸೋಗ ಮಾಡಿಕೊಂಡು ಮೆರದಾಡುವದ ಬೇಕು." ಎಂದು ಮನಸಿಗೆ ಬಂದಂತೆ ಬೈಗಳ ಮಳೆಯೊಳಗೆ ಕಾಲು ಕೂಡಾ ಇಡಗೊಡಲಿಲ್ಲ. ಎಂಥ ವರಟು ಹೆಣ್ಣಪ್ಪ ಇದು! ನಾನು ಬಹುಸರಿಯಾಗಿ ಹೇಳಿಕೊಂಡೆ. ಕೊಂಚಕೂಡ ದಯಾದಾಕ್ಷಿಣ್ಯ ಅವಳಲ್ಲೇನೂ ಹುಟ್ಟಲಿಲ್ಲ. "ಯಾಕ ಗಾಂಧಿಟೊಪ್ಪಿಗೆ ಕೊಗೋಬಾರದು. ಬಹಳಾದರೆ ಎಂಟು ಆಣೆಗೊಂದು ಬರತಾವೆ. ಒಂದುಬಿಟ್ಟು ನಾಕು ತೊಗೋಬೇಕು." ಹೀಗೆಂದು ಮತ್ತು ಬೊಗಳುತ್ತಿದಳು. ನನ್ನ ಗೃಹಚಾರ, ವಿಜಯಕಾರರ ಕೂಡ ಸ್ನೇಹ ಬೆಳಸಿದ್ದು ಇಂಥ ವರಟು ಹೆಣ್ಣು ಗಂಟು ಹಾಕಿಕೊಳ್ಳುವದಕ್ಕಾಗಿಯೇ ಆದಂತಾಯಿತು. "ಏನೇ ಸುಮ್ಮನೆ ನನ್ನನ್ನು ಈಪರಿಯಾಗಿ ಏಕೆ ಕೋಟಲೆಗೊಳಿಸುವಿ. ನಿನಗೇನೋ ಈ ಕ್ಯಾಪ ಇಷ್ಟವಿಲ್ಲ. ಆಫೀಸಿನ ಅಧಿಕಾರಿಗಳಿಗೆ ಗಾಂಧೀ ಕ್ಯಾಪು ಇಷ್ಟವಿಲ್ಲ. ಹೀಗಾದಮೇಲೆ ನಾನೇನು ಮಾಡಬೇಕು? ನೀನು ಬಹು ಜಾಣೆಯಲ್ಲವೆ! ದಯವಿಟ್ಟು ಈ ಆಗ್ರಹವನ್ನು ಬಿಟ್ಟುಬಿಡು." "ನಿಮ್ಮ ಕಚೇರ್ಯಾಗ ಗಾಂಧಿ ಟೊಪಿಗಿ ಹಾಕಿಕೊಂಡು ಹ್ಯಾಂಗ ಬರಬ್ಯಾಡ ಅಂತಾರ ಹಾಂಗ ಈಗ ನೀವು ತಲಿಮ್ಯಾಲ ಹಾಕಿಕೊಂಡ ಪರಟಿ ಟೊಪಿಗಿ ನನ್ನ ಮನಸಿಗೂ ಬರುದುಲ್ಲ. ಅವರು ಕಚೇರ್ಯಾಗ ಬರಗೊಡುವದಿಲ್ಲ ಹಾಂಗ ನಾನು ಮನ್ಯಾಗ ಬರಗೊಡುದುಲ್ಲ. ಹೋಗಿರಿ ಬೇಕಾದಲ್ಲಿ." ಎಂದು ಮಾತಾಡಿದ ಕೂಡಲೆ ಇಂಥ ವರಟು ಹೆಣ್ಣು ಗಂಟು ಹಾಕಿದ ವಿಜಯಕಾರರನ್ನು ಕಾಣಬೇಕೆಂದು ಬಂದೆ. ಅವರು ನನಗೆ ಮುಖ ತೋರಿಸಬಾರದೆಂತಲೇ ಹಾಯಕೋರ್ಟಿಗೆ ಹೋಗಿರುವರು. ಹೋಗಲಿ ಎಷ್ಟು ದಿವಸ ಹೋದಾರು? ಸದ್ಯಕ್ಕಂತೂ ನಾನು ಹೋಗಿಬರುವೆನು. ಅವರ ಸ್ಥಳದಲ್ಲಿ ಕುಳಿತ ಮ್ಯಾನೇಜರರೇ ನಿಮಗೊಂದು ದೊಡ್ಡ ನಮಸ್ಕಾರ.

ರಾಜಸ್ಥಾನದ ವೀರ ಭಗಿನಿಯರೇ ನೀವೇ ಧನ್ಯರು.

o

ಬಿಜೋಲಿಯಾ ತಾ. ೪ನೇ ದಿವಸ ೫೫ ಜನ ಗಂಡಸರನ್ನು ಮತ್ತು ೧೧ ಜನ ಸ್ತ್ರೀಯರನ್ನು ಪೋಲೀಸರು ನಿಷ್ಕಾರಣವಾಗಿ ದಸ್ತಗೀರ ಮಾಡಿ ಹೊಡೆದಿರುವರು. ಈ ಅನ್ಯಾಯದ ವಾರ್ತೆಯನ್ನು ಕೇಳಿ ಯಾವತ್ತೂ ನಗರವಾಸಿಗಳು ಸಂತಪ್ತರಾದರು. ರಾಜಸ್ಥಾನದ ಸೇವಾಸಂಘದ ಸೆಕ್ರೆಟರಿಗಳು ತಮ್ಮ ನಿತ್ಯಕ್ರಮದಂತೆ ನಗರದಲ್ಲಿ ಸಂಚರಿಸುತ್ತ ಈ ಅನ್ಯಾಯವು ನಡೆದ ಸ್ಥಳಕ್ಕೇ ಬಂದು ತಲ್ಪಿದರು. ಅವರು ಜನರ ಸಂತಾಪವನ್ನು ಶಾಂತಗೊಳಿಸುವದಕ್ಕಾಗಿ ಬಹಳ ಪ್ರಯತ್ನಿಸಿದರು. ಪುರುಷರು ಸ್ವಲ್ಪ ಮಟ್ಟಿಗೆ ಶಾಂತರಾದರು. ಆದರೆ ಸ್ತ್ರೀಯರನ್ನು ಶಾಂತಗೊಳಿಸುವದು ಅವರಿಗೆ ಸಾಧ್ಯವಾಗಲಿಲ್ಲ. ಯಾವತ್ತೂ ಸ್ತ್ರೀಯರ ನಿರ್ಮಲಾಂತಃಕರಣದಲ್ಲಿ ಪೂರ್ವದ ಐತಿಹಾಸಿಕ ಶೌರ್ಯವು ಸಂಪೂರ್ಣವಾಗಿ ನೆಲೆಗೊಂಡಿತ್ತು. ಕೂಡಲೆ ಶ್ರೀ. ಅಂಜನೀದೇವಿ ಚೌಧರಾಣಿ ಇವರ ಅಧ್ಯಕ್ಷತೆಯ ಕೆಳಗ ೫೦೦ ಜನ ಸ್ತ್ರೀಯರ ಪ್ರಚಂಡವಾದ ಸಭೆಯು ಕೂಡಿತು. ೨೫ ಜನ ಸ್ತ್ರೀಯರ ಒಂದೊಂದು ಗುಂಪಿನಂತೆ ಯಾವತ್ತೂ ಸ್ತ್ರೀಯರು ಗುಂಪು, ಗುಂಪಾಗಿ ಪೋಲೀಸರನ್ನುದ್ದೇಶಿಸಿ " ನ

ನ್ನು ದಸ್ತಗೀರ ಮಾಡಿರಿ, ನಗೆಗೇಡು ಮಾಡಿರಿ" ಎಂದು ಪೋಲೀಸರ ಕಡೆಗೆ ತಿರುಗಿದರು. ಪ್ರಬಲವಾದ ಪಟವನ್ನೇ ಹಿಡಿದರು. ಶ್ರೀ. ಅಂಜನಾದೇವಿಯವರ ನಿಶ್ಚಯವನ್ನು ನೋಡಿ ಪೋಲೀಸರು ನಿರುಪಾಯದಿಂದ ಬಂಧನದಲ್ಲಿರಿಸಿದ ಜನರನ್ನು ಬಿಡಬೇಕಾಯಿತು, ಆ ವೇಳೆ ಯಾವತ್ತು ಸ್ತ್ರೀಯರು ಖಾದಿಯ ವಸ್ತ್ರಗಳನ್ನೇ ಧರಿಸುವ ತಮ್ಮ ನಿಶ್ಚಯವನ್ನು ಪ್ರಸಿದ್ಧ ಪಡಿಸಿದರು. ವೀರ ಭಗಿನಿಯರೇ. ನೀವೇ ಧನ್ಯರು!

……

ಮುಳಸೀ ಸತ್ಯಾಗ್ರಹ ಪ್ರಕರಣದಲ್ಲಿ ೩೧ ಜನರಿಗೆ ಸಶ್ರಮಶಿಕ್ಷೆ.

ಈ ಮೊದಲು ಹಿಡಿದ ೩೧ ಜನರ ಖಟ್ಲೆಯ ತೀರ್ಪು ಹೊರಬಿದ್ದು ಶ್ರೀ. ನಾರಾಯಣರಾವ ವೈದ್ಯ ಮೊದಲಾದ ೩೧ ಜನರಿಗೆ ೧ ರಿಂದ ೬ ತಿಂಗಳವರೆಗೆ ಸಶ್ರಮ ಶಿಕ್ಷೆಯಾಯಿತು. ಪ್ರೊ. ಶಿವರಾಮ ಪರಾಂಜಪೆಯವರ ಖಟ್ಲೆಯ ತೀರ್ಪು ಮುಂದೆ ಬಿದ್ದದೆ. ಕಂಪನಿಯ ನೌಕರರ ಅತ್ಯಾಚಾರವು ನಡದೇ ಇದೆ. ಪೋಲೀಸರು ತಣ್ಣಗೆ ಕುಳಿತಿದ್ದಾರೆ. ಸತ್ಯಾಗ್ರಹಿಗಳನ್ನು ಮಾತ್ರ ಬಂಧಿಸುವ ಕಾರ್ಯವು ನಡದೇ ಇದೆ.

ಅಲಹಾಬಾದ ಕಾಂಗ್ರೆಸ ಆಫೀಸ ತಪಾಸಣೆಯನ್ನು ಪೋಲೀಸರು ಮಾಡಿ, ಕಾಗದಪತ್ರಗಳನ್ನು ಒಯ್ದಿರುವರು.

ಮುಳಸೀ ಸತ್ಯಾಗ್ರಹ ಪ್ರಕರಣದಲ್ಲಿ ಪುನಃ ೪೧ ಜನರು ಹಿಡಿಯಲ್ಪಟ್ಟಿದ್ದಾರೆ. ದಬ್ಬಾಳಿಕೆಯ ಕಾಲದ ನಂತರ ಸತ್ಯಾಗ್ರಹದ ಕಾಲವು ಬಂದಿದೆ.

ಅಹಮದಾಬಾದದಲ್ಲಿ ಮ್ಯು. ಯ ಕರಕೊಡಲಾರದ ಚಳವಳಿಯು ನಡೆಯತಕ್ಕದ್ದದೆ. ಕರಕೊಡುವವರ ವಿರುದ್ಧ ನಡೆದರೆ ಸತ್ಯಾಗ್ರಹವಾಗಲಿಕ್ಕೇಬೇಕು.

ಶ್ರೀ. ಕೆ. ಶ್ರೀನಿವಾಸರವರ ಪತ್ನಿ ಶ್ರೀಮತಿ ಯತಿರಾಜಮ್ಮನವರ ಮೇಲೆ ೧೨೪ರನ್ವಯ ಖಟ್ಲೆಯು ನಡೆದಿದೆ, ಆಂಧ್ರದ ಸ್ತ್ರೀಯರಲ್ಲಿ ಇವರು ಎರಡನೆಯವರು.

ನಿನ್ನೆಯೇ ವಿಜಯದ ಮೇಲಿನ ಖಟ್ಲೆಯ ವಿಚಾರಣೆಯು ಹಾಯಕೋರ್ಟಿನಲ್ಲಿತ್ತು. ನಿರ್ಣಯ ತಿಳಿದಿಲ್ಲ.

ನೋಟೀಸು.

ರಾ|| ಫಕ್ಕೀರಪ್ಪಾ ಮಧೂರಕರ ಜೋಗಿ ಸಾ|| ಬನ್ನಿಮಟ್ಟಿ ತಾ. ಹೂವಿನಹಡಗಲಿ ಜಿಲ್ಲಾ ಬಳ್ಳಾರಿ ಇವನಿಗೆ—

ಕೆಳಗೆ ಸಹಿ ಮಾಡಿದವನು ತಿಳಿಸುವದೇನಂದರೆ—

ನೀನು ನನ್ನ ಹೆಂಡತಿಯ ಖಾಸತಂದೆಯಿದ್ದು ಸುಮಾರು ದೀಡವರ್ಷದ ಮುಂದೆ ನಾವು ನರೇಗಲ್ಲ ಮುಕ್ಕಾಮಿನಲ್ಲಿ ಇದ್ದಾಗ್ಗೆ ಎನೋ ಹಬ್ಬದ ನೆವದಿಂದ ನನ್ನ ಹೆಂಡತಿ ಗಂಗಿ ಇವಳಿಗೆ ಕರಕೊಂಡು ಹೋದಿ ಆಗ್ಗೇ ಆವಳ ಮೈಮೇಲೆ ಇದ್ದ ದಾಗೀನೆಗಳು.

ಒಂದಿ ಎರಡು ಹೂಕ್ಕಬೆಳ್ಳಿ, ಕಿಮ್ಮತ್ತು ೨೫ ರು. ಸಾದಾ ಟೀಕಿ ಭಂಗಾರದ್ದು ಕಿಮ್ಮತ್ತು ೨೦ ರು. ನದಸಪಟ್ಟಿ ಒಂದು ಕಿಮ್ಮತ ೬ ರು. ಜಂತವಾಳಿ ಜೋಡ ಬಂಗಾರದ್ದು ಕಿಮ್ಮತ ೮ ರೂಪಾಯಿ ಈ ಪ್ರಕಾರ ದಾಗೀನೆಗಳು ಮೈಮೇಲೆ ಇದ್ದವು.

ನೀನು ಕರಕೊಂಡು ಹೋಗುವಾಗ್ಗೆ ೨ ತಿಂಗಳಲ್ಲಿ ಕಳಿಸುತ್ತೇನೆಂದವನು ಇನ್ನೂವರೆಗೆ ೫-೬ ಸಾರೆ ಕರೆಯಲಿಕ್ಕೆ ಬಂದರೂ ನನ್ನ ಹೆಂಡತಿಯ ಕೂಡ ಸಹ ಮಾತಾಡಗೊಡದೇ ಜಗಳಾಡಿ ಉಪವಾಸ ಕಳಿಸಿಕೊಟ್ಟಿ ಈಗ ಈ ನೋಟೀಸ ಮುಟ್ಟಿದ ೧೫ ದಿವಸಗಳಲ್ಲಿ ನನ್ನ ಹೆಂಡತಿಗೆ ದಾಗೀನೆ ಸಹಿತ ತಂದು ನನ್ನಲ್ಲಿಗೆ ಮುಟ್ಟಿಸು. ಇಲ್ಲದಿದ್ದರೆ ನೀನು ವಿಶ್ವಾಸಘಾತಕತನ ಮಾಡಿದ್ದಕ್ಕೆ ಕಾಯಿದೆ ಪ್ರಕಾರ ಸರಕಾರಿಮಾರಿಫತ್ ಇಲಾಜನಡಿಸಲಾದೀತು. ತಾ. ೯-೫-೨೨

ಸಹಿ- ದುರಗಪ್ಪಾ ಕಾಸಾರಜೋಗಿ ಅಲ್ಲಾಪೂರ ತಾ|| ಹಾನಗಲ್ಲ ಜಿಲ್ಲಾ ಧಾರವಾಡ.

ಅತ್ಯಂತ ಧಾತುಪುಷ್ಟಿಕ ವೀರ್ಯವರ್ಧಕ ಕಾಮೋದ್ದೀಪಕ ಶಕ್ತಿವರ್ಧಕ ಚೂರ್ಣ.

....೦....

ಈ ಚೂರ್ಣದ ಸೇವನೆಯಿಂದ [illegible] ([illegible]) [illegible] ಹೋಗಲಾಡಿಸಿ, ಸ್ತ್ರೀ ಸಹವಾಸದ ಬಲವನ್ನು ಉಂಟುಮಾಡುತ್ತದೆ. ೧ರು. ೮ ತೊಲೆ [illegible]

[illegible]

ಕ್ಷೇತ್ರಗಳ ಮೇಲೆ ಇಂಥ ಔಷಧವನ್ನು ಇಂದಿನವರೆಗೆ ಯಾರು ಶೋಧಿಸಿಲ್ಲವೆಂದು ಪ್ರತಿಜ್ಞಾಪೂರ್ವಕ ಹೇಳಬಹುದು. ೧ರು. ೧೬ಮಾತ್ರೆಗಳು

ಜುಲಾಬಿನ ಗುಳಿಗೆಗಳು. ೧ರು, ೬೪ ಮಾತ್ರೆಗಳು

ಮುಷ್ಟಿ ಹುರುಕಿನ ಮುಲಾಮಿನ ಡಬ್ಬಿಗಳು.

೩ನೇ ದಿವಸಗಳಲ್ಲಿ ಗುಣಬಾರದಿದ್ದಲ್ಲಿ. ಹಣವನ್ನು ಮರತ ಕಳುಹಿಸುವೆವು. ೩ ಡಬ್ಬಿಗಳ ಕ್ರಯ ೧ರು.

ಕಿರಾತ ಪಾಕ

ಅಸ್ಥಿಗತ ಜ್ವರವನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನು ಮಾಡುವದು. ೧ ಬಾಟ್ಲಿಯ ಬೆಲೆ ೨ರೂಪಾಯಿ.

ಮೂಲವ್ಯಾಧಿಯ ಔಷಧ.

ರಕ್ತಮೂಲವ್ಯಾಧಿ. ಮೊಳಕೆಯುಳ್ಳ ಮುಲವ್ಯಾಧಿ ಮುಂತಾದ ಯಾವತ್ತು ತರದ ಮೂಲವ್ಯಾಧಿಗಳನ್ನು ಒಂದುವಾರದೊಳಗಾಗಿ ಗುಣ ಪಡಿಸುತ್ತದೆ- ೧ವಾರದ ಔಷಧದ ಬೆಲೆ ೩ರೂಪಾಯಿ

೧ ಸಿಂಗಾಷ್ಟಕ ಚೂರ್ಣ ೧ರು. ೧೦ ತೊಲೆ.
೨ ಸೀತೋಪಲಾದಿ ಚೂರ್ಣ ೧ರು. ೮ ತೊ.

ದಂತಮಂಜನ

೧ ಕುಪ್ಪಿಯ ಬೆಲೆ. ೩ ಆಣೆ. ೧ ರು. ೬ ಕುಪ್ಪಿಗಳು.

ಡಾ. ಎನ್. ಎಸ್. ಹೆಬಸೂರ
ಆಯುರ್ವೇದಿಸ್ಟ ಅ್ಯಂಡ ಬಾಯೊಕೆಮಿಸ್ಟ
ಧಾರವಾಡ.

ಒಬ್ಬ ಕಾರಕೂನನು ಬೇಕು.

ಧಾರವಾಡ ವ್ಯಾಪಾರೋತ್ತೇಜಕ ಕಂಪನಿ ಲಿಮಿಟೆಡ್ ಧಾರವಾಡ ಈ ಅಂಗಡಿಯಲ್ಲಿ ಕ್ಲಾರ್ಕ ಜಾಗೆ ಒಂದು ಖಾಲೀ ಅದೆ ಉತ್ತಮ ಕನ್ನಡ ಬರಹ ಬರೆಯತಕ್ಕವರು ಮುಖ್ಯ ಜಮಾಖರ್ಚಿನ ಮಾಹಿತಿ ಇದ್ದವರು ಬೇಕಾಗಿರುತ್ತಾರೆ. ಪಗಾರ ಪ್ರಾರಂಭಕ್ಕೆ ೭೦ ರೂಪಾಯಿ. ಸಿಗುವದು. ಬೇಕಾದವರು ಸದರ ಕಂಪನಿಗೆ ತಾರೀಖು ೧೦-೫-೨೨ ನೇ ತಾರೀಖಿನೊಳಗಾಗಿ ಹಿಂದೆ ಕೆಲಸಮಾಡಿದ ಸರ್ಟಿಫಿಕೀಟ ಸಹ ಅಗತ ಇಟ್ಟು ಅರ್ಜಿ ಮಾಡಬೇಕು.

ಧಾರವಾಡ ಕೃ. ಸ. ಜೋಯಿಸ.
೨೮-೪-೨೨ ಮ್ಯಾನೇಜಿಂಗ ಡಾಯರೆಕ್ಟರ
ವ್ಯಾಪಾರೋತ್ತೇಜಕ ಕಂ. ಧಾರವಾಡ

ಜಾಹೀರನೋಟೀಸು.

ಧಾರವಾಡ ಡಿ|| ಕೋರ್ಟಿನ ಡೆ|| ನಾಝರರ ಕಡಿಂದಾ ಇದರ ಮೂಲಕ ಯಾವತ್ತು ಜನರಿಗೆ ತಿಳಿಯಬೇಕಲ್ಲಾ ಅಲ್ಪವಯಿ ಗುಂಡಾಬಾಯಿ ತಂದಿ ಶ್ರೀನಿವಾಸರಾವ ಪಾಟೀಲ- ಕುಲಕರ್ಣಿ ಸಾಕೀನ ಮುಡೂರ ಇವಳ ಬಾಬತು ಹಾನಗಲ್ಲ ತಾಲೂಕ ಮುಡೂರ ವ ಕ್ಯಾಸನೂರ ಗ್ರಾಮಗಳಲ್ಲಿ ಅಲ್ಪವಯಿಯ ಸರಕಾರಿ ಜಮೀನಿಯಲ್ಲಿರುವ ಗಂಧದ ಮರಗಳನ್ನು ಉಘಡ ರೀತಿಯಿಂದ ತಾ. ೨೫ ಮೇ ಸನ್ನ ೧೯೨೨ ಇಸ್ವಿ ರೋಜ ಗುರುವಾರದಿಂದ ಮುಡೂರ ಗ್ರಾಮದ ಚಾವಡಿಯಲ್ಲಿ ಲಿಲಾವ ಮಾಡಲ್ಪಡುವವು. ಲಿಲಾವಿನಲ್ಲಿ ಬೇಡತಕ್ಕವರು ಹಾಜರ ಇರತಕ್ಕದ್ದು. ಲಿಲಾವಿನಲ್ಲಿ ಗಿಡಗಳನ್ನು ತಗೊಂಡವರು ಆಗಿಂದಾಗಲೇ ಹಣ ಕೊಟ್ಟು ಪಾವತಿ ಪಡಕೊಳ್ಳಬೇಕು. ಮಾರತಕ್ಕ ಗಿಡಗಳ ಮಾಹಿತಿ ಆಯಾ ಗ್ರಾಮಗಳ ಗೌಡರಕಡಿಂದಾ ಮಾಹಿತಿ ತಗೋಬೇಕು. ಇದಕ್ಕೆ ಹೆಚ್ಚಿಗೆ ಏನಾದರೂ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಯಲ್ಲಿ ಸೂಟಿ ದಿವಸಗಳ ಬಿಟ್ಟು ಸಮಕ್ಷಮಾ ಬಂದು ಮಾಹಿತಿ ಪಡಕೊಳ್ಳಬೇಕು ತಾ|| ೫-೫-೨೨

ಆರ್, ಹ್ವಿ, ಕುಸುನೂರ.
ಡಿಪುಟಿ ನಾಝರ ಧಾರವಾಡ

ಚಂದಾದಾರರಿಗೆ ವಿನಂತಿ

—(೦)—

೧ ಇನ್ನು ಪೋಸ್ಟಿನ ದರವು ಏರಿಸಲ್ಪಟ್ಟದರಿಂದ ಮಹತ್ವದ ಪ್ರಸಂಗದ ಹೊರತು ಬಂದ ಕಾಗದಗಳಿಗೆ ಉತ್ತರಹಾಕೆವು,

೨ ನಾವು ಪತ್ರಗಳನ್ನು ಸರಿಯಾಗಿ ಪೋಸ್ಟಿಗೆ ಹಾಕುತ್ತಿರುವದರಿಂದ ಪತ್ರ ಮುಟ್ಟದ ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ಮಾಡದೆ, ಪೋಸ್ಟಿನೊಡನೆ ಮಾಡಬೇಕು.

೩ ಹೊಸದಾಗಿ ಚಂದಾದಾರರಾಗುವವರು ಹಣ ಮನಿಯಾರ್ಡರ ಮಾಡಬೇಕಲ್ಲದೆ, ವ್ಹಿ. ಪಿ. ಯಿಂದ ಬೇಡಿದರೆ ಕಳಿಸಲಾರೆವು. ಆದ್ದರಿಂದ ನಿಷ್ಕಾರಣವಾಗಿ ಅರ್ಧ ಆಣೆಯನ್ನು ಕಳೆದುಕೊಳ್ಳಬಾರದು,

೪ ಚಂದಾದಾರರ [illegible] ನಂಬರುಗಳನ್ನು (ಅಂದರೆ ಅವರ ಪತ್ರಿಯ ಹಿಂದುಗಡೆಯಲ್ಲಿದ್ದ ಅಂಕಿಗಳನ್ನು) "ಚಂದಾದಾರರಿಗೆ ಸೂಚನೆ" ಈ ಹೆಡ್ಡಿಂಗಿನ ಕೆಳಗೆ ಪ್ರಸಿದ್ಧಮಾಡೆವು. ಆ ನಂಬರುಗಳುಳ್ಳವರು ಚಂದಾ ಹಣವನ್ನು [illegible] ಮಾಡಬೇಕು. ಇಲ್ಲದಿದ್ದರೆ ಪತ್ರವನ್ನು [illegible].

೫ ಮುಂಗಡಹಣವಾಗಲಿ, [illegible] ವಾಗಲಿ ಬರದೆ ಚಂದಾದಾರರ ಬೇಡಿಕೆಗಳು ಪೂರ್ಣವಾಗವು.

೬ ಇದರ [illegible] ಸಾಹಿತ್ಯ [illegible] ಬೇಕಾದಲ್ಲಿ ರಿಪ್ಲಾಯ ಇಟ್ಟು ಕೇಳಬಹುದು

ಮ್ಯಾ. ಪಿ. ಧಾರವಾಡ.

ಉತ್ತಮ ತರದ ಮಾಲು ಕ್ರಯ ಸುಲಭ



[illegible]

ಪ್ರತ್ಯಕ್ಷ ಫಲ ಕುಂಭ ಸಿದ್ಧಿ.

ಇದು ರಾಯಚೂರು [illegible].

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದರೀನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ, ಅಲ್ಲಲ್ಲಿ [illegible] ಗೋಸಾಯಿ, [illegible] ಗಳೊಡನೆ [illegible] ಪ್ರತ್ಯಕ್ಷ [illegible] ಮಾಡಿಕೊಂಡು ಬಂದಿರುವರು [illegible] ದೇವತೆಗಳ ಪ್ರತ್ಯಕ್ಷ [illegible] ಸಿದ್ಧಿ ಮಾಡಿಕೊಳ್ಳುವ [illegible].

[illegible] ಈ ಗ್ರಂಥದಲ್ಲಿ [illegible] ವಿಷಯಗಳು ಇದರಲ್ಲಿ [illegible]. [illegible] ಸಿದ್ಧಿ ಮಾಡಿಕೊಳ್ಳುವ [illegible].

[illegible] ಜ್ಯೋತಿಷ್ಯ [illegible] ಯೋಗಿಗಳಲ್ಲಿ [illegible] ಸಿದ್ಧಿಯಾಗಿದ [illegible].

[illegible] ಯಾವ ಯಾವ ರೋಗಗಳಿಗೆ [illegible] ತಿಳಿಸಿದ್ದಾರೆ. ಮತ್ತು [illegible] ಕುಟುಂಬದಲ್ಲಿ [illegible].

[illegible] ಗ್ರಹಚಾರ [illegible] ಭೂತ, ಪ್ರೇತ, ಪಿಶಾಚ, [illegible] ಈ ಗ್ರಂಥವು [illegible] ಸಂಸ್ಕೃತ, [illegible] ಜ್ಯೋತಿಷ್ಯ [illegible] ಸಿದ್ಧಾಂತ, ಜ್ಯೋತಿಷ್ಯ [illegible] ಅನೇಕ ಪುಸ್ತಕಗಳು ಸಿಗುತ್ತವೆ. [illegible]

ಎ. ಆರ್. ಶಿವನಾಗಪ್ಪ ಶಾಸ್ತ್ರಿ [illegible]
ಹುಬ್ಬಳ್ಳಿ

ಜಾಹಿರಾತಿಗಾಗಿ.

೧೨ ತಿಂಗಳಿಗೆ	೧೪೫ ರೂ.
೬ "	೭೫ ರೂ.
೩ "	೪೦ ರೂ.

ಅರ್ಧ ಹಣಾ ಮುಂಚಿತವಾಗಿ ಕಳಿಸಬೇಕು.

ಈ ಪತ್ರವನ್ನು ಸತ್ಯಬೋಧ ರಾಮಚಂದ್ರ [illegible] ಇವರು ತಮ್ಮ ವಾರ್ತಾಹರ ಪ್ರೆಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ

— ಸ್ಥಾಪಕರು —
[illegible]
(೧೯೨೦)

ಬೆಲೆ ೬ ಪೈ

ವರ್ಷ ೩) ಧಾರವಾಡ, ಬುಧವಾರ ತಾ|| ೧೦ನೇ ಮೇ ೧೯೨೨. (ಸಂಚಿಕೆ ೧೦[illegible]

ಧಾರವಾಡ ಸ್ವದೇಶೀ ನೇಯುವ ಸಂಘ.

ನಮ್ಮ ಸಂಘದ ನೇಯುವ ಕಾರಖಾನೆಯಲ್ಲಿ ಖಾತ್ರಿಯ ದೇಶೀ ಗಿರಣಿಯ ನೂಲಿನಿಂದ ಅಥವಾ ಕೈನೂಲಿನಿಂದ ಕೈಮಗ್ಗದ ಮೇಲೆ ನೆಯ್ದ ಎಲ್ಲ ತರದ ದೇಶೀ ಸೀರೆ, ಖಾದಿ, ಧೋತರ ಉಪ್ಪರಣೆಗಳು ಯೋಗ್ಯ ದರದಿಂದ ದೊರೆಯುತ್ತವೆ.

ನಮ್ಮದಲ್ಲಿ ಬೂಟೂರಗಳ ದೇಶೀ ಗಿರಣಿಯ ನೂಲಿನ ವಸ್ತ್ರಗಳನ್ನು ವಿಶ್ವಾಸವಿಟ್ಟು ಕೊಳ್ಳುವಕ್ಕೆ ಹೋದಾಗ ದಾಕಿಗಳಿಗೆ ಅನೇಕರು ವಿಲಾಯತೀ ಮತ್ತು ಜಪಾನೀ ನೂಲಿನ ವಸ್ತ್ರಗಳನ್ನು ಕೊಟ್ಟು ಮೋಸಿಸುತ್ತಿರುವರು. ಈ ಪ್ರಕಾರ ಜನರು ಮೋಸ ಹೋಗದೇ ಖಾತ್ರಿ ದೇಶೀ ವಸ್ತ್ರಗಳನ್ನು ಕೊಂಡು ಉಪಯೋಗಿಸಿ "ಸ್ವದೇಶೀ" ವ್ರತವನ್ನು ಆಚರಣೆಯಲ್ಲಿ ಶೀಘ್ರ ತರುವಿಕ್ಕೆ ಸಹಾಯ ಮಾಡಬೇಕೆಂಬ ಉದ್ದೇಶದಿಂದಲೇ ಈ ಸಂಘವು ಸ್ಥಾಪಿಸಲ್ಪಟ್ಟಿದೆ.

ಈ ಕಾರಖಾನೆಯಲ್ಲಿ ಇದೇ ದೇಶದಲ್ಲಿ ತಯಾರಾದ ನೂಲುಗಳನ್ನೇ ಉಪಯೋಗಿಸಲ್ಪಡುತ್ತವೆ. ಅದ್ದರಿಂದ ಜನರು ನಮ್ಮಲ್ಲಿ ಅಥವಾ ಪತ್ರದ್ವಾರಾ ವಸ್ತ್ರಗಳನ್ನು ತರಿಸಿಕೊಂಡು ಖಾತ್ರಿ ಮಾಡಿಕೊಳ್ಳಬಹುದು.

ಸಂಘದ ಕಾರಖಾನೆಯು ಹಾಲಗೇರಿ ಕೆಳಗಿನ ಓಣಿಯಲ್ಲಿದ್ದಂಥ ನವಲೂರ ದೇಸಾಯರ ವಾಡೇದ ಹಿಂದಿನಭಾಗದಲ್ಲಿರುವದು.

ಪತ್ತೆ- ವ್ಯವಸ್ಥಾಪಕ ಸ್ವದೇಶೀ ನೇಯುವ ಸಂಘ
ಮೋತೀತಲಾವಗಲ್ಲಿ ಧಾರವಾಡ

WANTED.

Agents who have a perfect knowledge of business line and best influences to canvass FORWARD BUSINESS of cotton Grains, Seeds, and bullions from Gadag, Bijapur, Bagalkot, Bellary and Davangeri centres. Liberal commission will be allowed according to qualification

Apply to
UMASHANKAR VIRGI.
HUBLI.

ವರ್ಗಣಿಯ ದರಗಳು.

ನಿತ್ಯಪತ್ರಕ್ಕೆ ೧೨ ತಿಂಗಳಿಗೆ ೧೨-೮-೦ ರೂ.
" ೬ " ೭-೦-೦ ರೂ.
" ೩ " ೪-೦-೦ ರೂ.
" ೧ " ೧-೮-೦ ರೂ.
ವಾರಪತ್ರಕ್ಕೆ ವಾರ್ಷಿಕ ವರ್ಗಣಿ ೩-೧೨-೦ ರೂ.
ವಿಶೇಷ ಮಾಹಿತಿಕೆಳಗಿನ ವಿಳಾಸಕ್ಕೆ.

ವ್ಯಾ. ವಿಜಯ

ಅಸಹಕಾರವೇ ಸ್ವರಾಜ್ಯದ ಮೂಲಮಂತ್ರವು.

ನಾಮದಾರ ಲೋ. ಟಿಳಕರವರ [illegible] ಇತ್ತಿತ್ತಲಾಗಿ ಕೆಲವು ಜನರು ಲೋ. ರವರ ಮೇಲೆ ಇಲ್ಲದ ಟೀಕೆಯನ್ನು ಮಾಡಹೋಗಿರುವರು. ಇದು ನಿಜವಾಗಿ ಖೇದದಾಯಕ ವಾರ್ತೆಯು [illegible]. ಲೋ. ರವರ ತತ್ವವೇ ಮಹಾತ್ಮರ ತತ್ವವು. [illegible] ಲೋ. ರವರ [illegible] ಆಧಾರವು. ಅಹಿಂಸಾತ್ಮಕ, ಶಾಂತತೆಯ, ಅಸಹಕಾರದಿಂದಲೇ ಸ್ವರಾಜ್ಯವನ್ನು ಸಂಪಾದಿಸಿಕೊಳ್ಳುವ ನಿಶ್ಚಯದ ಅಸ್ತ್ರವೆಂದು ಲೋ. ರವರು ಸಾರಿಸಾರಿ ಹೇಳಿರುವರು. ನಮ್ಮ ಸರಕಾರವು ಯುದ್ಧದ ಭಿಕ್ಷೆಯ ಪ್ರಸಂಗದಲ್ಲಿ [illegible] ನಮ್ಮ ಯಾವತ್ತು ಬೇಡಿಕೆಗಳನ್ನು ಪೂರೈಸಿಕೊಡುವೆವೆಂದು ವಾಗ್ದಾನ ಮಾಡಿದ್ದು ಕನಸುಮನಸಿನಲ್ಲಿ ಕೂಡಾ ಸ್ಮರಿಸಲಿಲ್ಲ. ಸರಕಾರವು ಸ್ವತಃ [illegible] ವಚನವನ್ನು ನಡೆಸಲಿಕ್ಕಿಲ್ಲವೆಂದು [illegible] ಹಿಂದೂಸ್ಥಾನಿಗಳಿಗೆ ಕೊನೆಗೆ ದೊರೆಯಿತೇನು? [illegible]. ಇದರಿಂದ ಮಹಾತ್ಮರ ಸಾತ್ವಿಕ ಸಂತಾಪವು ಕೆರಳಿತು. ಸತ್ಯದ [illegible] ಸಂಪೂರ್ಣವಾಗಿ [illegible] ಹೋಗಿರುವದು. ಆ ಮೇಲೆ ಅಸಹಕಾರದ [illegible] ಚಳವಳಿಯನ್ನು ಎಲ್ಲ ಕಡೆಗೂ ಹರಡಿದರು. ಅಸಹಕಾರದಿಂದಲೇ ಸ್ವರಾಜ್ಯ ಸ್ಥಾಪನೆಯು ಮೂಲಮಂತ್ರವು. ಈ ಚಳವಳಿಯಿಂದ ಯಾರನ್ನು [illegible]. ಇಂಥ ಆತ್ಮಶುದ್ಧಿಯು [illegible] ಎಂದಿಗೂ [illegible]. ಇದು [illegible] ಸಂಪಾದಿಸಿಕೊಳ್ಳುವ ಯೋಗ್ಯ ಸಮಯವು. ಇಂಥ ಸುಸಂಧಿಯನ್ನು ವ್ಯರ್ಥವಾಗಿ ಕಳೆಯುವವನು [illegible]. ಈ ಚಳವಳಿಯು ಸಂಪೂರ್ಣವಾಗಿ ಯಶಸ್ವಿಯಾಗುವದೆಂದು [illegible] ಗ್ರಹಿಕೆಯು ಕೆಲವು ಜನರಲ್ಲಿಯಾಗಿದೆ. ನಿಜ. ಆದರೆ ವಿದ್ಯಾರ್ಥಿಗಳು, ವಕೀಲರು ಎಷ್ಟು ಮುಂದಾಗಬೇಕೋ ಅಷ್ಟು ಮುಂದರಿಯಲಿಲ್ಲ ಇದು ಯಾರ ತಪ್ಪು ಇದು ಕಾರ್ಯಕ್ರಮದ ತಪ್ಪೋ? ಅಥವಾ ನಮ್ಮದೋ? ಎಂಬುವದನ್ನು ಚನ್ನಾಗಿ ವಿಚಾರಮಾಡಿ

ರಿ. ಹಿಂದುಸ್ಥಾನದಲ್ಲಿ ವೀರ ಪುರುಷರಿರುವರೆಂದೂ ಮತ್ತು ಈ ಆತ್ಮಯಜ್ಞಕ್ಕೆ ಸಿದ್ಧರಾಗುವರೆಂದೂ ಮಹಾತ್ಮರ ಗ್ರಹಿಕೆಯಾಗಿತ್ತು. ಆದರೆ ಇಲ್ಲಿಯ ನಾಮರ್ದ ಪುರುಷರಲ್ಲಿ ಈ ಸಾಮರ್ಥ್ಯವು ಎಲ್ಲಿಂದ ತಾನೇ ಬರಬೇಕು? ಇದೊಂದು ಬಾಯಿಬಡಕರ ಬಾಜಾರವಾಗಿದೆ. ಮಹಾತ್ಮರ ಒಂದೆರಡು ವಿಷಯಗಳ ಹೊರತಾಗಿ ಬಾಕಿ ಯಾವತ್ತು ಬಾಬುಗಳಲ್ಲಿ ಅವರಿಗೆ ಯಶವು ದೊರಕದೇ ಇರುವದು. ದಿನದಿನಕ್ಕೆ ಅಸಹಕಾರ ಚಳವಳಿಯ ಮಹತ್ವವು ಹೆಚ್ಚುತ್ತಲೇ ನಡೆದಿ ಚೌರಿಚೌರಾದಂಥ ಅನಿಷ್ಟ ಪ್ರಕಾರವು ಸಂಭವಿಸದಿದ್ದರೆ ಮಹಾತ್ಮರ ಕಾರ್ಯದ ಬೆಳಕು ಸರಕಾರಕ್ಕೆ ಚನ್ನಾಗಿ ಕಂಡು ಬರುತ್ತಲೇ ಇತ್ತು.

ಖಾದಿಯ ಚಳವಳಿಯು ಯಶಸ್ವಿಯಾಗುವದಿಲ್ಲೆಂದು ಎಷ್ಟೋ ಜನರು ತಿಳಿದುಕೊಂಡಿದ್ದರು. ಆದರೆ ದಿನದಿನಕ್ಕೆ ಖಾದೀಪಟ್ಟಿಯವ್ಯಾಪಾರವು ಹೆಚ್ಚುತ್ತ ನಡೆದಂತೆ ಪರದೇಶಿ ವಸ್ತ್ರಗಳ ವ್ಯಾಪಾರಸ್ಥರ ಹೌಹಾರಿ ಹೋಗಿದೆ. ಮ್ಯಾಂಚೆಸ್ಟರ, ಲ್ಯಾಂಕ್ಯಾಶಾಯರ ಇಂಥ ಸ್ಥಳಗಳಲ್ಲಿ ವ್ಯಾಪಾರಸ್ಥರ ಅವಸ್ಥೆಯು ಹೀನಾಗಿರುವದನ್ನು ಬೇರೆ ಹೇಳುವ ಅವಶ್ಯವಿಲ್ಲ. ಇನ್ನು ಮೇಲೆ ಮಹಾತ್ಮರ ಕಾರ್ಯಕ್ರಮವನ್ನು ಹೆಚ್ಚಿನ ಜೋರಿನಿಂದ ಮುಂದಕ್ಕೊಯ್ಯಬೇಕಾಗಿದೆ. ಅದಕ್ಕಾಗಿ ನಾವು ಮಾಡತಕ್ಕ ಕರ್ತವ್ಯವೇನು? ಸ್ವರಾಜ್ಯವು ದೊರೆಯುದ ಹೊರ್ತು ವಿಶ್ರಾಂತಿಯನ್ನು ತೆಗೆದುಕೊಳ್ಳತಕ್ಕಿಲ್ಲೆಂದು ಪ್ರತಿಯೊಂದು ವ್ಯಕ್ತಿಯು ಪ್ರತಿಜ್ಞೆಯನ್ನು ಮಾಡಬೇಕು. ನೂಲನ್ನು ತೆಗೆಯುವದು ಖಾದಿಯ ಬಟ್ಟೆಗಳನ್ನು ಧರಿಸುವದು, ಅಸ್ಪೃಶ್ಯವರ್ಗದವರನ್ನು ಬಂಧುಭಾವದಿಂದ ಕಾಣುವದು, ಬ್ರಾಹ್ಮಣ- ಬ್ರಾಹ್ಮಣೇತರರೆಂಬ ಕಲಹವನ್ನು ತಪ್ಪಿಸಿ ಐಕ್ಯಮತ್ಯವನ್ನು ಬೆಳೆಸುವದು, ಶಾಂತತೆಯನ್ನು ಕಾಯ್ದುಕೊಳ್ಳುವದಕ್ಕಾಗಿ ದೀರ್ಘ ಪ್ರಯತ್ನ ಮಾಡುವದು ಇವೇ ಮೊದಲಾದ ಕರ್ತವ್ಯಗಳ ವಿಷಯವಾಗಿ ಸಂಪೂರ್ಣ ದಕ್ಷತೆಯನ್ನು ತೆಗೆದುಕೊಳ್ಳಬೇಕು. ಸುಮಾರು ೨೫ ಸಾವಿರ ದೇ. ಭಕ್ತರು ಕಾರಾಗ್ರಹದಲ್ಲಿ ಇರುವರು. ಆದಾಗ್ಯೂ ಚಳವಳಿಯು ಕಡಿಮೆಯಾಗುವ ಲಕ್ಷ್ಯವಿಲ್ಲ. ನಮ್ಮ ಅತಿರಥಿ ಮಹಾರಥಿಕ ಮುಂದಾಳುಗಳು ತುರಂಗದಲ್ಲಿರುವರು. ಪ್ರತ್ಯಕ್ಷ ಮಹಾತ್ಮರೇ ಕಾರಾಗ್ರಹವನ್ನು ಕಂಡರೂ ಚಳವಳಿಯೇನೂ ಕಡಿಮೆಯಾಗಲಿಲ್ಲ. ಸರಕಾರದ ದಡದಶಾಹಿಯು ಹೆಚ್ಚಾಗುತ್ತ ನಡೆದಂತೆ ನಮ್ಮ ಅಸಹಕಾರ ಚಳವಳಿಯನ್ನು ಹೆಚ್ಚಿನ ಜೋರಿನಿಂದ ನಡಿಸಿದರಾಯಿತು. ಎಂದು ನಮ್ಮ ಸವಿನಯ ಪ್ರಾರ್ಥನೆ.

ಚೀನದ ಯಾದವಿಯಲ್ಲಿ ಚಾಂಗತ್ಸೋಲಿನದವರು ಪರಾಜಯ ಹೊಂದಿ ಪಲಾಯನ ಸೂಕ್ತ ಪಠಿಸಿರುವರು.

[illegible]

ಕೊಲ್ಹಾಪುರದ ಶ್ರೀಮಂತ ಶಾಹು ಮಹಾರಾಜರು ಆಕಸ್ಮಾತಾಗಿ ಮೃತಪಟ್ಟರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಮಹಾರಾಜರವರು ಮುಂಬೈಯಲ್ಲಿ ಮೃತಪಟ್ಟದ್ದು, ಅಂತ್ಯ ವಿಧಿಗಳು ಕೊಲ್ಹಾಪುರದಲ್ಲಿ ಆಗತಕ್ಕವು. ಆದಕಾರಣ ಶವವನ್ನು ಸ್ಪೆಶಲ್ ಟ್ರೇನಿನಿಂದ ಕೊಲ್ಹಾಪುರಕ್ಕೆ ಕಳಿಸಿರುವರು.

[illegible]

ಇದು ಯಾರ ಸಾಮ್ರಾಜ್ಯವೆಂದು ತಿಳಿಯುತ್ತಿರುವಿರಿ?

ನನ್ನದೇ!

ನಾನೇ ಇಲ್ಲವೆ ವಿದೂಷಕನು?

(೧)

ಮೂರಕ್ಕೆ ಒಂಭತ್ತರಿಂದ ಗುಣಿಸಲಿಕ್ಕೆ ಬರುವಂತೆ ತೋರುವದಿಲ್ಲ. ಆಗಲಿ ನಾನೇ ಹೇಳುವೆ. ಟ್ವೆಂಟಿ ಸೆವೆನ್ (ಇಪ್ಪತ್ತೇಳು) ಆಯಿತು. ಅಂದೇ ನಾನು ಈ ಊರಿಗೆ ಒಂದು ಸಲ ಬಂದಿದ್ದೆ. ವಿಜಯಕಾರರನ್ನು ಕಂಡಿದ್ದೆ. ನಿನ್ನೆ ತಾನೆ ಬೆಂಗಳೂರಿನಿಂದ ವಿಜಯಕಾರರನ್ನು ಕಾಣಬೇಕೆಂದು ಇಲ್ಲಿಯವರೆಗೆ ಬಂದು ಬಿಟ್ಟೆ. ಅವರನ್ನು ಕಾಣಬೇಕಾದರೆ ಬೊಂಬೇ ಹಾಯಕೋರ್ಟಿಗೆ ತಾನೆ ಹೋಗಬೇಕಾಗುತ್ತೆಂದು ವಿಜಯ ಪತ್ರದ ಆಕ್ಟಿಂಗ ಮ್ಯಾನೇಜರರು ಹೇಳಿಬಿಟ್ಟರು. ಮೊನ್ನಿನ ಸಲ ಬಂದಾಗ್ಗೆ ಒಳ್ಳೇ ಸೊಗಸಾದ ಸೀಕಲಾಬತನ್ನು ಗಂಟುಹಾಕಿ ಬಿಟ್ಟಿದ್ದಾರೆ. ಅಬ್ಬಾ! ಏನಪ್ಪಾ!! ಧಾರವಾಡದ ಜನಗಳು ಶಾಣೆ ಖರೆ ಜನಗಳಪ್ಪಾ ನಾನು ಒಲ್ಲೆನೆಂದು ಎಷ್ಟು ವಿಧವಾಗಿ ಹೇಳಿಕೊಂಡಾಗ್ಯೂ ಕೂಡ " ಏನು ಸ್ವಾಮೀ ನಮ್ಮ ದೇಶದ ಜನಗಳನ್ನು ಕಂಡು ಸುಮ್ಮನೆ ಹೆದರಿ ಬೇಡುವಿರಲ್ಲ; ನಾನು ಗೊತ್ತುಪಡಿಸಿದ ಕನ್ನಿಕೆಯು ತಮಗೆ ಅನುರೂಪಳಾಗಿದಾಳೆ. " ಎಂದು ಇಲ್ಲದ ಮುಖ್ಯಾಳತನದ ಮಾತುಗಳನ್ನಾಡಿ ನನ್ನನ್ನು ತುಂಬಾ ತೊಂದರೆಯಲ್ಲಿ ನೂಕಿಬಿಟ್ಟಿದಾರೆ. ನಾನು ಮೊನ್ನೆತಾನೆ ಒಳ್ಳೆ ಸೊಗಸಾದ ಇಟ್ಯಾಲಿಯನ್ ಫೇಲ್ಟಕ್ಯಾಪ ಟ್ವೆಲ್ವ (ಹನ್ನೆರಡು) ರುಪೀಸ್ ಕೊಟ್ಟು ಪರಚೇಸ್ (ಕೊಂಡುಕೊಳ್ಳು) ಮಾಡಿದ್ದೆ ಅದನ್ನೆ ತಾನೆ ಹಾಕಿಕೊಂಡು ಮನೆಗೆ ಹೋದದ್ದೊಂದೇ ತಪ್ಪು ನಮ್ಮ ಪತ್ನಿಯವರು ಕೂಡಲೆ " ಈ ಟೊಪ್ಪಿಗ್ಗೇ ಎಷ್ಟು ರೊಕ್ಕಾ ಕೊಟ್ರಿ. ಇಂಥಾದ್ಯಾಕೆ ತೊಗೊಂಡು ಬಂದ್ರಿ. ಮನ್ಯಾಗಿನ ಹೇನತಿ ವೈಮಾಟಿ ಗುಂಡುಕೂಸ ಭಂಗಾರ ಇಲ್ಲದಿದ್ದರೂ ಲಕ್ಷ್ಯ ಇಲ್ಲ. ಈ ಬೆಂಗಳೂರ ಮೈಸೂರ ಜನಕ್ಕೆ ಇಂಥ ಬಿನ್ನಾ ಸೋಗಮಾಡಿಕೊಂಡು ಮೆರದಾಡುವದ ಬೇಕು. " ಎಂದು ಮನಸಿಗೆ ಬಂದಂತೆ ಬೊಗಳಿ ಮನಿಯೊಳಗೆ ಕಾಲು ಕೂಡಾ ಇಡಗೊಡಲಿಲ್ಲ. ಎಂಥ ಖರಟ ಹೆಣ್ಣಪ್ಪ ಇದು! ನಾನು ಬಹುಸರಿಯಾಗಿ ಹೇಳಿಕೊಂಡೆ. ಕೊಂಚಕೂಡ ದಯಾದಾಕ್ಷಿಣ್ಯ ಅವಳಲ್ಲೇನೂ ಹುಟ್ಟಲಿಲ್ಲ. " ಯಾಕ ಗಾಂಧಿಟೊಪ್ಪಿಗೆ ತೊಗೋಬಾರದು. ಬಹಳಾದರೆ ಎಂಟು ಆಣೆಗೊಂದು ಬರತಾವೆ. ಒಂದುಬಿಟ್ಟು ನಾಕು ತೊಗೋಬೇಕು. " ಹೀಗೆಂದು ಮತ್ತೂ ಬೊಗಳಹತ್ತಿದಳು. ನನ್ನ ಗೃಹಚಾರ, ವಿಜಯಕಾರರ ಕೂಡ ಸ್ನೇಹ ಬೆಳಸಿದ್ದು ಇಂಥ ಖರಟ ಹೆಣ್ಣು ಗಂಟು ಹಾಕಿಕೊಳ್ಳುವದಕ್ಕಾಗಿಯೇ ಆದಂತಾಯಿತು. " ಏನೇ ಸುಮ್ಮನೆ ನನ್ನನ್ನು ಈಪರಿಯಾಗಿ ಏಕೆ ಕೋಟಲೆಗೊಳಿಸುವಿ. ನಿನಗ್ಯಾಕೋ ಈ ಕ್ಯಾಪ ಇಷ್ಟವಿಲ್ಲ. ಆಫೀಸಿನ ಅಧಿಕಾರಿಗಳಿಗೆ ಗಾಂಧೀ ಕ್ಯಾಪು ಇಷ್ಟವಿಲ್ಲ. ಹೀಗಾದಮೇಲೆ ನಾನೇನು ಮಾಡಬೇಕು? ನೀನು ಬಹು ಜಾಣೆಯಲ್ಲವೆ! ದಯವಿಟ್ಟು ಈ ಆಗ್ರಹವನ್ನು ಬಿಟ್ಟುಬಿಡು. " " ನಿಮ್ಮ ಕಚೇರ್ಯಾಗ ಗಾಂಧಿ ಟೊಪಿಗಿ ಹಾಕಿಕೊಂಡು ಹ್ಯಾಂಗ ಬರಬ್ಯಾಡ ಅಂತಾರ ಹಾಂಗ ಈಗ ನೀವು ತಲಿಮ್ಯಾಲ ಹಾಕಿಕೊಂಡ ಸರಟಿ ಟೊಪಿಗಿ ನನ್ನ ಮನಸಿಗೂ ಬರುದುಲ್ಲ. ಅವರು ಕಚೇರ್ಯಾಗ ಬರಗೊಡುದಿಲ್ಲ ಹಾಂಗ ನಾನು ಮನ್ಯಾಗ ಬರಗೊಡುದಿಲ್ಲ. ಹೋಗಿರಿ ಬೇಕಾದಲ್ಲಿ. " ಎಂದು ಮಾತಾಡಿದ ಕೂಡಲೆ ಇಂಥ ಖರಟ ಹೆಣ್ಣು ಗಂಟು ಹಾಕಿದ ವಿಜಯಕಾರರನ್ನು ಕಾಣಬೇಕೆಂದು ಬಂದೆ. ಅವರು ನನಗೆ ಮುಖ ತೋರಿಸಬಾರದೆಂತಲೇ ಹಾಯಕೋರ್ಟಿಗೆ ಹೋಗಿರುವರು. ಹೋಗಲಿ ಎಷ್ಟು ದಿನಸ ಹೋದಾರು? ಸದ್ಯಕ್ಕಂತೂ ನಾನು ಹೋಗಬರುವೆನು. ಅವರ ಸ್ಥಳದಲ್ಲಿ ಕುಳಿತ ಮ್ಯಾನೇಜರರೇ ತಿಮಗೊಂದು ದೊಡ್ಡ ನಮಸ್ಕಾರ.

ರಾಜಸ್ಥಾನದ ವೀರ ಭಗಿನಿಯರೇ ನೀವೇ ಧನ್ಯರು.

—o—

ಪಿಡೋಲಿಯಾ ತಾ. ೪ನೇ ದಿವಸ ೫೫ ಜನ ಗಂಡಸರನ್ನು ಮತ್ತು ೧೧ ಜನ ಸ್ತ್ರೀಯರನ್ನು ಪೋಲೀಸರು ನಿಷ್ಕಾರಣವಾಗಿ ದಸ್ತಗಿರ ಮಾಡಿ ಹೊಡೆದಿರುವರು. ಈ ಅನ್ಯಾಯದ ವಾರ್ತೆಯನ್ನು ಕೇಳಿ ಯಾವತ್ತೂ ನಗರವಾಸಿಗಳು ಸಂತಪ್ತರಾದರು. ರಾಜಸ್ಥಾನದ ಸೇವಾಸಂಘದ ಸೆಕ್ರೆಟರಿಗಳು ತಮ್ಮ ನಿತ್ಯಕ್ರಮದಂತೆ ನಗರದಲ್ಲಿ ಸಂಚರಿಸುತ್ತ ಈ ಅನ್ಯಾಯವು ನಡೆದ ಸ್ಥಳಕ್ಕೇ ಬಂದು ತಲ್ಪಿದರು. ಅವರು ಜನರ ಸಂತಾಪವನ್ನು ಶಾಂತಗೊಳಿಸುವದಕ್ಕಾಗಿ ಬಹಳ ಪ್ರಯತ್ನಿಸಿದರು. ಪುರುಷರು ಸ್ವಲ್ಪ ಮಟ್ಟಿಗೆ ಶಾಂತರಾದರು. ಆದರೆ ಸ್ತ್ರೀಯರನ್ನು ಶಾಂತಗೊಳಿಸುವದು ಅವರಿಗೆ ಸಾಧ್ಯವಾಗಲಿಲ್ಲ. ಯಾವತ್ತೂ ಸ್ತ್ರೀಯರ ನಿರ್ಮಲಾಂತಃಕರಣದಲ್ಲಿ ಪೂರ್ವದ ಐತಿಹಾಸಿಕ ಶೌರ್ಯವು ಸಂಪೂರ್ಣವಾಗಿ ನೆಲೆಗೊಂಡಿತ್ತು. ಕೂಡಲೆ ಶ್ರೀ. ಅಂಜನೀದೇವಿ ಚೌಧರಾಣಿಯವರ ಅಧ್ಯಕ್ಷತೆಯ ಕೆಳಗೆ ೫೦೦ ಜನ ಸ್ತ್ರೀಯರ ಪ್ರಚಂಡವಾದ ಸಭೆಯು ಕೂಡಿತು. ೨೫ ಜನ ಸ್ತ್ರೀಯರ ಒಂದೊಂದು ಗುಂಪಿನಂತೆ ಯಾವತ್ತೂ ಸ್ತ್ರೀಯರು ಗುಂಪು, ಗುಂಪಾಗಿ ಪೋಲೀಸರನ್ನುದ್ದೇಶಿಸಿ " ನ

ಮ್ಮನ್ನು ದಸ್ತಗೀರ ಮಾಡಿರಿ, ನಗೆಗೇಡು ಮಾಡಿರಿ" ಎಂದು ಪೋಲೀಸರ ಕಡೆಗೆ ತಿರುಗಿದರು. ಪ್ರಬಲವಾದ ಹಟವನ್ನೇ ಹಿಡಿದರು. ಶ್ರೀ. ಅಂಜನಾದೇವಿಯವರ ನಿಶ್ಚಯವನ್ನು ನೋಡಿ ಪೋಲೀಸರು ನಿರುಪಾಯದಿಂದ ಬಂಧನದಲ್ಲಿರಿಸಿದ ಜನರನ್ನು ಬಿಡಲೇಬೇಕಾಯಿತು, ಆ ವೇಳೆ ಯಾವತ್ತು ಸ್ತ್ರೀಯರು ಖಾದಿಯ ವಸ್ತ್ರಗಳನ್ನೇ ಧರಿಸುವ ತಮ್ಮ ನಿಶ್ಚಯವನ್ನು ಪ್ರಸಿದ್ಧ ಪಡಿಸಿದರು. ವೀರ ಭಗಿನಿಯರೇ. ನೀವೇ ಧನ್ಯರು!

....

ಮುಳಸೀ ಸತ್ಯಾಗ್ರಹ ಪ್ರಕರಣದಲ್ಲಿ ೩೧ ಜನರಿಗೆ ಸಶ್ರಮಶಿಕ್ಷೆ.

ಈ ಮೊದಲು ಹಿಡಿದ ೩೧ ಜನರ ಖಟ್ಲೆಯ **ತೀರ್ಪು ಹೊರಬಿದ್ದು** ಶ್ರೀ. ನಾರಾಯಣರಾವ ವೈದ್ಯ ಮೊದಲಾದ ೩೧ ಜನರಿಗೆ ೧ ರಿಂದ ೬ ತಿಂಗಳವರೆಗೆ ಸಶ್ರಮ ಶಿಕ್ಷೆಯಾಯಿತು. ಪ್ರೊ, ಶಿವರಾಮ ಪರಾಂಜಪೆಯವರ ಖಟ್ಲೆಯ ತೀರ್ಪು ಮುಂದೆ ಬಿದ್ದಿದೆ. ಕಂಪನಿಯ ನೌಕರರ ಅತ್ಯಾಚಾರವು ನಡದೇ ಇದೆ. ಪೋಲೀಸರು ತಣ್ಣಗೆ ಕುಳಿತಿದ್ದಾರೆ. ಸತ್ಯಾಗ್ರಹಿಗಳನ್ನು ಮಾತ್ರ ಬಂಧಿಸುವ ಕಾರ್ಯವು ನಡದೇ ಇದೆ.

ಅಲಹಾಬಾದ ಕಾಂಗ್ರೆಸ ಆಫೀಸ ತಪಾಸಣಿಯನ್ನು ಪೋಲೀಸರು ಮಾಡಿ, ಕಾಗದಪತ್ರಗಳನ್ನು ಒಯ್ದಿರುವರು.

ಮುಳಸೀ ಸತ್ಯಾಗ್ರಹ ಪ್ರಕರಣದಲ್ಲಿ ಪುನಃ ೪೧ ಜನರು ಹಿಡಿಯಲ್ಪಟ್ಟಿದ್ದಾರೆ. ದೀಪಾವಳಿಯ ಕಾಲದ ನಂತರ ಸತ್ಯಾಗ್ರಹದ ಕಾಲವು ಬಂದಿದೆ.

ಅಹಮದಾಬಾದದಲ್ಲಿ ಮ್ಯು. ಯ ಕರಕೊಡಲಾರದ ಚಳವಳಿಯು ನಡೆಯುತಕ್ಕದ್ದದೆ. ಕರಕೊಡುವವರ ವಿರುದ್ಧ ನಡೆದರೆ ಸತ್ಯಾಗ್ರಹವಾಗಲಿಕ್ಕೇಬೇಕು.

ಶ್ರೀ. ಕೆ. ಶ್ರೀನಿವಾಸರವರ ಪತ್ನಿ ಶ್ರೀಮತಿ ಯತಿರಾಜಮ್ಮನವರ ಮೇಲೆ ೧೦೮ನ್ನೆಯ ಖಟ್ಲೆಯು ನಡೆದಿದೆ, ಆಂಧ್ರದ ಸ್ತ್ರೀಯರಲ್ಲಿ ಇವರು ಎರಡನೆಯವರು.

ನಿನ್ನೆಯೇ ವಿಜಯದ ಮೇಲಿನ ಖಟ್ಲೆಯ ವಿಚಾರಣೆಯು ಹಾಯಕೋರ್ಟಿನಲ್ಲಿತ್ತು. ನಿರ್ಣಯ ತಿಳಿದಿಲ್ಲ.

ನೋಟೀಸು.

ರಾ॥ ಫಕ್ಕೀರಪ್ಪಾ ಮಧೂರಕರ ಜೋಗಿ ಸಾ॥ ಬನ್ನಿಮಟ್ಟಿ ತಾ. ಹೂವಿನಹಡಗಲಿ ಜಿಲ್ಲಾ ಬಳ್ಳಾರಿ ಇವನಿಗೆ—

ಕೆಳಗೆ ಸಹಿ ಮಾಡಿದವನು ತಿಳಿಸುವದೇನಂದರೆ—

ನೀನು ನನ್ನ ಹೆಂಡತಿಯ ಬಾಸತಂದಿಯಿದ್ದು ಸುಮಾರು ದೀಢವರ್ಷದ ಮುಂದೆ ನಾವು ನರೇಗಲ್ಲ ಮುಕ್ಕಾಮಿನಲ್ಲಿ ಇದ್ದಾಗ್ಗೆ ಏನೋ ಹಬ್ಬದ ನೆವದಿಂದ ನನ್ನ ಹೆಂಡತಿ ಗಂಗಿ ಇವಳಿಗೆ ಕರಕೊಂಡು ಹೋದಿ ಆಗ್ಗೇ ಅವಳ ಮೈಮೇಲೆ ಇದ್ದ ದಾಗೀನೆಗಳು.

ಬಂದಿ ಎರಡು ಜೊಕ್ಕಬಿಳ್ಳೆ ಕಿಮ್ಮತ್ತ ೨೫ ರು. ಸಾದಾ ಟೀಕಿ ಭಂಗಾರದ್ದು ಕಿಮ್ಮತ್ತು ೨೦ ರು. ನತಪಟ್ಟಿ ಒಂದು ಕಿಮ್ಮತ ೬ ರು. ಬೆಂಡವಾಲಿ ಜೋಡ ಬಂಗಾರದ್ದು ಕಿಮ್ಮತ ೮ ರೂಪಾಯಿ ಈ ಪ್ರಕಾರ ದಾಗೀನೆಗಳು ಮೈಮೇಲೆ ಇದ್ದವು.

ನೀನು ಕರಕೊಂಡು ಹೋಗುವಾಗ್ಗೆ ೨ ತಿಂಗಳಲ್ಲಿ ಕಳಿಸುತ್ತೇನೆಂದವನು ಇನ್ನೂವರೆಗೆ ೫-೬ ಸಾರೆ ಕರೆಯಲಿಕ್ಕೆ ಬಂದರೂ ನನ್ನ ಹೆಂಡತಿಯು ಕೂಡ ನನ ಮಾತಾಡಗೊಡದೇ ಜಗಳಾಡಿ ಉಪವಾಸ ಕಳಿಸಿಕೊಟ್ಟಿ ಈಗ ಈ ನೋಟೀಸ ಮುಟ್ಟಿದ ೧೫ ದಿವಸಗಳಲ್ಲಿ ನನ್ನ ಹೆಂಡತಿಗೆ ದಾಗೀನೆ ಸಹಿತ ತಂದು ನನ್ನಲ್ಲಿಗೆ ಮುಟ್ಟಿಸು. ಇಲ್ಲದಿದ್ದರೆ ನೀನು ವಿಶ್ವಾಸಘಾತಕತನ ಮಾಡಿದ್ದಕ್ಕೆ ಕಾಯಿದೆ ಪ್ರಕಾರ ಸರಕಾರಿಮಾರಿಫತ್ ಇಲಾಜನಡಿಸಲಾದೀತು. ತಾ. ೯-೫-೩೦

ಸಹಿ- ದುರಗಪ್ಪಾ ಕಾಸಾರಜೋಗಿ ಅಲ್ಲಾಪೂರ ತಾ॥ ಹಾನಗಲ್ಲ ಜಿಲ್ಲಾ ಧಾರವಾಡ.

ಅತ್ಯಂತ ಧಾತುಪುಷ್ಟಿಕ ವೀರ್ಯವರ್ಧಕ
ಕಾಮೋದ್ದೀಪಕ ಶಕ್ತಿವರ್ಧಕ ಚೂರ್ಣ.

....೦....

ಈ ಚೂರ್ಣದ ಸೇವನೆಯಿಂದ ಅಕಾಲದಲ್ಲಿ (ಬಾಲ್ಯಾವಸ್ಥೆಯಲ್ಲಿ) ಬಲಾತ್ಕಾರದಿಂದ ಇಂದ್ರಿಯ ಪತನವನ್ನು ಮಾಡಿ ಉಂಟಾದ ದುರ್ಬಲತೆಯು ಹೋಗಲಾಡಿಸಿ, ಸ್ಥಿರವಾದ ಬಲವನ್ನು ಉಂಟುಮಾಡುತ್ತದೆ. ೧ರು. ೮ ತೊಲಾ ಚೂರ್ಣ

[illegible] ಗುಟಿಕಾ.

ಪ್ಲೇಗಿನಮೇಲೆ ಇಂಥ ಔಷಧವನ್ನು ಇಂದಿನವರೆಗೆ ಯಾರು ಶೋಧಿಸಿಲ್ಲವೆಂದು ಪ್ರತಿಜ್ಞಾಪೂರ್ವಕ ಹೇಳಬಹುದು. ೧ರು. ೧೬ ಮಾತ್ರೆಗಳು

ಜುಲಾಬಿನ ಗುಳಿಗೆಗಳು. ೧ರು, ೬೪ ಮಾತ್ರೆಗಳು

ಮಿಶ್ರಿ ಹುರುಕಿನ ಮುಲಾಮಿನ ಡಬ್ಬಿಗಳು.

೩ದೇ ದಿವಸಗಳಲ್ಲಿ ಗುಣಬಾರದಿದ್ದಲ್ಲಿ. ಹಣವನ್ನು ಮರಳ ಕಳುಹಿಸುವೆವು. ೩ ಡಬ್ಬಿಗಳ ಕ್ರಯ ೧ರು ಕಿಂಚಿತ ಹಾಕ

ಅಸ್ತಿಗತ ಜ್ವರವನ್ನು ಹೋಗಲಾಡಿಸಿ, **ರಕ್ತ**ವೃದ್ಧಿಯನ್ನು ಮಾಡುವದು. ೧ **ಬಾಟ್ಲಿಯ ಬೆಲೆ** ೨ರೂಪಾಯಿ.

ಮೂಲವ್ಯಾಧಿಯ ಔಷಧ.

ರಕ್ತಮೂಲವ್ಯಾಧಿ, ಮೊಳಕೆಮುಳ್ಳ ಮೂಲವ್ಯಾಧಿ ಮುಂತಾದ ಯಾವತ್ತು ತರದ ಮೂಲವ್ಯಾಧಿಗಳನ್ನು ಒಂದುವಾರದೊಳಗಾಗಿ ಗುಣ ಪಡಿಸುತ್ತದೆ- ೧ವಾರದ **ಔಷಧದ ಬೆಲೆ ೩ರೂಪಾಯಿ**

೧ ಹಿಂಗಾಷ್ಟಕ ಚೂರ್ಣ ೧ರು. ೧೦ ತೊಲೆ.

೨ ಸೀತೋಪಲಾದಿ ಚೂರ್ಣ ೧ರು. ೮ ತೊ.

ದಂತಮಂಜನ

೧ ಕುಪ್ಪಿಯ ಬೆಲೆ. ೩ ಆಣೆ. ೧ ರು. ೬ ಕುಪ್ಪಿಗಳು.

ಡಾ. ಎನ್. ಎಸ್. ಹೆಬಸೂರ
ಆಯುರ್ವೇದಿಸ್ಟ ಅ್ಯಂಡ ಬಾಯೋಕೆಮಿಸ್ಟ
ಧಾರವಾಡ.

ಒಬ್ಬ ಕಾರಕೂನನುಬೇಕು.

ಧಾರವಾಡ ವ್ಯಾಪಾರೋತ್ತೇಜಕ ಕಂಪನಿ ಲಿಮಿಟೆಡ್ ಧಾರವಾಡ ಈ ಅಂಗಡಿಯಲ್ಲಿ ಕ್ಲಾರ್ಕ ಜಾಗಿ ಒಂದು ಖಾಲೀ ಅದೆ. ಉತ್ತಮ ಕನ್ನಡ ಬರಹ ಬರೆಯತಕ್ಕವರು ಮತ್ತು ಜಮಾಖರ್ಚಿನಮಾಹಿತಿ[illegible]ವರು ಬೇಕಾಗಿರುತ್ತಾರೆ. ಪಗಾರ ಪ್ರಾರಂಭಕ್ಕೆ ರೂಪಾಯಿ ಸಿಗುವದು. ಬೇಕಾದವರು ಸದರ ಕಂಪನಿಗೆ ತಾರೀಖು ೧೦-೫-೩೦ ನೇ ತಾರೀಖಿನೊಳಗಾಗಿ ಹಿಂದೆ ಕೆಲಸಮಾಡಿದ ಸರ್ಟೀಫೀಕೇಟ ಸಹ ಲಗತ ಇಟ್ಟು ಅರ್ಜಿ ಮಾಡಬೇಕು.

ಧಾರವಾಡ **ಕೃ. ನ. ಜೋಯಿಸಿ.**
೨೮-೪-೩೦ **ಮ್ಯಾನೇಜಿಂಗ ಡಾಯರೇಕ್ಟರ**
ವ್ಯಾಪಾರೋತ್ತೇಜಕ ಕಂ, ಧಾರವಾಡ

ಜಾಹೀರನೋಟೀಸು.

ಧಾರವಾಡ ಡಿ॥ ಕೋರ್ಟಿನ ಡೆ॥ ನಾಝರರ ಕಡಿಂದಾ ಇದರ ಮೂಲಕಾ ಯಾವತ್ತು ಜನರಿಗೆ ತಿಳಿಯಬೇಕಲ್ಲಾ ಅಲ್ಪವಯಿ ಗುಂಡಾಬಾಯಿ ಕೋಂ ಶ್ರೀನಿವಾಸರಾವ ಪಾಟೀಲ- ಕುಲಕರ್ಣಿ ಸಾಕೀನ ಮುಡೂರ ಇವಳ ಬಾಬತು ಹಾನಗಲ್ಲ ತಾಲೂಕ ಮುಡೂರ ವ ಕ್ಯಾಸನೂರ ಗ್ರಾಮಗಳಲ್ಲಿ ಅಲ್ಪವಯಿಯ ಸರಕಾರಿ ಜಮೀನಿಯಲ್ಲಿರುವ ಗಂಧದ ಮರಗಳನ್ನು ಖುಲ್ಲಾ ರೀತಿಯಿಂದ ತಾ. ೨೨ ಮೇ ಸನ್ನ ೧೯೩೦ ಇಸ್ವಿ ರೋಜ ಗುರುವಾರದಿಂದ ಮುಡೂರ ಗ್ರಾಮದ ಚಾವಡಿಯಲ್ಲಿ ಲಿಲಾವ ಮಾಡಲ್ಪಡುವವು. ಲಿಲಾವಿನಲ್ಲಿ ಬೇಕಾದವರು ಹಾಜರ ಇರತಕ್ಕದ್ದು. ಲಿಲಾವಿನಲ್ಲಿ ಗಿಡಗಳನ್ನು ತಗೊಂಡವರು ಆಗಿಂದಾಗಲೇ ಹಣ ಕೊಟ್ಟು ಪಾವತಿ ಪಡಕೊಳ್ಳಬೇಕು. ಮಾರತಕ್ಕ ಗಿಡಗಳ ಮಾಹಿತಿ ಆಯಾ ಗ್ರಾಮಗಳ ಗೌಡರಕಡಿಂದಾ ಮಾಹಿತಿ ತಗೋಬೇಕು. ಇದಕ್ಕೆ ಹೆಚ್ಚಿಗೆ ಏನಾದರೂ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಯಲ್ಲಿ ಸೂಟಿ ದಿವಸಗಳ ಬಿಟ್ಟು ಸಮಕ್ಷಮ ಬಂದು ಮಾಹಿತಿ ಪಡಕೊಳ್ಳಬೇಕು ತಾ॥ ೫-೫-೩೦

ಆರ್, ಪ್ಪಿ, ಕುಸುನೂರ.
ಡಿಪ್ಯುಟಿ ನಾಝರ ಧಾರವಾಡ

R. N. 1443

ಸತ್ಯ ಪತ್ರ

- ಸ್ಥಾಪಕರು -
ಶ್ರೀ. ... ಕೊಳಿ.
(೧೯೨೦)

ಬೆಲೆ ೬ ಪೈ

ವರ್ಷ ೧) ಧಾರವಾಡ, ಗುರುವಾರ ತಾರೀಖು ೧೧ ನೇ ಮೇ ೧೯೨೧. (ಸಂಚಿಕೆ ೧೦

ಧಾರವಾಡ ಸ್ವದೇಶಿ ನೇಯುವ ಸಂಘ.

ನಮ್ಮ ಸಂಘದ ನೇಯುವ ಕಾರಖಾನೆಯಲ್ಲಿ ಖಾತ್ರಿಯ ದೇಶೀ ಗಿರಣಿಯ ನೂಲಿನಿಂದ ಅಥವಾ ಕೈನೂಲಿನಿಂದ ಕೈಮಗ್ಗದ ಮೇಲೆ ನೆಯ್ದ ಎಲ್ಲ ತರದ ದೇಶೀ ಶೀರಿ, ಛಾಂದು, ಧೋತರ ಉತ್ಪಾದನೆಗಳು ಯೋಗ್ಯದರದಿಂದ ದೊರೆಯುತ್ತವೆ.

ಸದ್ಯದಲ್ಲಿ ಊರೊಳಗಿನ ದೇಶೀ ಗಿರಣಿಯ ನೂಲಿನ ವಸ್ತ್ರಗಳನ್ನು ವಿಶ್ವಾಸವಿಟ್ಟು ಕೊಳ್ಳಲಿಕ್ಕೆ ಹೋದ ಗಿರಾಕಿಗಳಿಗೆ ಅನೇಕರು ವಿಲಾಯತೀ ನುಕ್ಸ ಜಪಾನೀ ನೂಲಿನ ವಸ್ತ್ರಗಳನ್ನು ಕೊಟ್ಟು ಮೋಸಿಸುತ್ತಿದ್ದಾರೆ. ಈ ಪ್ರಕಾರ ಜನರು ಮೋಸ ಹೋಗದೆ ಖಾತ್ರಿ ದೇಶೀ ವಸ್ತ್ರಗಳನ್ನು ಕೊಂಡು ಉಪಯೋಗಿಸಿ "ಸ್ವದೇಶೀ" ವ್ರತವನ್ನು ಅಮಲಿನಲ್ಲಿ ತೀವ್ರ ತರಲಿಕ್ಕೆ ಸಹಾಯ ಮಾಡಬೇಕೆಂಬ ಉದ್ದೇಶದಿಂದಲೇ ಈ ಸಂಘವು ಸ್ಥಾಪಿಸಲ್ಪಟ್ಟಿದೆ.

ಈ ಕಾರಖಾನೆಯಲ್ಲಿ ಇದೇ ದೇಶದಲ್ಲಿ ತಯಾರಾದ ಬಣ್ಣಗಳನ್ನೇ ಉಪಯೋಗಿಸಲ್ಪಡುತ್ತವೆ. ದಕ್ಷರಿಂದ ಜನರು ನಮ್ಮಲ್ಲಿ ಅಥವಾ ಪತ್ರದ್ವಾರಾ ವಸ್ತ್ರಗಳನ್ನು ಖರೀದಿಸಿಕೊಂಡು ಮಾತ್ರ ವಹಿಸಿಕೊಳ್ಳಬಹುದು.

ಸಂಘದ ಕಾರಖಾನೆಯು ಹಾಲಗೇರಿ ಕೆಳಗಿನ ಓಣಿಯಲ್ಲಿದ್ದಂಥ ನವಲೂರ ದೇಸಾಯರ ವಾಡೆದ ಹಿಂದಿನಭಾಗದಲ್ಲಿರುವದು.

ಪತ್ತೆ- ವ್ಯವಸ್ಥಾಪಕ ಸ್ವದೇಶೀ ನೇಯುವ ಸಂಘ
ಮೋತೀಬಾವಗಲ್ಲಿ ಧಾರವಾಡ

WANTED.

Agents who have a perfect knowledge of business line and best influences to canvass FORWARD BUSINESS of cotton Grains, Seeds, and bullions from Gadag, Bijapur, Bagalkot, Bellary and Davangeri centres. Liberal commission will be allowed according to qualification

Apply to
UMIASHANKAR VIRGI.
HUBLI

ಮಂದಗಾಮಿಗಳ ಪರಿಷತ್ತು.

ಮುಂಬಯಿಯಲ್ಲಿ ಇನಾಮದಾರ, ಖಾಸಗಾರ, ನಾಮದಾರ, ದಿವಾನ ಮೊದಲಾದ ಪದವಿಗಳಿಂದಲಂಕೃತರಾದ ಮಂದಗಾಮಿಗಳ ಅಲ್ಲಲ್ಲ. ಮವಾಳರ ಈಗ "ಲಿಬರಲ್ ಪಾರ್ಟಿ" ಎಂದು ಹೆಸರಿಟ್ಟುಕೊಂಡವರ ಪರಿಷತ್ತು ಕೂಡಿತ್ತು. ಅಧ್ಯಕ್ಷಸ್ಥಾನವನ್ನು ವಿಲಾಯತಿಯ ಪ್ರವಾಸ ಮಾಡಿಬಂದ, ಒಂದಾನೊಂದು ಕಾಲದಲ್ಲಿ ಗವರ್ನರರಾಗುವರೆಂದು ಸುದ್ದಿ ಹಬ್ಬಿದ ನಮ್ಮ ನಾ. ಶಾಸ್ತ್ರಿಗಳವರು ಅಲಂಕರಿಸಿದ್ದರು. ಸ್ವಾಗತಾಧ್ಯಕ್ಷ ದಿನಶಾ ವಾಚ್ಛಾರವರು. ಅಂತೂ ಸಭೆಯು ಇವರೆಲ್ಲರಿಂದ ತುಂಬಿತ್ತು. ಆದರೆ ಮಂಟಪವೆಲ್ಲ ತುಂಬಿಹೋಗಿತ್ತೆಂತಿಲ್ಲ. ಇವರ ಹೊರ್ತು ಅನ್ಯರಾರೂ ಇದ್ದಿಲ್ಲವೆಂಬರ್ಥ.

ಈ ಲಿಬರಲ್ ಪಾರ್ಟಿಯ ಪರಿಷತ್ತಿನಲ್ಲಿ ಪ್ರಾಂತಿಕ ಸ್ವರಾಜ್ಯವನ್ನು ಈಗಲೇ ಕೊಡಬೇಕು. ವಿಲಷ್ಟ ಸರಕಾರದಲ್ಲಿ ಅಷ್ಟರ ಮೊದಲಾದ ಖಾತೆಗಳನ್ನು ಬದಲಿಸಿ ಎಲ್ಲವನ್ನು ದಿವಾನರ ವಶ ಮಾಡಬೇಕು. ಲಷ್ಕರದ ಖರ್ಚನ್ನು ಕಡಿಮೆಮಾಡಬೇಕು. ಯುರೋಪಿಯನ್ ಇಂಡಿಯನ ಸ್ಥಾನದಲ್ಲಿ ಹಿಂದೀ ಅಧ್ಯಕ್ಷರನ್ನು ಇಡಬೇಕು. ಇವೇ ಮೊದಲಾದ ಠರಾವುಗಳು ಪಾಸಾದವು. ನಾ. ಶಾಸ್ತ್ರಿಯವರ ಭಾಷಣವು ಮ. ಗಾಂಧಿಯವರ ತತ್ವವು ಒಪ್ಪಿಕೊಳ್ಳುವಂತಿದ್ದರೂ ಅದರ ಕಾರಣವು ಮಾತ್ರ ಸಾಮದಾರರಿಗೆ ಬಾಧಿಸುವದು. ದಬ್ಬಾಳಿಕೆಯು ಅನಿಷ್ಟವೆಂದು ಅವರ ಮತವಿದ್ದರೂ ಸರಕಾರಕ್ಕೆ ಅವರು ಹೇಳಲಿಕ್ಕೆ ಹಿಂದುಮುಂದು ನೋಡುತ್ತಿರುವರು. ಅಸಹಕಾರಕ್ಕಿಂತಲೂ ಸಹಕಾರವೇ ಒಳ್ಳೇದೆಂದು ಅವರ ಅಭಿಪ್ರಾಯವಾಗಿದೆ. ಸ್ವಾಗತಾಧ್ಯಕ್ಷರೂ ಸಾಧಾರಣವಾಗಿ ಇದೇ ಅರ್ಥದ ಭಾಷಣವನ್ನು ಮಾಡಿ, ಸ್ವರಾಜ್ಯವು ಬೇಕೇಬೇಕೆಂದರು. ಪರಿಷತ್ತಿನಲ್ಲಿ ಠರಾವು ತಂದ, ಅನುಮೋದಿಸಿದ, ಭಾಷಣ ಮಾಡಿದ ಎಲ್ಲ ಜನರಲ್ಲಿಯೂ ಸ್ವರಾಜ್ಯವು ಬೇಕು. ಅದು ಈಗಲೇ ಅರ್ಧ- ಮರ್ಧವಾದರೂ ಬೇಕು. ಅದಕ್ಕಾಗಿ ಸಹಕಾರವೇ ಉತ್ತಮವೆಂದು ಹೇಳಿದ್ದರು

ಪರಿಷತ್ತಿನಲ್ಲಿಯ ಇನ್ನೊಂದು ಮಹತ್ವದ ಸಂಗತಿಯೆಂದರೆ ಕಾಂಗ್ರೆಸದಂತೆ ತಮ್ಮ ಮತವನ್ನು ಪಸರಗೊಳಿಸುವ ಪ್ರಚಾರಕರನ್ನು ಕಳಿಸಬೇಕು. ಫಂಡನ್ನು ಕೂಡಿಸಬೇಕು. ಎಂದು ನಿರ್ಣಯವಾಯಿತು. ಲಿಬರಲ್ ಪಾರ್ಟಿಯವರು ಪ್ರಚಾರಕರನ್ನು ಕಳಿಸುವದೆ ಸ್ವರಾಜ್ಯವು ಬೇಕೆಂತಲೇ ಹೇಳುವರು. ಅದಕ್ಕಾಗಿ ಸಹಕಾರ ಮಾಡಿರೆನ್ನುವರು. ಈಗ ಜನರು ಸಹಕಾರ ಮಾಡಿ ಏನು ದೊರಕಿಸಿದಿರೆಂದು ಕೇಳಿದರೆ ಉತ್ತರವೇನೆಂದು ಕೊಡುವರೆಂಬುದು ನಮಗಂತೂ ತಿಳಿಯದು

ವಾಗಿದೆ. ಸದ್ಯದ ಕೌನ್ಸಿಲಿನಲ್ಲೆಲ್ಲ ಈ ಲಿಬರಲ್ ಪಾರ್ಟಿಯವರೇ ತುಂಬಿದ್ದು, ಬಹು ಮತವು ಇವರ ಕಡೆಗೇ ಇರುವದು. ಈ ಕಾಲದಲ್ಲಿ ಜನರಿಗೆ ಹಿತಕಾರಿಗಳಾದ ಯಾವ ಠರಾವುಗಳನ್ನು ಪಾಸುಮಾಡಿರುವರು?

ಇವರು ಕೌನ್ಸಿಲಿನಲ್ಲಿ ಸೇರಿದರು. ಜನರನ್ನು ಧಾರಣೆಗೆಂದು ಲಕ್ಷಾವಧಿ ರೂ.ಗಳು ನಿಸ್ತಾರಣವಾಗಿ ಸುಧಾರಣೆಯ ಹೆಸರಿನಿಂದ ಖರ್ಚಾದವು. ದಿವಾಣದ ಪಗಾರಕ್ಕೆಂದು ಲಕ್ಷಾವಧಿ ರೂ. ಗಳು ಇವರ ಕೈಯಲ್ಲಿ ಬಿದ್ದವು. ಈ ವ್ಯವಸಾಯದಲ್ಲಿ ಜನರ ಸುಖಕ್ಕೆಂದು ಬಿಲ್ಲುಗಳಿಗಾಗಿ ಹಣವು ಖರ್ಚಾಗ ತೊಡಗಿತು. ಇತ್ತ ರೇಲ್ವೆಯ ದರವು ಹೆಚ್ಚಿತು. ಕಾರ್ಡು, ಸ್ಟಾಂಪುಗಳ ದರವು ಹೆಚ್ಚಿತು. ಹೊಸ ಕರಗಳಂತೂ ಕೂಡಿದೇ ಕುಳಿತವು. ಒಪ್ಪಂದಿನ ಖರ್ಚಿನಲ್ಲಿ ತಿಂಗಳಮಾತ್ರವೂ ಕೊರತೆಯಾಗದೆ ಗುಂಪೆಕೂಳ ಹೆಚ್ಚಿನ ಖರ್ಚಾಯಿತು. ದಾರಿದ್ರ್ಯಕೆಯಂತೂ ಸರಿಯೇ ಸರಿ. ಅನ್ಯಾಯದ ಶಿಕ್ಷೆಗಳಿಗಂತೂ ಕೊರತೆಯೇ ಇಲ್ಲ. ಅಂದ ಬಳಿಕ ಮಹಾಳ ಮತ ಇಲ್ಲಲ್ಲ ಈ ಲಿಬರಲ್ ಮತದ ಪ್ರಸಾರಕ್ಕಾಗಿ ಹೊರಟ ಪ್ರಾಮಾಣಿಕ ಮಹಾನುಭಾವರು ಜನರಿಗೆ ಏನೆಂದು ಹೇಳುವರು? ಕರವನ್ನು ಹೆಚ್ಚಿಸಿದ್ದು ನಮ್ಮ ಕಡೆಗಾಗಿತೆಂದು ಹೇಳುವರೇ? ರೇಲ್ವೆ-ಫ್ರೇಟ್ಟು ದರಗಳು ಹೆಚ್ಚಾಗಿವೆ ನಮಗೆ ಕೂಡಲಿಲ್ಲೆನ್ನುವರೆ? ದೇಶದ ಮುಂದಾಳುಗಳು ಸುರಂಗ ಕಂಡಿದ್ದಾರೆ ನಾವು ಸುಮ್ಮನೆ ಕುಳಿತಿದ್ದೇವೆ. ನಮ್ಮಂತೆ ಮತ ಕೊಡಿರೆನ್ನುವರೇ? ಅನ್ನುವದಾದರೂ ಏನು? ಪ್ರಚಾರಕರು ಮಾಡುವದೇನು?

ಆಗಲಿ ಇದು ವರೆಗೆ ಲಿಬರಲ್ ಪಾರ್ಟಿಯವರು ಸ್ವರಾಜ್ಯ ವೆಂದರೆ ಬೆಚ್ಚಿ ಬೀಳುತ್ತಿದ್ದರು. ಇನ್ನು ನಾವು ಅಪಾತ್ರರೆನ್ನುತ್ತಿದ್ದರು. ಈ ಅಸಹ ಪ್ರಭಾವದಿಂದ ಅದೆಲ್ಲ ಹೋಗಿ ಸ್ವರಾಜ್ಯವು ಬೇಕು ಈಗಲೇ ಪ್ರಾಂತಿಕ ಸ್ವಾತಂತ್ರ್ಯವೂ, ಅರ್ಧ- ಮಧ್ಯವರಿಷ್ಟ ಸ್ವಾತಂತ್ರ್ಯವೂ ಬೇಕೆನ್ನುತ್ತಿದ್ದಾರೆ ಆದರೆ ಆ ಸ್ವರಾಜ್ಯ ಸಂಪಾದನೆಯ ಮಾರ್ಗದಲ್ಲಿ ಮಾತ್ರ ಸಹಕಾರವೇಕೆನ್ನುತ್ತಾರೆ. ಈ ಅಸಹ ಚಳವಳಿಯು ಹಾಗೇ ನಡೆದರೆ ಇವರೂ ಅಲ್ಪಾವಧಿಯಲ್ಲಿ ತಾವಾಗಿಯೇ ಬಂದು ಕೂಡುವರು. ಕೂಡಲೇಬೇಕು. ಇನ್ನೇನು ಬಹುದಿವಸ ಹೋಗಲಾರವು.

ಮೌ. ಹಜರತ ಮೋಹಾನಿಯವರ ಖಟ್ಲೆಯು ಹಾಯಕೋರ್ಟಿನಲ್ಲಿ

―೦―

ಮೌ. ಹಜರತ ಮೋಹಾನಿಯವರ ಮೇಲೆ ೧೨೪ ಹಾಗೂ ೧೫೩ ಅ ಖಟ್ಲೆಯು ಅಹಮುದಾಬಾದಿನಲ್ಲಿ ನಡೆದಿತ್ತಷ್ಟೇ? ಅದರಲ್ಲಿ ಐವರು ಜೂರರು ಇದ್ದರು. ೧೨೪ನೇ ಕಲಮಿನ ಖಟ್ಲೆಯಲ್ಲಿ ಜೂರರರು ಮೌಲಾನಾ ಸಾಹೇಬರು ನಿರ್ದೋಷಿಗಳೆಂದು ಹೇಳಲು ಜಡ್ಜ ಸಾಹೇಬರು ತಮ್ಮ ಕಲ್ಪನೆಯನ್ನು ಬಿಟ್ಟುಕೊಡದೆ ಜೂರರು ಹೇಳಿದ ಸಂಗತಿಯು ಸಮಂಜಸವಾಗಿಲ್ಲವೆಂದಲೂ ಅದು ತಮಗೆ ಸಮ್ಮತವಿಲ್ಲವೆಂದಲೂ ಹೇಳಿ, ಜೂರರು ನಿರ್ದೋಷಿಯೆಂದು ಹೇಳಿದ್ದರಿಂದ ಶಿಕ್ಷೆಗೊಳಿಸಲು ಬರುವದಕ್ಕಾಗಿ ಆರೋಪಿಯು ದೋಷಿಯೆಂಬುದಾಗಿ ತೋರಿಸಿ ಆ ಕಲಮಿನ ಖಟ್ಲೆಯನ್ನು ಹಾಯಕೋರ್ಟಿಗೆ ಕಳಿಸಿದ್ದರು.

೧೫೩ ಅ ಕಲಮಿನ ಖಟ್ಲೆಯಲ್ಲಿ ಅದೇ ಐವ್ವರು ಜೂರರು ಅನೇಕಮತದಂತಿದ್ದರು. ಅನೇಕರು ಮೌಲಾನಾ ಸಾಹೇಬರು ನಿರ್ದೋಷಿಯೆಂದು ಹೇಳಿದ್ದರು. ಅನೇಕರ ಮತವು ನ್ಯಾಯಾಧೀಶರಿಗೆ ಬಂಧನಕಾರಕವಾಗದ್ದರಿಂದ ಜಡ್ಜರವರು ಆ ಕಲಮಿನ ಖಟ್ಲೆಯಲ್ಲಿ ಮೌಲಾನಾ ಸಾಹೇಬರು ದೋಷಿಯೆಂದು ನಿರ್ಧರಿಸಿ ತೀರ್ಪು ಕೊಟ್ಟಿದ್ದರು, ಹಾಗಾದರೆ ಆ ನೇಮದವರ್ಯಾಕೆ? ಜೂರರ್ಯಾಕೆ? ಈ ಗೊಂದಲವ್ಯಾಕೆ? ಜಡ್ಜರು ತಮ್ಮ ಮನಸಿಗೆ ಬಂದಂತೆ ತೀರ್ಪು ಕೊಡಬಹುದಾಯಿತು. ಈ ಬಗೆ ಸವ್ಯಾಪಸವ್ಯಗಳೇ ತಿಳಿಯದಾಗಿದೆ. ಒಹಳೆನಾದ ಮುಂದಿಯ ಕಣ್ಣಲ್ಲಿ ಮಣ್ಣುಗ್ಗು ನಡಕ್ಕೆರಬಹುದು, ಏನಿರುವದೋ ದೇವರೇ ಬಲ್ಲ.

ಮುಳಶೀ ಸತ್ಯಾಗ್ರಹ ಪ್ರಕರಣ.

―(೦)―

ಕಂಪನೀ ನೌಕರರ ಲೀಲೆಗಳು

―(೧)―

ವರ್ತಮಾನ ಪತ್ರದ ರಿಪೋರ್ಟರರಿಗೆ ಪೈಗಳ ವೃಷ್ಟಿ

―೦―

೬-೫-೨೩ ದಿವಸ ಶ್ರೀ. ಸಾಠೆ ಹಾಗೂ ಭಾಸ್ಕರ ಸಾಹೇಬ ಗೋಖಲೆ ಇವರ ನೇತೃತ್ವದ ಕೆಳಗೆ ೧೦೦-೧೫೦ ಮಾವಳೇ ಜನರೂ ೧೦೦-೧೨೫ ಮಾವಳೇ ಸ್ತ್ರೀಯರೂ ೪೦-೫೦ ಹುಡುಗರೂ ಸತ್ಯಾಗ್ರಹಕ್ಕಾಗಿ ಹೋಗಿ ಒಡ್ಡಿಯ ಮೇಲಿನ ಕಲ್ಲುಗಳನ್ನು ಕೆಳಗೆ ಒಗೆಯ ಹತ್ತಿದರು. ೧೦ ಅ ಮಿನಿಟುಗಳಲ್ಲಿಯೇ ಕಂಪನಿಯ ನೌಕರರು ಕೆಳಗಿನಿಂದ ಬರತೊಡಗಿದರು. ಕೂಡಲೆ ಶ್ರೀ. ಸಾಠೆ ಇವರು ನೌಕರರಿಗೆ ಕಲ್ಲುಗಳು ಬಡೆಯಬಹುದೆಂದು ಆ ಕಾರ್ಯವನ್ನು ನಿಲ್ಲಿಸಿದರು. ಕಂಪನಿಯ ನೌಕರರು ಅಲ್ಲಿಂದ ಏಳದ್ದನ್ನು ಕಂಡು ಮಾವಳೇ ಜನರಿಗೆ ಮನೆಗೆ ಹೋಗಲು ಶ್ರೀ. ಸಾಠೆ ಇವರು ಹೇಳಿದರು, ಅಷ್ಟರಲ್ಲಿ ಟಾ. ಕಂಪನಿಯ ಮ್ಯಾನೇಜರ ಹುಕುಮು; ಶ್ಯಾಮೇರಾವರ ಸ್ವಾರಿಯು ಬಂದಿತು. ಶ್ಯಾಮೇರಾವರು ಎಲ್ಲವನ್ನು ವಿಚಾರಿಸಿ ಎಲ್ಲ ವೃತ್ತಪತ್ರದ ರಿಪೋರ್ಟರರಿಗೆ ವಿಶೇಷತಃ ಕ್ರಾನಿಕಲ್ ಪತ್ರದ ರಿಪೋರ್ಟರರಿಗೆ ಪೈಗಳ ವೃಷ್ಟಿಯನ್ನು ಸುರಿಸಿದರು. ಕಂಪನಿಯ ನೌಕರರು ಮಾವಳೇ ಜನರನ್ನು ಹೊಡೆಯತೊಡಗಿದರು. ೧೨ ಜನರನ್ನು ಕಂಪನಿ ನೌಕರರು ಚಾಬುಕದಿಂದಲೇ ಹೊಡೆಯತೊಡಗಿದರು. ಹುಡುಗರಿಗೂ ಒಳ್ಳೇ ತಾಗಿ ಏಟುಗಳು ಬಿದ್ದವು. ಶ್ರೀ. ಸಾಠೆ ಇವರಿಗೆ ಹೊಡೆತಗಳು ಬಹಳ ಬಿದ್ದದ್ದರಿಂದ ಇವರು ಮೂರ್ಛಿತರಾದರು. ಅವರನ್ನು ಕರೆದುಕೊಂಡು ಹೋಗಲು ಬಂದ ಸತ್ಯಾಗ್ರಹದಲ್ಲಿ ಭಾಗ ತೆಗೆದುಕೊಳ್ಳದ ಜನರಿಗೂ ಕಂಪನಿಯ ನೌಕರರಿಂದ ಏಟುಗಳು ಬಿದ್ದವು. ಪ್ರೋ. ಸಿಪಾಯರು ನೋಡುತ್ತಲೇ ನಿಂತಿದ್ದರು ಹಸ್ತೇ ಇಲ್ಲ ಅವರ ಹೆಸರುಗಳನ್ನು ಸಹ ಬರೆದುಕೊಂಡರು. ಈ ನೌಕರರು ಸ್ತ್ರೀಯರನ್ನು ಸಹ ಬಿಡಲಿಲ್ಲ. ಅವರ ಅಬ್ರುಗಳನ್ನು ಸಹ ತೆಗೆದುಕೊಂಡರು. ಪ್ರೋ. ಸಿಪಾಯರ ಲೀಲೆಯನ್ನು ಶ್ರೀ. ರಾನಡೆ ಇವರು ಡೆ. ಪೊ. ಸು. ಮಿ. ತಿಂದೆ ಇವರಿಗೆ ತೋರಿಸಿದರು. ಹೊಡೆತ ತಿಂದ ವೀರರು ಜಯಘೋಷಮಾಡುತ್ತಾ ಮನೆಗೆ ಬಂದರು. ಕಲೆಕ್ಟರರು ಕ್ಯಾಂಪಿನ ಕಡೆಕ ಬಂದು ಹಾಗೇ ತಿರುಗಿದರು. ಒಬ್ಬರೇ ಇಬ್ಬರೇ ಸತ್ಯಾಗ್ರಹಿಗಳು ತಿರುಗುವದು ಕಠಿಣವಾಗಿದೆ. ಸತ್ಯಾಗ್ರಹಿಗಳ ಮೇಲಿನ ಖಟ್ಲೆಗೆ ತೊಂದರೆಯಾಗಬಾರದೆಂದು ಮುಳಶಿಯಲ್ಲಿಯೇ ತಾತ್ಪುರ್ತಿಕ ಕೋರ್ಟೊಂದು ಸ್ಥಾಪನೆಯಾಗಿದೆ. ಮುಂದಾಳುಗಳು ಪ್ರಚಾರಕ್ಕಾಗಿ ಹೊರಟಿರುವದರಿಂದ ಸುರ್ಕ ಸತ್ಯಾಗ್ರಹವು ಬಂದಿಡಲ್ಪಟ್ಟಿದೆ. ಪರಾಂಜಪೆಯವರ ಮೇಲಿನ ಖಟ್ಲೆಯು ೯-೫-೨೩ಕ್ಕೆ ಇತ್ತು. ಇನ್ನೂ ನಿರ್ಣಯವು ಹೊರ ಬಿದ್ದಿಲ್ಲ.

ಮುಳಶೀ ಸತ್ಯಾಗ್ರಹ ಪ್ರಕರಣ

―೦―

“ಸ್ವರಾಜ್ಯ” “ರಾಜಕಾರಣ” ಗಳ ಸಂಪಾದಕರಿಗೆ ಆರಾರು ತಿಂಗಳ ಸಕ್ರಮ ಶಿಕ್ಷೆ.

―೦―

ಸ್ವರಾಜ್ಯದ ಪ್ರೊ. ಶಿವರಾಮ ಮಹಾದೇವ ಪರಾಂಜಪೆ, ರಾಜಕಾರಣದ ಶ್ರೀ. ದಾಮಲೆ ಹಾಗೂ ಡಾ. ಘಾಟಕ. ಎಂ, ಆರ್,ಸಿ, ಎಸ್, ಎಫ್,ಆರ್, ಸಿ, ಯಸ್, ಎಂ, ಡಿ, ಶ್ರೀ ವಾಸುದೇವರಾವ ಜೋಶಿ ಮೊದಲಾದ ೨೫ ಜನರ ಮೇಲೆ ಮುಳಶೀ ಸತ್ಯಾಗ್ರಹಕ್ಕಾಗಿ ಖಟ್ಲೆಯು ನಡೆದಿತ್ತಷ್ಟೇ? ನಿರ್ಣಯವು ಹೊರ ಬಿದ್ದಿತು.-ಪ್ರೊ. ಪರಾಂಜಪೆ, ಶ್ರೀ. ದಾಮಲೆ, ಡಾ. ಘಾಟಕ. ಇವರಿಗೆ ಆರಾರು ತಿಂಗಳ ಸಕ್ರಮಶಿಕ್ಷೆಯಾಯಿತು. ಉಳಿದವರಿಗೆ ೧ ರಿಂದ ೬ ತಿಂಗಳ ವರೆಗೆ ಸಾಧಾ-ಸಕ್ರಮ ಶಿಕ್ಷೆಗಳು ಹೇಳಲ್ಪಟ್ಟಿವೆ,ಒಬ್ಬರಿಗೆ ದಂಡ ಶಿಕ್ಷೆಗಳೆರಡೂ ಹೇಳಲ್ಪಟ್ಟಿವೆ. ಇವರಲ್ಲದೆ ಮತ್ತೆ ೩೩ ಜನರ ಮೇಲಿನ ಖಟ್ಲೆಯು ನಡೆದಿದೆ.

ಅಲ್ಲಲ್ಲಿಯ ಶ್ರೀ. [illegible] ಸುದ್ದಿಗಳು ಬರಬೇಕಾಗಿದೆ.

ಬಳ್ಳಾರಿಯಲ್ಲಿ ೧೪೪ ರ ಸುಳಿದಾಟ.

—೦—

ಬಳ್ಳಾರಿ ಜಿಲ್ಹಾ ಕಾಂಗ್ರೆಸಕಮೀಟಿಯ ಪ್ರೆಸಿಡೆಂಟ ಹಾಗೂ ಸೆಕ್ರೆಟರಿಗಳಾದ ಶ್ರೀ. ಬೆಲ್ಲದೋಣಿ ಭೀಮರಾಯರು ಬಿ, ಎ, ಬಿ, ಎಲ್, ಶ್ರೀ. ಎಸ್, ಸಂಜೀವರಾಯರು ಬಿ. ಎ. ಈ ಉಭಯತರ ಮೇಲೆ ೧೪೪ ಹೊರಟಿದ್ದು ೧೭-೫-೩೩ ನೇ ದಿವಸ ಡಿ. ಮ್ಯಾಜಿಸ್ಟ್ರೇಟರ ಮುಂದೆ ಖಟ್ಲೆಯು ನಡೆಯುತ್ತಿದ್ದದೆ. ಅಂತೂ ಬಳ್ಳಾರಿಯಲ್ಲಿಯೂ ೧೪೪ ರ ಸುಳಿದಾಟವು ನಡೆದಂತಾಯಿತು.

ಕರ್ನಾಟಕ ಮಹಿಳಾ ವಿದ್ಯಾಲಯ ಧಾರವಾಡ

ಮಹಿಳಾ ವಿದ್ಯಾಲಯವು ಇದೇ ವೈಶಾಖದ ಪ್ರತಿಪದೆಯ ದಿವಸದಿಂದ (ಶುಕ್ರವಾರ ತಾ. ೨೬-೫ ೧೯೩೩) ಪ್ರಾರಂಭವಾಗುವದು. ಈ ವಿದ್ಯಾಲಯಕ್ಕೆ ಹೊಸದಾಗಿ ಸೇರತಕ್ಕ ವಿದ್ಯಾರ್ಥಿನಿಯರು ವೈಶಾಖ ಮಾಸದ ಅಷ್ಟಮಿಯೊಳಗಾಗಿ ತಮ್ಮ ಹೆಸರನ್ನು ರಜಿಸ್ಟರದಲ್ಲಿ ದಾಖಲ ಮಾಡಿಸಬೇಕು

ಸ. ನಾ. ಕುಂಭಕೋಣಮ್
ವ್ಯವಸ್ಥಾಪಕ, ಕ. ಮ. ವಿದ್ಯಾಲಯ

* * * * *

ಲಾರ್ಡ ರೀಡಿಂಗ, ಹಾಗೂ ಲಾರ್ಡ ಕರ್ಜನರು ರಾಜೀನಾಮೆಯನ್ನು ಕೊಡುವರೆಂಬ ಹಾರು ಸುದ್ದಿ.

ಮಹಾತ್ಮರ ಪತ್ನಿಯವರಿಗೆ, ಮಹಾತ್ಮರ ಭೆಟ್ಟಿಯಾಗಗೊಡಲಿಲ್ಲವಂತೆ.

ದೇ. ಭ. ಗಂಗಾಧರರಾವ ದೇಶಪಾಂಡೆಯವರ ಬಿಡುಗಡೆಯು ಇದೇ ತಿಂಗಳ ೨೩ ಕ್ಕೆ ಆಗಬಹುದು. ಅಂದೇ ಆರುತಿಂಗಳ ಅವರ ಶಿಕ್ಷೆಯ ಅವಧಿಯು ತೀರುವದು.

ವಿಜಯದ ಮೇಲೆ ಹಾಯಕೋರ್ಟಿನಿಂದ ನೋಟೀಸು ಹೊರಟದ್ದಕ್ಕಾಗಿ ಸ್ವತಃ ವಿಜಯಕಾರರೇ ಹಾಯಕೋರ್ಟಿಗೆ ಹೋಗಿರುವರಷ್ಟೇ? ಇನ್ನೂ ಅಲ್ಲಿಂದ ಯಾವ ಸುದ್ದಿಯೂ ಬರಲಿಲ್ಲ.

ಇಟಾಲಿ- ಅಂಗೋರಾ ತಹವು ಸುಳ್ಳೆಂತಲೂ, ಇಟಾಲಿ- ಕಾನಸ್ಟಾಂಟಿನೋಪಲ ತಹವಾಗಿರಬಹುದೆಂತಲೂ ಹಾಲಿಕೆಯ ವಾರ್ತೆ.

ಮುಳಸೀ ಕೆರೆಯ ಕಾರ್ಯವನ್ನು ಬಂದಿಸುವದಕ್ಕಾಗಿ ಸತ್ಯಾಗ್ರಹಿಗಳು ಕಂಪನಿಯ ಕಡೆಗೆ ವಿನಂತಿಯ ಅರ್ಜಿಯನ್ನು ಮಾಡಿರುವರು. ಇದೇ ಅರ್ಥದ ಅರ್ಜಿಯನ್ನು ಕಲೆಕ್ಟರರ ಕಡೆಗೂ ಕಳಿಸಿರುವರು.

ಜಾಹೀರನೋಟೀಸು.

ಧಾರವಾಡ ಡಿ॥ ಕೋರ್ಟಿನ ಡೆ॥ ನಾಝರರ ಕಡೆಯಿಂದ ಇದರ ಮೂಲಕ ಯಾವತ್ತು ಜನರಿಗೆ ತಿಳಿಯಬೇಕೆಲ್ಲಾ ಅಪ್ಪಯ್ಯಯ ಗುಂಡಾಚಾರ್ಯ ತರ್ಫ ಶ್ರೀನಿವಾಸರಾವ ಪಾಟೀಲ- ಕುಲಕರ್ಣಿ ಸಾಕೀನ ಮುಗದೂರ ಇವರ ಬಾಬತು ಹಾನಗಲ್ಲ ತಾಲೂಕ ಮುಗದೂರ ವ ಕ್ಯಾಸನೂರ ಗ್ರಾಮಗಳಲ್ಲಿ ಅಪ್ಪಯ್ಯಯ ಸರಕಾರಿ ಜಮೀನಿನಲ್ಲಿರುವ ಗಂಧದ ಮರಗಳನ್ನು ಉಘಡ ರೀತಿಯಿಂದ ತಾ ೨೫ ಮೇ ಸನ್ನ ೧೯೩೩ ಇಸ್ವಿ ರೋಜ ಗುರುವಾರದಿಂದ ಮುಗದೂರ ಗ್ರಾಮದ ಚಾವಡಿಯಲ್ಲಿ ಲಿಲಾವ ಮಾಡಲ್ಪಡುವವು. ಲಿಲಾವಿನಲ್ಲಿ ಬೇಡತಕ್ಕವರು ಹಾಜರ ಇರತಕ್ಕದ್ದು. ಲಿಲಾವಿನಲ್ಲಿ ಗಿಡಗಳನ್ನು ತಗೊಂಡವರು ಆಗಿಂದಾಗಲೇ ಹಣ ಕೊಟ್ಟು ಪಾವತಿ ಪಡಕೊಳ್ಳಬೇಕು. ಸದರಹು ಗಿಡಗಳ ಮಾಹಿತಿ ಆಯಾ ಗ್ರಾಮಗಳ ಗೌಡರಕಡಿಂದಾ ಮಾಹಿತಿ ತಗೋಬೇಕು. ಇದಕ್ಕೆ ಹೆಚ್ಚಿಗೆ ವಿಶಾದಿಕ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಯಲ್ಲಿ ಸೂಟಿ ದಿವಸಗಳ ಬಿಟ್ಟು ಸಮಕ್ಷಮ ಬಂದು ಮಾಹಿತಿ ಪಡಕೊಳ್ಳಬೇಕು **ತಾ॥ ೫-೫-೩೩**

ಆರ್, ಹೈ, ಕುಸುನೂರ.
ಡಿಪುಟಿ ನಾಝರ ಧಾರವಾಡ

ರತ್ನಾಗಿರಿ ಜಿಲ್ಹಾ ಕಾ. ಪ. ಪರಿಷತ್ತು ದೇ. ಭ. ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ನಾಗಪೂರ ಪ್ರಾ, ಕಾ. ಪ. ಪರಿಷತ್ತೂ ಕೂಡಿತ್ತು.

ದಾವಣಗೇರಿಯಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಇದೇ ತಿಂಗಳ ೧೩-೧೪ ಕ್ಕೆ ಕೂಡುವದು. ಪರಿಷತ್ತಿನ ತಯಾರಿಯು ಭರದಿಂದ ನಡೆದದೆ.

---

೯ ರೂ. ಇನಕಮ್‌ಟ್ಯಾಕ್ಸಿಗಾಗಿ ೧೦೦-೧೫೦ ರೂ. ಗಳ ಮಾಲನ್ನು ಜಪ್ತಮಾಡಿರುವರೆಂದೂ, ಅದರ ಯೋಗ್ಯ ನಿರ್ಣಯವಾಗಬೇಕೆಂದೂ ಶ್ರೀ. ಅ. ದಾ. ಕಾಳೆಯವರ ಪ್ರಯತ್ನವು ನಡೆದದೆ.

ಪ್ರೆಸ್ ಆಕ್ಟ ರದ್ದಾದ್ದರಿಂದ ಯಾವ ಪ್ರೆಸ ಹಾಗೂ ಯಾವ ಪತ್ರಕರ್ತರಿಂದ ಹಣವು ಅಮಾನತವಾಗಿ ಇಟ್ಟುಕೊಂಡಿರುವದೋ ಅಂಥವರು ಬಂದು ಹಣ ಒಯ್ಯಬಹುದೆಂದು ದಿಲ್ಲಿಯ ಡಿ. ಮ್ಯಾ. ರವರು ಪ್ರಸಿದ್ಧಿಸಿರುವರು.

ಪಂ. ಜವಾಹಿರಲಾಲ ನೆಹರೂರವರನ್ನು ಪುನಃ ಹಿಡಿಯುವರೆಂಬ ವಾರ್ತೆಯು ಹಬ್ಬಿದೆ.

ಅತ್ಯಂತ ಧಾತುಪೌಷ್ಟಿಕ ವೀರ್ಯವರ್ಧಕ ಕಾಮೋದ್ದೀಪಕ ಶಕ್ತಿವರ್ಧಕ ಚೂರ್ಣ.

....೦....

ಈ ಚೂರ್ಣದ ಸೇವನೆಯಿಂದ ಅಕಾಲದಲ್ಲಿ (ಬಾಲ್ಯಾವಸ್ಥೆಯಲ್ಲಿ) ಬಲಾತ್ಕಾರದಿಂದ ವೀರ್ಯಪತನವನ್ನು ಮಾಡಿ ಉಂಟಾದ ದುರ್ಬಲತೆಯನ್ನು ಹೋಗಲಾಡಿಸಿ, ಸ್ಥಿರವಾದ ಬಲವನ್ನು ಉಂಟುಮಾಡುತ್ತದೆ. ೧ರು. ೮ ತೊಲಾ ಚೂರ್ಣ

ರಾಮಬಾಣ ಗುಟಿಕಾ

ಪ್ಲೇಗಿನಮೇಲೆ ಇಂಥ ಔಷಧವನ್ನು ಇಂದಿನವರೆಗೆ ಯಾರು ಶೋಧಿಸಿಲ್ಲವೆಂದು ಪ್ರತಿಜ್ಞಾಪೂರ್ವಕ ಹೇಳಬಹುದು. ೧ರು. ೧೬ ಮಾತ್ರೆಗಳು

ಜುಲಾಬಿನ ಗುಳಿಗೆಗಳು. ೧ರು, ೬೪ ಮಾತ್ರೆಗಳು

ಬಿಸ್ಕಿ ಮುರುಕಿನ ಜುಲಾಬಿನ ಡಬ್ಬಿಗಳು.

೩ನೇ ದಿವಸಗಳಲ್ಲಿ ಗುಣಬಾರದಿದ್ದಲ್ಲಿ. ಹಣವನ್ನು ಮರಳಿ ಕಳುಹಿಸುವೆವು. ೩ ಡಬ್ಬಿಗಳ ಕ್ರಯ ೧ರು

ಕಿರಾತ ಪಾಕ

ಅಸ್ಥಿಗತ ಜ್ವರವನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನು ಮಾಡುವದು. ೧ ಬಾಟ್ಲಿಯ ಬೆಲೆ ೨ರೂಪಾಯಿ.

ಮೂಲವ್ಯಾಧಿಯ ಔಷಧ.

ರಕ್ತ ಮೂಲವ್ಯಾಧಿ. ಮೊಳಕೆಯುಳ್ಳ ಮೂಲವ್ಯಾಧಿ ಮುಂತಾದ ಯಾವತ್ತೂ ತರದ ಮೂಲವ್ಯಾಧಿಗಳನ್ನು ಒಂದುವಾರದೊಳಗಾಗಿ ಗುಣ ಪಡಿಸುತ್ತದೆ- ೧ವಾರದ ಔಷಧದ ಬೆಲೆ ೩ರೂಪಾಯಿ

೧ ಹಿಂಗಾಷ್ಟಕ ಚೂರ್ಣ ೧ರು. ೧೦ ತೊಲೆ.
೨ ಸೀತೋಪಲಾದಿ ಚೂರ್ಣ ೧ರು.. ೮ ತೊ.

ದಂತಮಂಜನ

೧ ಕುಪ್ಪಿಯ ಬೆಲೆ. ೩ ಆಣೆ..೧ ರು. ೬ ಕುಪ್ಪಿಗಳು.

ಡಾ. ಎಸ್. ಎಸ್. ಹೆಬಸೂರ
ಆಯುರ್ವೇದಿಸ್ಟ್ ಎಂಡ ಬಾಯೊಕೆಮಿಸ್ಟ
ಧಾರವಾಡ.

ಒಬ್ಬ ಕಾರಕೂನನುಬೇಕು.

ಧಾರವಾಡ ವ್ಯಾಪಾರೋತ್ತೇಜಕ ಕಂಪನಿ ಲಿಮಿಟಿಡ್ ಧಾರವಾಡ ಈ ಅಂಗಡಿಯಲ್ಲಿ ಕ್ಲಾರ್ಕನ ಜಾಗೆ ಒಂದು ಖಾಲೀ ಅದೆ ಉತ್ತಮ ಕನ್ನಡ ಬರಹ ಬರೆಯತಕ್ಕವರು ಮತ್ತು ಜಮಾಖರ್ಚಿನಮಾಹಿತಿ ಇದ್ದವರು ಬೇಕಾಗಿರುತ್ತಾರೆ. ಪಗಾರ ಪ್ರಾರಂಭಕ್ಕೆ ೨೦ ರೂಪಾಯಿ ಸಿಗುವದು. ಬೇಕಾದವರು ಸದರ ಕಂಪನಿಗೆ ತಾರೀಖು ೧೦-೫-೩೩ ನೇ ತಾರೀಖಿನೊಳಗಾಗಿ ಹಿಂದೆ ಕೆಲಸಮಾಡಿದ ಸರ್ಟಿಫಿಕೀಟ ನಕಲ ಸಹ ಇಟ್ಟು ಅರ್ಜಿ ಮಾಡಬೇಕು.

ಧಾರವಾಡ ಕೃ. ಸ. ಜೋಯಿಸ.
೨೮-೪-೩೩ ಮ್ಯಾನೇಜಿಂಗ ಡಾಯರೇಕ್ಟರ
ವ್ಯಾಪಾರೋತ್ತೇಜಕ ಕಂ. ಧಾರವಾಡ

ಚಂದಾದಾರರಿಗೆ ವಿನಂತಿ

—(೦)—

೧ ಇನ್ನು ಪೋಸ್ಟಿನ ದರವು ಏರಿಸಲ್ಪಟ್ಟದ್ದರಿಂದ ಮಹತ್ವದ ಪ್ರಸಂಗದ ಹೊರತು ಬಂದ ಕಾಗದಗಳಿಗೆ ಉತ್ತರ ಹಾಕೆವು,

೨ ನಾವು ಪತ್ರಗಳನ್ನು ಸರಿಯಾಗಿ ಪೋಸ್ಟಿಗೆ ಹಾಕುತ್ತಿರುವದರಿಂದ ಪತ್ರ ಮುಟ್ಟದ ಚಂದದಾರರು ನಮ್ಮೊಡನೆ ಪತ್ರವ್ಯವಹಾರ ಮಾಡದೆ, ಪೋಸ್ಟಿನೊಡನೆ ಮಾಡಬೇಕು.

೩ ಹೊಸದಾಗಿ ಚಂದಾದಾರರಾಗುವವರು ಹಣ ಮನಿಯಾರ್ಡರ ಮಾಡಬೇಕಲ್ಲದೆ, ವ್ಹಿ. ಪಿ. ಯಿಂದ ಬೇಡಿದರೆ ಕಳಿಸಲಾರೆವು. ಆದ್ದರಿಂದ ನಿಷ್ಕಾರಣವಾಗಿ ಅರ್ಧ ಆಣೆಯನ್ನು ಕಳೆದುಕೊಳ್ಳಬಾರದು,

೪ ಚಂದಾಮುಗಿದ ವರ್ಗಣೀದಾರರ ನಂಬರುಗಳನ್ನು (ಅಂದರೆ ಅವರ ಪತ್ರದ ಹಿಂದುಗಡೆಯಲ್ಲಿದ್ದ ಅಂಕಿಗಳನ್ನು) "ಚಂದಾದಾರರಿಗೆ ಸೂಚನೆ" ಈ ಹೆಡ್ಡಿಂಗಿನ ಕೆಳಗೆ ಪ್ರಸಿದ್ಧಿಸುವೆವು. ಆ ನಂಬರುಗಳಿದ್ದವರು ಚಂದಾ ಹಣವನ್ನು ಮನಿಯಾರ್ಡರ ಮಾಡಬೇಕು. ಇಲ್ಲದಿದ್ದರೆ ಪತ್ರವನ್ನು ಬಂದಿಡುವೆವು.

೫ ಮುಂಗಡಹಣವಾಗಲಿ, ಅಥವಾ ಪತ್ರವಾಗಲಿ ಬರದೆ ಚಂದಾದಾರರ ಬೇಡಿಕೆಗಳು ಪೂರ್ಣವಾಗವು.

೬ ಇದಕ್ಕೂ ಹೆಚ್ಚಿನ ಮಾಹಿತಿಯು ಏನಾದರೂ ಬೇಕಾದಲ್ಲಿ ರಿಪ್ಲಾಯ್ ಇಟ್ಟು ಕೇಳಬಹುದು

ಮ್ಯಾ. ವಿ. ಧಾರವಾಡ.

ಉತ್ತಮ ತರದ ಮಾಲು ಕ್ರಯ ಸುಲಭ



ಮಕ್ಕಳ ಅಂಗಿಗಳಿಗಾಗಿಯ ೩.೨ ಸಾಗಳಿಗಳ ಸಣ ಸೆಟ್ಟು ೧ಕ್ಕೆ ರೂ ೧–೧೪–೦ ಮಧ್ಯಮ ೩–೦–೦ ಉತ್ತಮ ರೂ. ೪–೮–೦ ಬೆಲೆ ೫–೦–೦

ಮಹಾಸ್ವಾಮಿ ತಮಗೆ ಕಾಶಿಯಾತ್ರೆ ಯಾಕೆ ಪರಿಚಯವಿದೆ? ಸ್ವಾಮಿ ನಮಗೆ ಎಸ್. ಯು. ನಾರಾಯಣಾಚಾರ್ಯರ ಕಂಪನಿ ಚೆನ್ನಾಗಿ ತಿಳಿಸುವದು. ತಮಗೇನು ಬೇಕು? ನಮಗೆ ಕಾಶೀ ಪೀತಾಂಬರ, ಸೀರೆ, ಖಣ, ಕಾಶ್ಮೀರಶಾಲು, ರುದ್ರಾಕ್ಷಿ, ಸ್ಫಟಿಕಲಿಂಗ [illegible] ಈ ಮುಂತಾದ ಮಾಲುಗಳು ಬೇಕಾಗಿದ್ದರೆ ಒಂದಾಣೆ ಟಿಕೀಟು ಕಳುಹಿಸಿ ಕೆಟಲಾಗ್ ನೋಡಿರಿ.

ಎಸ್. ಯು. ನಾರಾಯಣಾಚಾರ್ಯ [illegible] ಘಾಟ, ಬನಾರಸ. (ಕಾಶಿ).

ಪ್ರತ್ಯಕ್ಷ ಫಲ ಸಂಚ ಸಿದ್ಧಿ.

[illegible] ಭೀಮರಾವದೂತರು.

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇವೇ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ, ಅಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾವಿ, ಮುನಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಸ್ವತಃ ಸಿದ್ಧಿ ಮಾಡಿಕೊಂಡು ಬರೆದಿರುವರು.

೧ನೇ ಮಂತ್ರಪ್ರಕರಣದಲ್ಲಿ ಮಂತ್ರ ಸಾಧನದಿಂದಲೂ, ಯಂತ್ರ ಪೂಜನದಿಂದಲೂ ಎಲ್ಲಾ ದೇವಾನುದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿ ಮಾಡಿಕೊಳ್ಳುವ ಪ್ರಯೋಗ ಇದೆ,

೨ನೇ ತಂತ್ರ ಪ್ರಕರಣದಲ್ಲಿ [illegible] ಮುಂತಾದ ವಿಷಯಗಳು ಇದರಲ್ಲಿ [illegible]

೩ನೇ ಜೋತಿಷ ಪ್ರಕರಣದಲ್ಲಿ ಪ್ರಶ್ನೆಯಿಂದ ಜ್ಯೋತಿಷ್ಯದಲ್ಲಿ ಯಾವದು ಸಿದ್ಧಯುವಾಗಿರುವದೋ ಮತ್ತು ಕೆಲವು ಪ್ರಶ್ನೆಗಳ ಸಹ ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು.

೪ನೇ ಔಷಧ ಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಬಾಣಂತಿಗಳ [illegible] ಸಹ, ಇದರಲ್ಲಿ ಉಂಟು ಇದು ಪ್ರತಿಒಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳೂ ಸುಲಭವಾಗಿ ಔಷಧ [illegible] ಕ್ರಮವನ್ನು ಚನ್ನಾಗಿ ಒಂದು [illegible]. ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ಹೆಸರು ತಿಳಿಸಿರುವರು,

೫ನೇ ಯಂತ್ರ ಪ್ರಕರಣದಲ್ಲಿ ವಶೀಕರಣ, ಗ್ರಹಪೀಡಾ ನಿವಾರಣ, ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ ವಗೈರೆ ನಿವಾರಣೆಯಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ಸಿದ್ಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇಟ್ಟುಕೊಳ್ಳಲಿಕ್ಕೆ ಎಲ್ಲಾ ದೇವಾನುದೇವತೆಗಳೂ [illegible], ವೈದ್ಯರೂ, ಜೋತಿಷ್ಯರೂ, ಮಾಂತ್ರಿಕರೂ ತಾಂತ್ರಿಕರೂ ಮುನಿಯರಿಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿಂದ ನೋಡಲಿಕ್ಕಿಲ್ಲವೋ ಪ್ರತಿಒಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆ ಮಾಡಿ ಇರುವದು. ೩ ರೂ–೦ ಟಪಾಲ ಖರ್ಚು ೫ ಆಣೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ, ನಾಟಕ ಕಾವ್ಯ ಕಥೆಗಳು ಯಕ್ಷಗಾನ ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ೧೫–೧೧–೨೧

ಎ. ಆರ್. ಸಿವನಾಗಪ್ಪಾ [illegible]
ಹುಬ್ಬಳ್ಳಿ

ಜಾಹಿರಾತಿಗಾಗಿ.

೧೨ ತಿಂಗಳಿಗೆ	೧೪೫ ರೂ.
೬ ,,	೭೫ ರೂ.
೩ ,,	೪೦ ರೂ.

ಅರ್ಧ ಹಣಾ ಮುಂಚಿತವಾಗಿ ಕಳಿಸಬೇಕು.

ಈ ಪತ್ರವನ್ನು ಸತ್ಯಬೋಧ ರಾಮಚಂದ್ರ ಹುಬ್ಬಳ್ಳಿ ಇವರು ಕರ್ನಾಟಕ [illegible] ಪ್ರೆಸನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

- ಸಂಪಾದಕರು -
☞ ಶ್ರೀ. ಅಣ್ಣಾಚಾರ್ಯ ಜಾಲಿಹಾಳ ಹೊಸರಿಟ್ಟಿ.
(೧೯೩೦)

ಬೆಲೆ ೬ ಪೈ

ವರ್ಷ ೩) ಧಾರವಾಡ, ಶುಕ್ರವಾರ ತಾರೀಖು ೧೬ ನೇ ಮೇ ೧೯೩೦. (ಸಂಚಿಕೆ ೧೦೭

ಧಾರವಾಡ ಸ್ವದೇಶೀ ನೇಯುವ ಸಂಘ.

ನಮ್ಮ ಸಂಘದ ನೇಯುವ ಕಾರಖಾನೆಯಲ್ಲಿ ಖಾತ್ರಿಯ ದೇಶೀ ಗಿರಣಿಯ ನೂಲಿನಿಂದ ಅಥವಾ ಕೈನೂಲಿನಿಂದ ಕೈಮಗ್ಗದ ಮೇಲೆ ನೆಯ್ದ ಎಲ್ಲ ತರದ ದೇಶೀ ಶೀರಿ, ಖಾಂಡು, ಧೋತರ ಉಪ್ಪರಣಿಗಳು ಯೋಗ್ಯ ದರದಿಂದ ದೊರೆಯುತ್ತವೆ.

ಸದ್ಯದಲ್ಲಿ ಊರೊಳಗೆ ದೇಶೀ ಗಿರಣಿಯ ನೂಲಿನ ವಸ್ತ್ರಗಳನ್ನು ವಿಶ್ವಾಸವಿಟ್ಟು ಕೊಳ್ಳಲಿಕ್ಕೆ ಹೋದ ಗಿರಾಕಿಗಳಿಗೆ ಅನೇಕರು ವಿಲಾಯತೀ ಮತ್ತು ಜಪಾನೀ ನೂಲಿನ ವಸ್ತ್ರಗಳನ್ನು ಕೊಟ್ಟು ಮೋಸಿಸುತ್ತಿರುವರು. ಈ ಪ್ರಕಾರ ಜನರು ಮೋಸ ಹೋಗದೇ ಖಾತ್ರಿ ದೇಶೀ ವಸ್ತ್ರಗಳನ್ನು ಕೊಂಡು ಉಪಯೋಗಿಸಿ " ಸ್ವದೇಶೀ " ವ್ರತವನ್ನು ಅಮಲಿನಲ್ಲಿ ತೀವ್ರ ತರಲಿಕ್ಕೆ ಸಹಾಯ ಮಾಡಬೇಕೆಂಬ ಉದ್ದೇಶದಿಂದಲೇ ಈ ಸಂಘವು ಸ್ಥಾಪಿಸಲ್ಪಟ್ಟಿದೆ.

ಈ ಕಾರಖಾನೆಯಲ್ಲಿ ಇದೇ ದೇಶದಲ್ಲಿ ತಯಾರಾದ ಬಣ್ಣಗಳನ್ನೇ ಉಪಯೋಗಿಸಲ್ಪಡುತ್ತವೆ. ಆದ್ದರಿಂದ ಜನರು ಸಮಕ್ಷ ಅಥವಾ ಪತ್ರದ್ವಾರಾ ವಸ್ತ್ರಗಳನ್ನು ತರಿಸಿಕೊಂಡು ಖಾತ್ರಿ ಮಾಡಿಕೊಳ್ಳಬಹುದು.

ಸಂಘದ ಕಾರಖಾನೆಯು ಹಾಲಗೇರಿ ಕೆಳಗಿನ ಓಣಿಯಲ್ಲಿದ್ದಂಥ ನವಲೂರ ದೇಸಾಯರ ವಾಡೇದ ಹಿಂದಿನಭಾಗದಲ್ಲಿರುವದು.

ಪತ್ರ- ವ್ಯವಸ್ಥಾಪಕ ಸ್ವದೇಶೀ ನೇಯುವ ಸಂಘ
ಮೋಟಿಂಬಾವಿಗಲ್ಲಿ ಧಾರವಾಡ

WANTED.

Agents who have a perfect knowledge of business line and best influences to canvass FORWARD BUSINESS of cotton Grains, Seeds, and bullions from Gadag, Bijapur, Bagalkot, Bellary and Davangeri centres. Liberal commission will be allowed according to qualification

Apply to
UMIASHANKAR VIRGI.
HUBLI

ಬಹಿಷ್ಕಾರವು ಸ್ವಾಭಿಮಾನದ ಹೆಗ್ಗುರುತು

ಮನುಷ್ಯನು ಉನ್ನತಿಯನ್ನು ಹೊಂದಬೇಕಾದರೆ ಅವನಲ್ಲಿ ಸ್ವಾಭಿಮಾನವು ಇರಲೇಬೇಕು. ಸ್ವಾಭಿಮಾನವಿಲ್ಲದ ಮಾನವನು ಎಂದೂ ಮುಂದೆ ಬರಲಾರನು. ಸ್ವಾಭಿಮಾನವೆಂದರೆ ದುರಭಿಮಾನವಲ್ಲ. ದುರಭಿಮಾನವು ರಸಾತಳಕ್ಕೆ ಒಯ್ಯುವದು. ದುರಭಿಮಾನಕ್ಕೆ ಎಂದೂ ಜಯವಿಲ್ಲ. ಧರ್ಮದುರಭಿಮಾನಿಯಾದ ಔರಂಗಜೇಬನಿಂದ ಸ್ವಾಭಿಮಾನಿಯಾದ ಶಿವಾಜಿಯನ್ನು ಜಗ್ಗಿಸುವದಾಗಲಿಲ್ಲ. ಧರ್ಮದುರಭಿಮಾನಿಯಾದ ಟೀಪುವು ಸ್ವಾಭಿಮಾನಿಗಳಾದ ಪೇಶ್ವೆ- ಇಂಗ್ಲಿಷ- ನಿಜಾಮರಿಂದ ಹತನಾದನು. ಸ್ವಾಭಿಮಾನಿಯಾದ ರಾಜಾರಾಮನು ಕಮರಿಹೋದ ಸ್ವರಾಜ್ಯ ವೃಕ್ಷವನ್ನು ಚಿಗುರಿಸಿದನು.

ರಾಷ್ಟ್ರವು ಪಾರತಂತ್ರ್ಯ ಬಲೆಯಲ್ಲಿ ಸಿಕ್ಕಿಕೊಂಡರೆ. ಆ ರಾಷ್ಟ್ರವು ಮುಂದೆ ಬರಲಿಕ್ಕೆ ಸ್ವಾಭಿಮಾನದ ಹೊರತು ಅನ್ಯ ಮಾರ್ಗವೇ ಇಲ್ಲ. ಬ್ರಿಟಿಶ ರಾಜ್ಯದ ಮೊದಲು ಪಾರತಂತ್ರ್ಯದಲ್ಲಿ ಕೊಳೆಯುವ ಪ್ರಸಂಗ ಬಂದಾಗಲಿಲ್ಲ. ಆ ಕಾಲದ ಹಿಂದವಾಸಿಗಳು ಮುಂಗೈ ಜೋರಿನಿಂದ ತಮ್ಮ ಸ್ವಾಭಿಮಾನವನ್ನು ಕಾಯ್ದುಕೊಳ್ಳುತ್ತಿದ್ದರು. ಸ್ವಾಭಿಮಾನಕ್ಕಾಗಿ ತಾವು ಬಲಿಯಾಗುತ್ತಿದ್ದರು; ಅಥವಾ ಎದುರುವಾದಿಗಳನ್ನು ಬಲಿಗೊಳ್ಳುತ್ತಿದ್ದರು. ಆ ಕಾಲವು ಹೋಯಿತು. ಪರಿಸ್ಥಿತಿಯು ಬದಲಾಯಿತು. ಬ್ರಿಟಿಶ ಆಳಿಕೆಯ ಶಾಂತ ವಾತಾವರಣವು ನೆಲೆಗೊಂಡಿತು. ಶಸ್ತ್ರಾಸ್ತ್ರಗಳು ನಿರುಪಯುಕ್ತವಾದವು. ಬಲಿಯಾಗಿ ಕಾಯ್ದುಕೊಂಡ ಸ್ವಾಭಿಮಾನಕ್ಕೆ ಬೆಲೆಯಿಲ್ಲದಾಯಿತು. ಕಾಯಿದೆಯ ಸಾಮ್ರಾಜ್ಯವಾಯಿತು. ಕಾಯಿದೆಯಿಂದ ಸ್ವಾಭಿಮಾನವನ್ನು ಕಾಯ್ದುಕೊಳ್ಳಬೇಕಾಯಿತು.

ಸ್ವಾಭಿಮಾನ ಕಾಯ್ದುಕೊಳ್ಳುವದಕ್ಕಾಗಿಯೇ ಕಾಂಗ್ರೆಸದ ನಿರ್ಮಾಣವಾಯಿತು. ಹಿಂದವಾಸಿಗಳ ಸ್ವಾಭಿಮಾನ ಸ್ಥಿರತ್ವಕ್ಕಾಗಿ ಕಾಂಗ್ರೆಸದ ಬೇಡಿಕೆಗಳಾಗತೊಡಗಿದವು. ಅವೆಲ್ಲ ಬಗೆ ಹರಿದವು. ಕಾಂಗ್ರೆಸದ ಬತ್ತಳಿಕೆಯೊಳಗಿನ ಅರ್ಜಿ, ವಿನಂತಿ, ಡೆಪ್ಯುಟೇಶನಗಳೆಂಬ ಅಸ್ತ್ರಗಳೆಲ್ಲ ಮುಗಿದು ಹೋದವು. ಆ ಅಸ್ತ್ರಗಳೆಲ್ಲ ನಿರುಪಯುಕ್ತವಾದವು, ಕಾಂಗ್ರೆಸದಲ್ಲಿ ಕಡೆಯದೊಂದೇ ಅಸ್ತ್ರವು ಉಳಿಯಿತು. ಆ ಅಸ್ತ್ರವನ್ನು ಪ್ರಯೋಗಿಸದೆ ಗತ್ಯಂತರವೇ ಇಲ್ಲದಾಯಿತು. ಆ ಅಸ್ತ್ರಪ್ರಯೋಗದ ಬಗ್ಗೆ ವಾದವಿವಾದಗಳಾದವು. ಕಡೆಯ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಬಹುದೋ, ಬೇಡವೋ ಎಂಬ ಕಡುತರವಾದ ವಾದಗಳಾದವು. ಸ್ವಾಭಿಮಾನವು ಸ್ಥಿರವಾಗಿ ಉಳಿಯಬೇಕೆಂದು ಬಯಸುತ್ತಿದ್ದರೆ, ಆ ಅಸ್ತ್ರವನ್ನು ಪ್ರಯೋಗಿಸಲೇ ಬೇಕೆಂಬ ನಿ

ಯವಾಯಿತು. ರಾಷ್ಟ್ರದ ಮುಂದಾಳುಗಳೆ ನೂ ಅಸ್ತ್ರವನ್ನು ಪ್ರಯೋಗಿಸಲು ಸಮ್ಮತಿಯನ್ನಿತ್ತ

ಆ ಅಸ್ತ್ರಪ್ರಯೋಗದಿಂದಾದ ಪರಿಣಾಮವನ್ನು ೀಗಿಸಲು ಸಿದ್ಧರಾದರು. ಕಾಂಗ್ರೆಸ ಬತ್ತಳಿಕೆ ಂದ ಅಸ್ತ್ರವು ಹೊರಬಿದ್ದಿತು. ಆ ಅಸ್ತ್ರ ಪ್ರಭಾ ಿಂದ ಅಧಿಕಾರೀ ವರ್ಗವು ಕೊಚ್ಚಿಗೆದ್ದಿತು. ಆ ಅ ವನ್ನು ನಾಶಗೊಳಿಸುವದಕ್ಕಾಗಿ ೨೦. ೨೫ ಸಾವಿರ ರನ್ನು ತುರಂಗಕ್ಕಟ್ಟಿತು. ತುರಂಗ ತುಂಬುತ್ತ ನಡೆ ತೆ ಆ ಅಸ್ತ್ರದ ಬಲವು ಹೆಚ್ಚತೇ ಹೊರತು ಬಲವು ಗ್ಗಲಿಲ್ಲ. ಇಂಥ ಪ್ರಬಲವಾದ ಅಸ್ತ್ರನೆಂದರೆ ಬಹಿಷ್ಕಾರವು.

ಯಾವ ಕಾಯಿದೆಯಿಂದ ಹಿಂದ ವಾಸಿಗಳ ಸ್ವಾಭಿಮಾನಕ್ಕೆ ಕುಂದು ಬರುವದೋ ಆ ಕಾಯಿದೆ ಬಹಿಷ್ಕಾರ ಹಾಕುವದೇ ಸ್ವಾಭಿಮಾನದ ಹೆಗ್ಗು ತು. ಯಾವ ಕೃತಿಯಿಂದ ಸ್ವಾಭಿಮಾನಕ್ಕೆ ಕುಂ ಬರುವದೋ ಆ ಕೃತಿಗೆ ಪ್ರತಿಬಂಧ ಮಾಡುವದೇ ಸ್ವಾಭಿಮಾನದ ಹೆಗ್ಗುರುತು. ಅಂತೇ ಈ ಸ್ವಾಭಿಮಾನ ಕ್ಷಿತ್ಯಕ್ಕಾಗಿಯೇ ಮುಳಸೀ ಸತ್ಯಾಗ್ರಹ ಪ್ರಕರ ಣದಲ್ಲಿ ಸಾವಿರಾರು ವೀರರು ಮುಂದೊದಗಿರುವರು. ಸಹಕಾರ ಪ್ರಕರಣದಲ್ಲಿ ಸಾವಿರಾರು ವೀರರು ತು ಗ ಕಂಡಿರುವರು. ಪಂಜಾಬ-ಖಿಲಾಫತ ಪ್ರಕರ ಣದಲ್ಲಿ ಆತ್ಮಯಜ್ಞಕ್ಕೆ ಸನ್ನದ್ಧರಾಗಿರುವರು. ಈ ಸ್ವಾಭಿಮಾನವು ಇಲ್ಲದಿದ್ದರೆ ಹಿಂದವಾಸಿಗಳು ಮುಂ ಕೆ ಬರುವದೆಂತು? ನಿರಭಿಮಾನಿಗಳಾಗಿ ಕುಳಿತರೆ ಇವ ಗೆ ಸುಖವಾಗುವದೆಂತು! ನಿರಭಿಮಾನಿಯಾಗಿ ನೂ ರು ವರ್ಷ ಬಾಳುವದಕ್ಕಿಂತ, ಸ್ವಾಭಿಮಾನಿಯಾಗಿ ಒಂದೇ ದಿವಸ ಬಾಳುವದು ಲೇಸು.

ಸ್ವಾಭಿಮಾನಕ್ಕಾಗಿ ಬಹಿಷ್ಕಾರ ಹಾಕುವದು ಹೊಸತಲ್ಲ. ಸ್ವಾಭಿಮಾನಕ್ಕೆ ಕುಂದು ಬಂದಾಗಲೆಲ್ಲ ಎಲ್ಲರೂ ಬಹಿಷ್ಕಾರವನ್ನೇ ಹಾಕಿದ್ದಾರೆ. ಒಂದಾನೊಂದು ಕಾಲದಲ್ಲಿ ಈಗ ನಮ್ಮನ್ನಾಳುವ ಜಾರ್ಜ ಬಾದಶಹರೂ ಈ ಸ್ವಾಭಿಮಾನಕ್ಕಾಗಿಯೇ ಒಂದು ಪ್ರಸಂಗದಲ್ಲಿ ಬಹಿಷ್ಕಾರ ಹಾಕಿದ್ದರು. ದೋಸ್ತರಾಷ್ಟ್ರದವರು ಜರ್ಮನೀ-ಆಶಿಯಾಗಳ ಮಾಲಿಗೆ ಬಹಿಷ್ಕಾರ ಹಾಕಿರುವರು, ಬೊಲ್ಶೆವಿಕರು ಇತರ ರಾಷ್ಟ್ರಗಳಿಗೆ ಬಹಿಷ್ಕಾರ ಹಾಕಿರುವರು. ಈ ಬಹಿಷ್ಕಾರದಿಂದಲೇ ಸರ್ವಜನಸ್ವಾರ್ಥಗಳೂ ಕೈಗೂಡುತ್ತಲಿವೆ. ಆದರೆ ಈ ಬಹಿಷ್ಕಾರ ಕಾಲದಲ್ಲಿ ನಿರ್ಧಾರವು ಮಾತ್ರ ಪೂರ್ಣವಾಗಿರಲಿಕ್ಕೆ ಬೇಕು, ಅಂದರೆ ಕೈಕೊಂಡ ಕಾರ್ಯವು ಕೈಗೂಡದೆ ಎಂದಿಗೂ ಇರದು. ಆದ್ದರಿಂದ ಸ್ವಾಭಿಮಾನಕ್ಕಾಗಿ ಬಹಿಷ್ಕಾರವಾದಿಗಳಾಗಿರಿ.

* * * *

ಈ ವರ್ಷದ ಬಜೆಟಿನಲ್ಲಿ ಜರ್ಮನಿಗೆ ೧೬.೨ ಅಬ್ಜ ಮಾರ್ಕಿನ ಹಾನಿಯೊದಗುವದಂತೆ.

ಸ್ತ್ರೀಯರ ಮೇಲೆ ಕೈಯೆತ್ತಿದವರು ಹಾಳಾಗಿಹೋದರು.

—(೦)—

ಮಹಾಬಲಾಢ್ಯನಾದ ರಾವಣನು ದೇವದಾನವರಿಂದ ಸಾಯದಂಥ ವರವನ್ನು ಪಡೆದಿದ್ದರೂ ಸೀತಾಮಾತೆಯ ಮೇಲೆ ಕೈ ಮಾಡಿದ ಅವನು ಮನುಷ್ಯ ಮಾತ್ರನಾದ ಕಪಿಗಳಿಂದ ಕೂಡಿಕೊಂಡವನಾದ ಶ್ರೀ ರಾಮನಿಂದ ಕೊಲ್ಲಲ್ಪಟ್ಟನು. ದೇವೇಂದ್ರನು ದೇವತೆಗಳ ಒಡೆಯನು. ಅಹಲ್ಯೆಯ ಪಾತಿವ್ರತ್ಯ ಭಂಗಮಾಡಿದವನಾದ್ದರಿಂದ ಭಗೇಂದ್ರನಾದನು. ದುಶ್ಶಾಸನನು ದ್ರೌಪದಿಯ ಸೀರೆಯನ್ನೆಳೆದದರಿಂದ ಸಮೂಲ ಕೌರವ ವಂಶವೇ ನಾಶವಾಗಿಹೋಯಿತು. ಅದೇ ದ್ರೌಪದಿಗಾಗಿಯೇ ಕೀಚಕನು ಯಮಸದನವನ್ನು ಕಂಡನು. ಅನಸೂಯೆಯ ಪಾತಿವ್ರತ್ಯ ಭಂಗಮಾಡಲು ಬಂದ ತ್ರಿಮೂರ್ತಿಗಳೇ ಶಿಶುರೂಪ ಧರಿಸಬೇಕಾಯಿತು. ಆ ಮಹಾಮುನಿಯ ಉಶ್ಶಾಪದಿಂದಲೇ ತ್ರಿಮೂರ್ತಿಗಳು ಪಾರಾದರು.

ಐತಿಹಾಸಿಕ ಕಾಲದಲ್ಲಿ ಸಂಭಾಜಿಯು ಪತಿವ್ರತೆಯರ ಛಲಮಾಡಿಸಿದ್ದಕ್ಕಾಗಿಯೇ ಕ್ರೂರರೀತಿಯಿಂದ ಕೊಲ್ಲಲ್ಪಟ್ಟನು. ಸಾಧಾರಣ ಮುಸಲಮಾನರ ಆಳಿಕೆಯಾದರೂ ಸ್ತ್ರೀಯರ ಮೇಲೆ ಬಲಾತ್ಕಾರ ಮಾಡಿದ್ದಕ್ಕಾಗಿಯೇ ಅಳಿಗಾಲತೊಡಗಿತು.

ಇಂಥ ಸಾವಿರಾರು ಪೌರಾಣಿಕ, ಐತಿಹಾಸಿಕ ಉದಾಹರಣೆಗಳು ಕಂಗೊಳಿಸುತ್ತಿದ್ದರೂ ಸಹ, ಹಾಗೂ ಸದ್ಯಕ್ಕೆ ಸ್ತ್ರೀಯರ ಮೇಲೆ ಕೈಮಾಡಿದ ಹಲವರು ನಾನಾತರದ ಸಂಕಟಗಳಿಗೊಳಗಾಗುತ್ತಿದ್ದರೂ ಯಾರೊಬ್ಬರೂ ಧನಮದದಿಂದಾಗಲಿ, ಅಧಿಕಾರಮದದಿಂದಾಗಲಿ ಕಣ್ತೆರೆದು ಸಹ ನೋಡದಿರುವದು ಆಶ್ಚರ್ಯವಲ್ಲವೆ?

ಇಂಥ ಅಧಿಕಾರಮದವುಳ್ಳವರಿಗಾಗಲಿ, ಧನಮದವುಳ್ಳರಾಗಲಿ, ಇಂಥ ಉದಾಹರಣೆಗಳು ಕಾಣುವದಿಲ್ಲವೋ, ಕಂಡರೂ ಅವುಗಳ ಕಡೆಗೆ ಲಕ್ಷ್ಯಗೊಡುವದಿಲ್ಲವೋ, ಹ್ಯಾಗೆ ತಿಳಿಯುವದಿಲ್ಲವೋ ಅಥವಾ ಅಳಿಗಾಲವೇ ಸಮೀಪಿಸಿರುವದೆಂದು ಅವರಿಗೆ ಬುದ್ಧಿಯೇ ಬರುವದಿಲ್ಲವೋ ತಿಳಿಯದಾಗಿದೆ.

ವಿನಾಶಕಾಲಕ್ಕೆ ವಿಪರೀತಬುದ್ಧಿಯೆಂಬಂತೆ ಇಂಥ ಮದವುಳ್ಳವರಿಗೆ ದುರ್ಬುದ್ಧಿಯೇ ಹುಟ್ಟುತ್ತಿರಬಹುದು. ದುರ್ಬುದ್ಧಿಯಿಂದ ಅವರಿಗೆ ಹಿಂದು-ಮುಂದಿನ ವಿಚಾರವೇ ಹುಟ್ಟುತ್ತಿರಲಿಕ್ಕಿಲ್ಲ. ನಮನ್ನಾರು ಕೇಳುವರೆಂಬ ಅಹಂಕಾರವು ನೆರೆಕೊಳ್ಳುತ್ತಿರಬಹುದು. ಅಂತೇ ಅವರು ತಮ್ಮ ಅಳಿಗಾಲಕಾಲದಲ್ಲಿ ಸ್ತ್ರೀಯರ ಮೇಲೆ ಕೈ ಮಾಡುತ್ತಿರಬಹುದು. ಸ್ತ್ರೀಯರ ಮೇಲೆ ಕೈಮಾಡಿದ ಯಾವನೂ ಬದುಕಿ ಉಳಿಯಲಿಲ್ಲ. ಯಾರ ರಾಜ್ಯವೂ ಸ್ಥಿರವಾಗಿ ಉಳಿಯಲಿಲ್ಲ. ಎಲ್ಲರೂ ಹಾಳಾಗಿಹೋಗಿದ್ದಾರೆ. ಆದ್ದರಿಂದ ಧನಮದವುಳ್ಳವರೇ, ಅಧಿಕಾರಮದವುಳ್ಳವರೇ ನೀವು ಬಹುಕಾಲ ಬದುಕಬೇಕೆಂದು ಬಯಸುತ್ತಿದ್ದರೆ, ನಿಮ್ಮ ಅಳಿಗಾಲವು ಸಮೀಪಿಸಬಾರದೆಂದು ನಿಮ್ಮ ಇಚ್ಛೆಯಿದ್ದರೆ ಸ್ತ್ರೀಯರ ಗೋಳು ಕಟ್ಟಿಕೊಳ್ಳಬೇಡಿರಿ. ಅವರ ಮೈಮೇಲೆ ಕೈ ಮಾಡಬೇಡಿರಿ. ಅಂದರೆ ಮಾತ್ರ ನೀವು ನಾಲ್ಕುಪತ್ತು ಬದುಕಿ ಬಾಳಬಹುದು. ಇಲ್ಲದಿದ್ದರೆ ನಿಮ್ಮ ಅಳಿಗಾಲವು ಸಮೀಪಿಸಿತೆಂದು ತಲೆಗೆ ಗಂಟು ಹಾಕಿಕೊಳ್ಳಿರಿ.

——

ವಿಜಯಕಾರರು ಹಾಯಕೋರ್ಟ ಕಂಡು ಬಂದರು.

—೦—೦—

ನಿರ್ಣಯವು ೭ನೇ ಜೂನಕ್ಕೆ ಬಿತ್ತು.

—೦—

ಸ್ವತಃ ವಿಜಯಕಾರರು ಮುಂಬೈ ಹಾಯಕೋರ್ಟಿಗೆ ಹೋಗಿದ್ದರಷ್ಟೇ? ಮಂಗಳವಾರ ತಾರೀಖು ೯-೫-೩೩ನೇ ದಿವಸ ಸಾಯಂಕಾಲದ ೫ ಗಂಟೆಯ ಸುಮಾರಕ್ಕೆ ಇವರ ವಿಚಾರಣೆಯು ನಡೆಯಿತು. ನ್ಯಾಯಾಧೀಶರು ವಿಜಯಕಾರರನ್ನು ಆಪಾದಿತಪುಸ್ತಕ ನೋಡಿ, ಈ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಕೇಳಿದರು. ವಿಜಯಕಾರರು ಲೇಖೀ ಜವಾಬನ್ನು ಒಪ್ಪಿಸಿಬಿಟ್ಟರು. ಅದನ್ನು ನೋಡುತ್ತ ಸರಕಾರೀ ವಕೀಲರನ್ನು ಕೇಳಿದರು. ಅವರೂ ಟಾಯಿಪು ಮಾಡಿತಂದ ೧೨-೨-೩೨ನೇ ಸಂಚಿಕೆಯ ಲೇಖವನ್ನು ಒಪ್ಪಿಸಿ, ಹಾಯಕೋರ್ಟ ಅಪಮಾನವಾಯಿತೆಂದು ಹೇಳಿದರು. ಟಾಯಿಪು ಮಾಡಿದ ಗೃಹಸ್ಥನ ಅಜ್ಞಾನದಿಂದಲೋ, ಅಲಕ್ಷದಿಂದಲೋ ಅಲ್ಲಲ್ಲಿ ಟಾಯಿಪು ಕಾಗದದ ಮೇಲೆ ಬರೆಯಬೇಕಾದ ಪ್ರಸಂಗವು ಬಂದಿತ್ತು. ಅದಕ್ಕಾಗಿ ಜಜ್ಜರು ಇದೇನೆಂದು ಕೇಳಲು ಟಾಯಿಪಿನವನ ದೋಷವೆಂದು ಸರಕಾರೀ ವಕೀಲರು ಹೇಳಲೇಬೇಕಾಯಿತು. ಪೂರ್ಣ ಟಾಯಿಪು ಬಾಕಿದ ಕಾಗದ ಬರದ ಹೊರತು ನಿರ್ಣಯವನ್ನು ಹೇಳಲಾರೆನೆಂದು ನ್ಯಾಯಾಧೀಶದ್ವಯರು ಹೇಳಿಬಿಟ್ಟರು. ಸರಕಾರೀ ವಕೀಲರು ಮುದ್ದತು ಬೇಡಿದರು. ವಿಜಯಕಾರರು ಈಗಲೇ ಆಗುವದಲ್ಲ ಆಗಿ ಹೋಗಲಿ, ನಿರ್ಣಯವಾಗಿಬಿಡಲಿ ಎಂದರು. ನ್ಯಾಯಾಧೀಶರು "ಅದು ಸರಿಯಲ್ಲ. ಪೂರ್ಣ ಟಾಯಿಪು ಆಗಲಿಕ್ಕೇಬೇಕು. ಅಷ್ಟರಿಂದ ನೀವಿಲ್ಲದಿದ್ದರೂ ನಿರ್ಣಯವನ್ನು ಹೇಳುವೆವು" ಎಂದು ಹೇಳಿ ಜೂನ ೭ನೇ ತಾರೀಖಿಗೆ ನಿರ್ಣಯವನ್ನು ತಿಳಿಸುವ ಅವಧಿಯನ್ನಿಟ್ಟರು. ವಿಜಯಕಾರರು ಮುಂಬೈ ಬಿಟ್ಟು ಧಾರವಾಡದ ದಾರಿಯನ್ನು ಹಿಡಿದು ಬಂದರು.

* * * * *

ಯುದ್ಧಕಾಲದ ಸಾಲವನ್ನು ಅಮೇರಿಕೆಯರು ಫ್ರಾನ್ಸ ಸರಕಾರದವರಿಗೆ ಕೇಳುವರು.

ಮುಳಸೀ ಸತ್ಯಾಗ್ರಹ ಪ್ರಕರಣ.

———(೦)———

ಪೋಲೀಸರ ಸಮಕ್ಷಮವೇ ಸತ್ಯಾಗ್ರಹಿಗಳಿಗೆ ಹೊಡೆತಗಳು.

———೦———

ತಾ. ೬-೫-೨೨ ನೇ ದಿವಸ ಸಾಯಂಕಾಲದ ೩ ಗಂಟೆಯ ಸುಮಾರಕ್ಕೆ ಮೊರಟೆ ೯ ಸ್ವ, ಶೇ, ಠಿಗೂ, ಒಂದು ನೂರು ಮಾವಳೇ ಜನರಿಗೂ ಕಂಪನಿಯ ನೌಕರರು ಪೋ. ಇ. ರರೂ, ಫೌಜದಾರರೂ, ಪೊ, ಸು, ಅ, ಪರ್ಸನಲರೂ, ೩೦-೩೫ ಸಿಪಾಯರೂ ಇರುವಾಗಲೇ, ಇವರ ಸಮಕ್ಷಮವೇ ಹೊಡೆಯ ತೊಡಗಿದರು, ಹೊಡೆತದಿಂದ ಆ ವೀರರಲ್ಲಿ ೧೦-೧೨ ಜನರನ್ನು ಬಂಧಿಸಿದರು. ಅವರಲ್ಲಿ ಒಬ್ಬಿಬ್ಬರು ಸ್ತ್ರೀಯರೂ ಇದ್ದರು.

....

ಲಾರ್ಡರೀಡಿಂಗರ ಸ್ಥಳದಲ್ಲಿ ಸರ ಹೆನರಿ ಲಾರೆನ್ಸರು.

——೦——

ಲಾಯಿಡ ಜಾರ್ಜರು ಜಿನೋವ್ಹಾದಿಂದ ಬಂದಮೇಲೆ ಲಾರ್ಡರೀಡಿಂಗರ ರಾಜೀನಾಮೆಯು ಮಂಜೂರಾಗಿ ಇವರ ಸ್ಥಳದಲ್ಲಿ ಸರ ಹೆನರಿ ಲಾರೆನ್ಸರು ವಿರಾಜಮಾನರಾಗುವರೆಂದು ವಿಲಾಯತಿಯ ಪತ್ರಗಳು ಈಗಿನಿಂದಲೇ ಸಾರಹತ್ತಿವೆ. ಯಾವ ರಾಯರು ಬಂದರೇನು ರಾಗೀಪೀಸುವದು ತಪ್ಪಿದ್ದಲ್ಲ.

ಮೌ. ಹಜರತ ಮೋಹಾನಿಯವರ ಸಂದೇಶವು.

——೦——

ಕಾಂಗ್ರೆಸ ಕಾರ್ಯಕ್ರಮಗಳನ್ನು ಪೂರೈಸಲಿಕ್ಕೆ ಬೇಕು. ಈ ಕಾರ್ಯಕ್ರಮಗಳು ಶಕ್ಯವಲ್ಲವೆಂದು ಯಾವ ಕಾಲಕ್ಕೆ ನಿರ್ಣಯವಾಗುವದೋ ಆ ಕಾಲಕ್ಕೆ ಬೇರೆ ವಿಚಾರವು. ಅದು ವರೆಗೆ ಇವುಗಳನ್ನು ಪಾಲಿಸಲಿಕ್ಕೇ ಬೇಕು. ಮುಂದಾಳುಗಳ ಹೊರತಾಗಿ, ಈ ಕಾರ್ಯಕ್ರಮಗಳನ್ನು ಕುಗ್ಗಿಸಗೊಡಬಾರದೆಂದು ನನ್ನ ದೇಶಬಾಂಧವರಿಗೆ ನನ್ನ ಆಗ್ರಹದ ವಿನಂತಿಯದೆ.

* * * * *

ಅಕಾಲೀ ಶೀಖರೂ ಪಂಜಾಬ ಸರಕಾರವೂ.

——೦——

ಅಕಾಲೀ ಶೀಖರನ್ನು ಸಾವಿರಾರು ಜನರ ವರೆಗೆ ಪಂಜಾಬ ಸರಕಾರದವರು ಬಂಧಿಸಿರುವದಷ್ಟೆ? ಆ ಬಗ್ಗೆ ಪಂಜಾಬ ಸರಕಾರದವರು ಒಂದು ಪ್ರೆಸನೋಟನ್ನು ಹೊರಡಿಸಿರುವರು. ಅದರ ಸಾರಾಂಶವೇನಂದರೆ ಅಕಾಲೀ ಶೀಖರು ಬೇಕೆಂತಲೇ ಸರಕಾರದ ಅಪ್ರೀತಿಯನ್ನು ಜೋಡಿಸುತ್ತಿದ್ದರೆಂಬದಾಗಿದ್ದು, ಅವರಿಗೆ ಸರಕಾರವು ಯೋಗ್ಯ ನಿರ್ಣಯ ಮಾಡುವ ವರೆಗೂ ಶಿಕ್ಷೆ ಕೊಡುವದಿಲ್ಲವೆಂಬದಾಗಿದೆ.

* * * * *

ಜಾಹಿರನೋಟೀಸು.

ಧಾರವಾಡ ಡಿ|| ಕೋರ್ಟಿನ ಡೆ|| ನಾಝರರ ಕಡಿಂದಾ ಇದರ ಮೂಲಕಾ ಯಾವತ್ತು ಜನರಿಗೆ ತಿಳಿಯಪಡಿಸಲಾಗಿ ಅಲ್ಪವಯ ಗುಂಡಾಚಾರ್ಯ ತಂದೆ ಶ್ರೀನಿವಾಸರಾವ ಪಾಟೀಲ- ಕುಲಕರ್ಣಿ ಸಾಕೀನ ಮುಡೂರ ಇವರ ಬಾಬತು ಹಾನಗಲ್ಲ ತಾಲೂಕ ಮುಡೂರ ವ ಕ್ಯಾಸನೂರ ಗ್ರಾಮಗಳಲ್ಲಿ ಅಲ್ಪವಯಿಯ ಸರಕಾರಿ ಜಮೀನಿಯಲ್ಲಿರುವ ಗಂಧದ ಮರಗಳನ್ನು ಜಾಹಿರ ರೀತಿಯಿಂದ ತಾ. ೨೫ ಮೇ ಸನ್ನ ೧೯೨೨ ಇಸ್ವಿ ರೋಜ ಗುರುವಾರದಿಂದ ಮುಡೂರ ಗ್ರಾಮದ ಚಾವಡಿಯಲ್ಲಿ ಲಿಲಾವ ಮಾಡಲ್ಪಡುವವು. ಲಿಲಾವಿನಲ್ಲಿ ಬೇಕಾದವರು ಹಾಜರ ಇರತಕ್ಕದ್ದು. ಲಿಲಾವಿನಲ್ಲಿ ಗಿಡಗಳನ್ನು ತಗೊಂಡವರು ಆಗಿಂದಾಗಲೇ ಹಣ ಕೊಟ್ಟು ಪಾವತಿ ಪಡಕೊಳ್ಳಬೇಕು. ಮಾರತಕ್ಕ ಗಿಡಗಳ ಮಾಹಿತಿ ಆಯಾ ಗ್ರಾಮಗಳ ಗೌಡರಕಡಿಂದಾ ಮಾಹಿತಿ ತಗೋಬೇಕು. ಇದಕ್ಕೆ ಹೆಚ್ಚಿಗೆ ಏನಾದರೂ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಯಲ್ಲಿ ಸೂಟಿ ದಿವಸಗಳ ಬಿಟ್ಟು ಸಮಕ್ಷಮವಾ ಬಂದು ಮಾಹಿತಿ ಪಡಕೊಳ್ಳಬೇಕು ತಾ|| ೫-೫-೨೨

ಆರ್, ಪ್ಹಿ, ಕುಸುನೂರ.
ಡಿಪ್ಯುಟಿ ನಾಝರ ಧಾರವಾಡ

ದೊಡ್ಡ ತಲೆಯ ಮ್ಯಾಜಿಸ್ಟ್ರೇಟರು

——೦——

ಗಾಂಧೀ ಟೊಪ್ಪಿಗೆಗಾಗಿ ೧೦ ದಿವಸಗಳ ಶಿಕ್ಷೆ.

——೦——

ಗುಂಟೂರ ಡಿ. ಮ್ಯಾ. ರವರ ಎದುರಿಗೆ ಪೋ. ಆ. ೧೫ ರನ್ವಯ ಮೂವರನ್ನು ತಂದು ನಿಲ್ಲಿಸಿದ್ದರು. ಆ ಮೂವರ ತಲೆಯ ಮೇಲೆಯೂ ಗಾಂಧೀ ಟೊಪ್ಪಿಗೆಯಿತ್ತು. ಮ್ಯಾ. ರವರು ಟೊಪ್ಪಿಗೆ ತೆಗೆಯಲು ಹೇಳಿದರು. ಅವರು ತೆಗೆಯಲಿಲ್ಲ. ಕೇಳುವದೇನು? ಕೋರ್ಟಿಗೆ ಭಯಂಕರ ಅಪಮಾನವಾಯಿತೆಂದು ಮ್ಯಾ. ರವರಿಗೆ ತೋರಿತು. ಕೂಡಲೆ ೧೫ ರೂ. ಗಳ ದಂಡ, ದಂಡಕೊಡದಿದ್ದರೆ ೧೦ ದಿವಸಗಳ ಸಾದಾ ಶಿಕ್ಷೆಯೆಂದು ಹೇಳಿ ಬಿಟ್ಟರು. ಮ್ಯಾ. ರ ತಲೆಯು ದೊಡ್ಡ ಇರಬಹುದು.

* * * * *

ಮೌ. ಅಜಾದ ಸೋಭಾನಿಯವರಿಗೆ ಪ್ರತಿಬಂಧ

ಮೌ. ಅಜಾದ ಸೋಭಾನಿಯವರು ಮುಲಬಾರಕ್ಕೆ ಹೋಗಿರುವರು. ಅವರಿಗೆ ಅಲ್ಲಿ ಕಾಲಿಡಕೂಡದೆಂದು ಕಟ್ಟಪ್ಪಣೆಯಾಗಿದೆ. ಪ್ರತಿಬಂಧವು ದೂರಾಗಬೇಕೆಂದು ಮುಲಬಾರ ಡಿ. ಮ್ಯಾ. ರವರಿಗೆ ತಿಳಿಸಿರುವರು.

ಅತ್ಯಂತ ಧಾತುಪೌಷ್ಟಿಕ ವೀರವರ್ಧಕ ಕಾಮೋದ್ದೀಪಕ

ಶಕ್ತಿವರ್ಧಕ ಚೂರ್ಣ.

....೦....

ಈ ಚೂರ್ಣದ ಸೇವನೆಯಿಂದ ಅಲ್ಪವಯಸ್ಸಿ (ಬಾಲ್ಯಾವಸ್ಥೆಯಲ್ಲಿ) [illegible] ಪತನವನ್ನು ಹೊಂದಿ [illegible] ಹೋಗಲಾಡಿಸಿ, ಸ್ತ್ರೀಸುಖದ [illegible] ಉಂಟುಮಾಡುತ್ತದೆ. ೧ರು. ೮ ತೊಲಾ ಚೂರ್ಣ

ರಾಮಬಾಣ ಗುಳಿಗೆ

ಪ್ಲೇಗಿನಮೇಲೆ ಇಂಥ ಔಷಧವನ್ನು ಇಂದಿನವರೆಗೆ ಯಾರು ಶೋಧಿಸಿಲ್ಲವೆಂದು ಪ್ರತಿಜ್ಞಾಪೂರ್ವಕ ಹೇಳಬಹುದು. ೧ರು. ೧೬ ಮಾತ್ರೆಗಳು

ಜುಲಾಬಿನ ಗುಳಿಗೆಗಳು. ೧ರು, ೬೪ ಮಾತ್ರೆಗಳು

ಪಿತ್ತ ಹುರುಕಿನ ಮುಲಾಮಿನ ಡಬ್ಬಿಗಳು.

ಮೂರೇ ದಿವಸಗಳಲ್ಲಿ ಗುಣಬಾರದಿದ್ದಲ್ಲಿ ಹಣವನ್ನು ಮರಳ ಕಳುಹಿಸುವೆವು. ೩ ಡಬ್ಬಿಗಳ ಕ್ರಯ ೧ರು

ಕಿರಾತ ಪಾಕ

ಅಸ್ಥಿಗತ ಜ್ವರವನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನು ಮಾಡುವದು. ೧ ಬಾಟ್ಲಿಯ ಬೆಲೆ ೨ರೂಪಾಯಿ.

ಮೂಲವ್ಯಾಧಿಯ ಔಷಧ.

ರಕ್ತಮೂಲವ್ಯಾಧಿ. ಮೋಳಕೆಯುಳ್ಳ ಮೂಲವ್ಯಾಧಿ ಮುಂತಾದ ಯಾವತ್ತು ತರದ ಮೂಲವ್ಯಾಧಿಗಳನ್ನು ಒಂದುವಾರದೊಳಗಾಗಿ ಗುಣ ಪಡಿಸುತ್ತದೆ- ೧ವಾರದ ಔಷಧದ ಬೆಲೆ ೩ರೂಪಾಯಿ

೧ ಹಿಂಗಾಷ್ಟಕ ಚೂರ್ಣ ೧ರು. ೧೦ ತೊಲೆ.
೨ ಸಿತೋಪಲಾದಿ ಚೂರ್ಣ ೧ರು. ೮ ತೊ.

ದಂತಮಂಜನ

೧ ಕುಪ್ಪಿಯ ಬೆಲೆ. ೩ ಆಣೆ. ೧ ರು. ೬ ಕುಪ್ಪಿಗಳು.

ಡಾ. ಎಸ್. ಎಸ್. ಹೆಬಸೂರ
ಆಯುರ್ವೇದಿಸ್ಟ ಆ್ಯಂಡ ಬಾಯೋಕೆಮಿಸ್ಟ.
ಧಾರವಾಡ.

ವರ್ಗಣಿಯ ದರಗಳು.

ನಿತ್ಯಪತ್ರಕ್ಕೆ ೧೨ ತಿಂಗಳಿಗೆ ೧೨-೮-೦ ರೂ.
„ ೬ „ ೭-೦-೦ ರೂ.
„ ೩ „ ೪-೦-೦ ರೂ.
„ ೧ „ ೧-೮-೦ ರೂ.
ವಾರಪತ್ರಕ್ಕೆ ವಾರ್ಷಿಕ ವರ್ಗಣಿ ೩-೧೨-೦ ರೂ.
ವಿಶೇಷಮಾಹಿತಿಕೆಳಗಿನ ವಿಳಾಸಕ್ಕೆ.

ಮ್ಯಾ. ವಿಜಯ

ಕಟ್ಟಿಗೆಯ ಅಳತೆಯ ಯಂತ್ರವು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧-೮ ಆಣೆ.
ಪತ್ತೆ:- ರಾಮರಾವ ಬಳ್ಳಾರಿ. ಆ್ಯಂಡ ಬ್ರದರ್ಸ ಕರ್ನಾಟಕ ಬುಕ್ಕಡಿಪೋ ಧಾರವಾಡ.

ಚಂದಾದಾರರಿಗೆ ವಿನಂತಿ

——(೦)——

೧ ಇನ್ನು ಪೋಸ್ಟಿನ ದರವು ಏರಿಸಲ್ಪಟ್ಟದರಿಂದ ಮಹತ್ವದ ಪ್ರಸಂಗದ ಹೊರತು ಬಂದ ಕಾರ್ಡುಗಳಿಗೆ ಉತ್ತರ ಹಾಕೆವು,

೨ ನಾವು ಪತ್ರಗಳನ್ನು ಸರಿಯಾಗಿ ಪೋಸ್ಟಿಗೆ ಹಾಕುತ್ತಿರುವದರಿಂದ ಪತ್ರ ಮುಟ್ಟದ ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ಮಾಡದೆ, ಪೋಸ್ಟಿನೊಡನೆ ಮಾಡಬೇಕು.

೩ ಹೊಸದಾಗಿ ಚಂದಾದಾರರಾಗುವವರು ಹಣ ಮನಿಯಾರ್ಡರ ಮಾಡಬೇಕಲ್ಲದೆ, ವ್ಹಿ. ಪಿ. ಯಿಂದ ಹೇಳಿದರೆ ಕಳಿಸಲಾರೆವು. ಆದ್ದರಿಂದ ನಿಷ್ಕಾರಣವಾಗಿ ಅರ್ಧ ಆಣೆಯನ್ನು ಕಳೆದುಕೊಳ್ಳಬಾರದು,

೪ ಚಂದಾ ಮುಗಿದ ವರ್ಗಣೀದಾರರ ನಂಬರುಗಳನ್ನು (ಅಂದರೆ ಅವರ ಪತ್ರಿಯ ಹಿಂದುಗಡೆಯಲ್ಲಿದ್ದ ಅಂಕಿಗಳನ್ನು) " ಚಂದಾದಾರರಿಗೆ ಸೂಚನೆ " ಈ ಹೆಡ್ಡಿಂಗಿನ ಕೆಳಗೆ ಪ್ರಸಿದ್ಧಿಸುವೆವು. ಆ ನಂಬರುಗಳಿದ್ದವರು ಚಂದಾ ಹಣವನ್ನು ಮನಿಯಾರ್ಡರ ಮಾಡಬೇಕು. ಇಲ್ಲದಿದ್ದರೆ ಪತ್ರವನ್ನು ಬಂದಿಡುವೆವು.

೫ ಮುಂಗಡಹಣವಾಗಲಿ, ರಿಪ್ಲಾಯ ಪತ್ರವಾಗಲಿ ಬರದೆ ಚಂದಾದಾರರ ಬೇಡಿಕೆಗಳು ಪೂರ್ಣವಾಗವು.

೬ ಇದಕ್ಕೂ ಹೆಚ್ಚಿನ ಮಾಹಿತಿಯು ಏನಾದರೂ ಬೇಕಾದಲ್ಲಿ ರಿಪ್ಲಾಯ ಇಟ್ಟು ಕೇಳಬಹುದು

ಮ್ಯಾ. ವಿ. ಧಾರವಾಡ.

ಉತ್ತಮ ತರದ ಮಾಲು

ಕ್ರಯ ಸುಲಭ



ಮಕ್ಕಳ ಆಟಿಗೆಯ [illegible] ೩೨ ಸಾಮಾನುಗಳ ಸಣ್ಣ ಸೆಟ್ಟು ೧ಕ್ಕೆ ರೂ ೧-೧೪-೦ ಮಧ್ಯಮ ೩-೦-೦ ಉತ್ತಮ ರೂ. ೪-೮-೦ ದೊಡ್ಡದು ೫-೦-೦

ಮಹಾಸ್ವಾಮಿ ತಮಗೆ ಕಾಶಿಯಲ್ಲಿ ಯಾರ ಪರಿಚಯವಿದೆ? ಸ್ವಾಮಿ ನಮಗೆ ಎಸ್. ಯು. ನಾರಾಯಣಾಚಾರ್ಯರ ಕಂಪನಿ ಚೆನ್ನಾಗಿ ತಿಳಿಯುವದು. ತಮಗೇನು ಬೇಕು? ನಮಗೆ ಕಾಶೀ ಪೀತಾಂಬರ, ಶೇಲೆ, ಖಣ, ಕಾಶ್ಮೀರ ಶಾಲು, ರುದ್ರಾಕ್ಷಿ, ಸ್ಫಟಿಕಲಿಂಗ ಮಣಿ, ಜಾಗಂಟೆ, ಚಕ್ರತಾಳ, ರೋಲ್ಡ ಗೋಲ್ಡ [illegible] ಉಂಗುರ, ವಾಸುದೇವ ಮೇಲಿ, ಕಸ್ತೂರಿ [illegible], ಈ ಮುಂತಾದ ಮಾಲುಗಳು ಬೇಕಾಗಿ [illegible] ಒಂದಾಣೆ ಟಿಕೇಟು ಕಳುಹಿಸಿ ಕೆಟಲಾಗು ತರಿಸಿ ನೋಡಿರಿ.

ವಿಳಾಸ ಎಸ್. ಯು. ನಾರಾಯಣಾಚಾರ್ಯ ಮ
[illegible], ಬನಾರಸ (ಕಾಶಿ)

ಪ್ರತ್ಯಕ್ಷಫಲಪಂಚಸಿದ್ಧಿ.

ಇದು ರಾಯಚೂರು ಭೀಮಾಚಾರರು.

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ, ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಮುನಿಗಳೊಡನೆ ಭಕ್ತಿಯಿಂದ ಅವರ ಕಡೆಯಿಂದ ಅನುಭವ ತೆಗೆದು ಪ್ರತಿಯೊಂದು ಸಿದ್ಧಿ ಮಾಡಿಕೊಂಡು ಬರೆದಿರುವರು

೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರಯೋಗದಿಂದಲೂ ಯಕ್ಷಿಣೀ ದೇವಾನುದೇವತೆಗಳು ಪ್ರತ್ಯಕ್ಷವಾಗುವದಕ್ಕೆ ಸಿದ್ಧಿ ಮಾಡಿಕೊಳ್ಳುವ ಕ್ರಮವು ಇದೆ.

೨ನೇದು ತಂತ್ರಪ್ರಕರಣದಲ್ಲಿ ಧನಪ್ರಾಪ್ತಿ ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರಸ್ಥ ದಾರಿದ್ರ್ಯನಿವಾರಣ ಇನ್ನೂ ನೂರಾರು ವಿಷಯಗಳು ಇದರಲ್ಲಿ ಸಮಾವೇಶವಾಗಿರುತ್ತವೆ. ಅದನ್ನು ಸಿದ್ಧಿ ಮಾಡಿಕೊಳ್ಳುವ ವಿವರವೂ ಇದೆ.

೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ ಅವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಬಾವಾಜಿಗಳ ಚುಟ್ಕಾ ಸಹ. ಇದರಲ್ಲಿ ಉಂಟು ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚನ್ನಾಗಿ ಬರೆದು ಇರುತ್ತದೆ, ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು,

೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ, ಗೃಹಪೀಡಾ ನಿವಾರಣ ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತಿರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ ದ್ರವ್ಯಗಳೂ, ವೈದ್ಯರೂ, ಜೋತಿಷ್ಯರೂ, ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಿರಲಿಕ್ಕಿಲ್ಲಾ ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರ ಕಡಿಮೆ ಮಾಡಿ ಇರುವದು. ೨-೮-೦ ಟಪಾಲ ಖರ್ಚ ೫ ಆಣೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ, ನಾಟಕ ಕಾವ್ಯ ಕಥೆಗಳು ಯಕ್ಷಗಾನ ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ.

೧೫-೧೧-೨೧

ಎ. ಆರ್. ಶಿವನಾಗಪ್ಪಾ ವಾಗ್ಗಿಲಾಕ
ಹುಬ್ಬಳ್ಳಿ

ಜಾಹೀರಾತಿಗಾಗಿ.

೧೨ ತಿಂಗಳಿಗೆ	೧೪೫ ರೂ.
೬ ,,	೭೫ ರೂ.
೩ ,,	೪೦ ರೂ.

ಅರ್ಧ ಹಣ ಮುಂಚಿತವಾಗಿ ಕಳಿಸಬೇಕು

ಈ ಪತ್ರವನ್ನು ಸತ್ಯಬೋಧ ರಾಮಚಂದ್ರ ಅಡಬಡ್ಡಿ ಇವರು ತಮ್ಮ [illegible] ಪ್ರೆಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ಹತ್ತುವದು. ಅಂದ ಬಳಿಕ ದೇಶವು ಅಲ್ಪಾವಕಾಶದಲ್ಲಿ ಬಡತನಕ್ಕೆ ಬರುವದು ಏನಾಶ್ಚರ್ಯ? ಆದಕ್ಕಾಗಿಯೇ ದೇಶದ ಮುಂದಾಳುಗಳು ಅಪ್ಪಗಳಿರಾ! ಅವ್ವಗಳಿರಾ! ಅಣ್ಣಗಳಿರಾ! ಅಕ್ಕಗಳಿರಾ! ಪರದೇಶದ ಜಿನಿಸಗಳಿಗೆ ಬಹಿಷ್ಕಾರ ಹಾಕಿರೆಂದು ಸದೇ ಸದೇ ಹೇಳುತ್ತಲಿರುವರು. ಬಹು ಕಳಕಳಿಯಿಂದ ಉಪದೇಶಿಸುತ್ತಲಿರುವರು. ಬಾಂಧವರೇ! ವಿಚಾರ ಮಾಡಿರಿ. ಹೀಗೇ ಪರದೇಶದ ಪಕ್ಕಾ ಮಾಲಿನ ಸುಳಿದಾಟವು ಹೆಚ್ಚುತ್ತ ನಡೆದರೆ ನಿಮ್ಮ ಗತಿಯೇನಾಗಬಹುದೆಂಬದನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ. ಈಗಾಗಲೇ ನಿಮ್ಮ ಹಣೆಯ ಬರಹವು ಎಲ್ಲಿಗೆ ಬಂದಿರುವದೆಂಬದನ್ನು ನೋಡಿಕೊಳ್ಳಿರಿ. ಪರದೇಶದ ಪಕ್ಕಾ ಮಾಲಿಗೆ ಬಹಿಷ್ಕಾರ ಹಾಕಿರಿ. ಸ್ವದೇಶದ ಪಕ್ಕಾ ಮಾಲನ್ನೇ ಕೊಳ್ಳಿರಿ. ಸ್ವದೇಶದ ಪಕ್ಕಾ ಮಾಲನ್ನು ತಯಾರಿಸಿರಿ. ಸ್ವದೇಶದ ಕಚ್ಚಾ ಮಾಲು ಹೊರಗೆ ಹೋಗದಂತೆಯೂ, ಪರದೇಶದ ಪಕ್ಕಾಮಾಲು ಒಳಗೆ ಬರದಂತೆಯೂ ಯತ್ನಿಸಿರಿ. ಸಂದೇಶದ ಕಚ್ಚಾ ಮಾಲನ್ನು ತರಿಸಲು ಪ್ರಯತ್ನಿಸಿರಿ. ಅಂದರೆ ಅಲ್ಪಾವಧಿಯಲ್ಲಿಯೇ ಪೂರ್ವ ವೈಭವವನ್ನು ಹೊಂದುವಿರಿ. ಇಲ್ಲದಿದ್ದರೆ ಈಗಿನಂಥ ಸಾವಿರಾರು ಸುಧಾರಣೆಗಳು ದೊರೆತರೂ, ದೇಶದ ತುಂಬ ಆಗಗಾಡಿ, ತಾರಾಯಂತ್ರ ಮೊದಲಾದ ಸುಖ-ಸಾಧನಗಳು ಎಷ್ಟಿದ್ದರೂ ನೀವು ತಲೆಯೆತ್ತಲಾರಿರೆಂಬದನ್ನು ಶರಗಿಗೆ ಗಂಟು ಹಾಕಿಕೊಳ್ಳಿರಿ.

ಇಂಗ್ಲಂಡವು ಫ್ರಾನ್ಸದ ಪಾಲಾಗಿ ಬಿಟ್ಟಿತು.

....೦....

ಜಿನೀವ್ಹಾ ಪರಿಷತ್ತು ವ್ಯಾಪಾರದ ಅಭಿವೃದ್ಧಿಗಾಗಿ ಕೂಡಿತು. ಯುರೋಪದ ಪ್ರಮುಖರಾಷ್ಟ್ರಗಳ ಪ್ರತಿನಿಧಿಗಳು ಕೂಡಿದರು. ಅದರಲ್ಲಿ ಪ್ರಮುಖ ರಾಷ್ಟ್ರಗಳೆಂದರೆ ಇಂಗ್ಲಂಡ-ಫ್ರಾನ್ಸಗಳೆರಡೇ ಉಳಿದ ರಾಷ್ಟ್ರಗಳ ವರ್ಚಸ್ವವು ಅಷ್ಟಕಷ್ಟೆ!

ಯುದ್ಧಕಾಲದ ಪೂರ್ವದ ಸ್ವಾಸ್ಥ್ಯಗಾಗಿ ಚಲಬಹುವು ಹುಟಕೊಟ್ಟಿತು. ಫ್ರಾನ್ಸವು ಬೆನ್ನುಕಟ್ಟಿತು. ಇಂಗ್ಲಂಡವು ಕದರ್ಥ ಮಥರ್ಥ ಮಾಡಬೇಕೆಂದಿತು. ಇಟಲಿಯವು ಎರಡಕ್ಕೂ ಒಪ್ಪಲಿಲ್ಲ. ಇಂಗ್ಲಂಡಕ್ಕೆ ವ್ಯಾಪಾರವು ಬೇಕು. ಅದೂ ಸುರಕ್ಷಿತವಾದ ವ್ಯಾಪಾರವು ಬೇಕು. ಅದಕ್ಕಾಗಿ ವಾಗವು ಬಳ್ಳೇ ಭರಕ್ಕೆ ಬಂದಿತು.

ಇಂಗ್ಲಂಡದಲ್ಲಿಯಾದರೂ ಮತಭೇದಗಳಿವೆ. ಪಕ್ಷಭೇದಗಳಿವೆ. ಯಾರು ಅಗ್ರಹವೇಕೆ? ಫ್ರಾನ್ಸ ಇಟಲಿಯಾ ಜರ್ಮನಿಗಳು ಬೇಕಾದದ್ದು ಮಾಡಿಕೊಳ್ಳಲೊಲ್ಲವೇಕೆ? ೧೦-೮ ವರ್ಷ ಯುದ್ಧದಲ್ಲಿಯೇ ಕಳೆದರೆ ನಮ್ಮ ವ್ಯಾಪಾರವು ಸರಿಯಾಗಿ ಕೂಡುವದೆಂದರೆ, ಯಾರು ಇಟಿಯಾದ ವ್ಯಾಪಾರವಾದರೂ ಅಷ್ಟಕ್ಕಷ್ಟೇ ಆದೆ. ಆದಕ್ಯಾಕೆ ಇಷ್ಟೊಂದು ಅಗ್ರಹವನ್ನ ತೊಡಗಿದರು. ಯಾರು ಆಫ್ರಿಕಾ-ಚೀನ-ಹಿಂದುಸ್ಥಾನ-ಮುಸಲ್ಮಾನ ಪ್ರದೇಶಗಳಲ್ಲಿ ವ್ಯಾಪಾರವನ್ನು ಮಾಡುತ್ತಿದರೆ ಸಾಕೆಂದರೆ ಯಾರು ಮಹಾಯುದ್ಧದಲ್ಲಿ ದೊರೆತ ಸವಲತಿಯ ಲಾಭವನ್ನು ಈ ಬಡೆದಾಟದಲ್ಲಿ ಸ್ಪಷ್ಟವಾಗಿ ಕುಳಿತು ಉಂಡರೆ ಸಾಕೆಂದರು. ಹೀಗಾಗಿ ಯಾರೊಬ್ಬರೂ ಒಂದೊಂದು ತರವಾಗಿ ಮಾತಾಡತೊಡಗಿರುವಾಗ ಮಿ. ಲಾಯಿಡ ಜಾರ್ಜರು ಫ್ರಾನ್ಸದ ಪ್ರತಿನಿಧಿಯಾದ ಎಮ್ ಬ್ರಾಧೋರ್‍ರವರಿಗೆ ನೀವು ಅಗ್ರಹವನ್ನು ಹಿಡಿದರೆ ನಿಮ್ಮ ಪಕ್ಷಕ್ಕೆ ನೀವು ಸಮ್ಮಷ್ಟಕ್ಕೆ ಸಾಧು ಎಂದು ಹೇಳಿ ಬಿಟ್ಟಿರುವರು

ಮಿ. ಲಾಯಿಡಜಾರ್ಜರು ಉದಾರ ಮತವಾದಿಗಳು ಈ ವೇಳೆಯಲ್ಲಿ ಶಾಂತತೆಯನ್ನು ನೆಲೆಗೊಳಿಸಿ, ಬಡವರ ಉದ್ಧಾರ ಮಾಡಬೇಕೆನ್ನುವರು. ಹಾಗೆ ಮಾಡದಿದ್ದಲ್ಲಿ ಮಹಾಪಾತಕವು ಇಂಗ್ಲಂಡಕ್ಕೆ ಒದಿಯುವದೆಂದು ಅವರ ಮತವು. ತಮ್ಮ ಈ ನವಿಯಾದ ಮತಕ್ಕಾಗಿ ಅವರು ಪ್ರಸಂಗವಶಾತ್ ತಮ್ಮ ಕಾನ್ಸರ್‌ವೇಟಿವ್ಹ ಪಕ್ಷವನ್ನಾದರೂ ಬಿಡಬಹುದು. ಉದಾರಮತವಾದಿಗಳಾಗಿ ಸ್ವೀಕೃತಕಾರ್ಯಕ್ಕೆ ಹೋಗಬಹುದು. ಹಾಗಾದರೆ ಉತ್ತಮವೇ ಸರಿ, ಸದ್ಯಕ್ಕಂತೂ ಜಿನೀವ್ಹಾ ಪರಿಷತ್ತಿನಿಂದ ಇಂಗ್ಲಂಡವು ಫ್ರಾನ್ಸದ ಪಾಲಾಗಿ ಬಿಟ್ಟಂತಾಗಿದೆ.

ಇತ್ತ ಇಟಾಲಿಯಾವು ರಶಿಯಾದೊಡನೆ ವ್ಯಾಪಾರ ತಹವನ್ನು ಮಾಡಿಕೊಂಡರೂ, ಫ್ರಾನ್ಸದ ಹಿತಸಂಬಂಧಕ್ಕೆ ಧಕ್ಕೆಯಿಲ್ಲವೆಂದು ಅನ್ನುವರು. ಇಂಗ್ಲಂಡವಾದರೋ ರಶಿಯಾ-ಜರ್ಮನಿಗಳ ತವಕ್ಕೆ ಹಾತೊರೆಯುತ್ತಿರುವದು. ಹೀಗಾಗಿ ಈ ಗೊಂದಲದಲ್ಲಿ ಫ್ರಾನ್ಸವು ಒಂಟಿಗನಾಗಿ ಉಳಿಯುವದೋ ಅಗ್ರಹವನ್ನು ಬಿಡುವದೋ ನೋಡಬೇಕಾಗಿದೆ.

ಧಾರವಾಡ ಅಸಹಕುಂಡಗಲ್ಲಿ ಪವಸ್ಥಳದ ಒಂದು ಆಹುತಿಯು.

ಅರ್ಥಾತ್

ಮೌ. ಮಹಮ್ಮದ ಯಾಸೀನರವರಿಗೆ ಒಂದುವರ್ಷದ ಸಶ್ರಮಶಿಕ್ಷೆಯು.

ಅಳಣಾವರದಲ್ಲಿ ಭಾಷಣ ಮಾಡಿದ ಬಗ್ಗೆ ಕಾನಪುರದ ಮೌ ಮಹಮ್ಮದ ಯಾಸೀನರನ್ನು ಪುಣೆಯಲ್ಲಿ ಹಿಡಿದು ಇಲ್ಲಿಗೆ ತಂದಿದ್ದರು. ನಿನ್ನೆ (ತಾರೀಖು ೧೭-೫-೨೨) ಪ್ರಾತಃಕಾಲದ ಎಂಟು ಗಂಟೆಯ ಸುಮಾರಕ್ಕೆ ಮ್ಯಾ, ಮಿ, ಸಂಡಿತರವರು ಅವರಿಗೆ ೧ ವರ್ಷದ ಸಶ್ರಮ ಶಿಕ್ಷೆಯನ್ನು ವಿಧಿಸಿದರು.

ಶ್ರೀ, ಸಲ್ಲ್ಯಾಪುರ ತಾಲೂಕಾ ಕಾ. ಕ, ಅಧ್ಯಕ್ಷರಿಗೆ ೧೦೦ ದಂಡವು ೬ ತಿಂಗಳ ಸಶ್ರಮ ಶಿಕ್ಷೆಯು ವಿಧಿಸಲ್ಪಟ್ಟಿತು.

ಮುಬ್ಬಯಿ ನ್ಯಾಶನಲ್ ಪಾರ್ಟಿ.

ಆರಿಸಿಬಂದ ಅಧಿಕಾರೀ ವರ್ಗವು.

ಪ್ರೆಸಿಡೆಂಟ ಮಿ ಕೆಂಬಳಿ, ಎಂ, ಎಲ್, ಸಿ, ವ್ಹಾಯಿಸ್ ಪ್ರೆಸಿಡೆಂಟ ಸರದಾರ ಮೀರಮುಹಬೂಬಲ್ಲಖಾನರು.

ಸ್ಕ್ರ, ಜೋ, ಜೇಅರಮನ್ನ ಮಿ, ಬಿಳಿಲಂಗಡಿ ವಕೀಲ
ಮ್ಯಾ, ಕ, ಜೇಅರಮನ್ನ ಮಿ, ಆನೇಗುಂದಿ ವಕೀಲ
ಸ್ಕ್ಯಾ. ಕ, ಜೇಅರಮನ್ನ ಮಿ. ಮಾಳಗಿ ವಕೀಲ

ಭಿಲ್ಲ ಗುಡಿಸಲು ಅಗ್ನಿಗೆ ಒಪ್ಪಿಸಲ್ಪಟ್ಟವು.

ಸಿರೋಹೀ ಸಂಸ್ಥಾನದ ಭಿಲ್ಲರ ಮೇಲಿನ ಸ್ವಾರಿಯಲ್ಲಿ ಅವರ ಗುಡಿಸಲುಗಳಿಗೆ ಬೆಂಕಿಯನ್ನು ಹಚ್ಚಿತು. ಇಬ್ಬರು ಭಿಲ್ಲರನ್ನು ಹಿಡಿದರೆ ಇಬ್ಬರಿಗೆ ಗಾಯವಾಗಿದೆ. ಕಳೆದ ೪-೬ ದಿವಸಗಳಲ್ಲಿ ೧೦೦ ಜನರನ್ನು ಹಿಡಿಯುವದರಲ್ಲಿ ಬಂದಿದೆ.

ವಿಲಕ್ಷಣ ಕೊಲೆಯು

ಪ್ರೋಮ (ಬ್ರಹ್ಮದೇಶ) ದ ಪೋಸ್ಟಮಾಸ್ತರರು ರಜೆ ತೆಗೆದುಕೊಂಡು ಬರುವಾಗ ಆಗ ಗಾಡಿಯಲ್ಲಿ ವಿಯಯಾಸ ಸ್ಟೇಶನದಲ್ಲಿ ಅವರ ಕೊಲೆಯಾದದ್ದು ಕಂಡು ಬಂತು ಅವರ ಕೈಗಳನ್ನು ಹಿಂದೆ ಕಟ್ಟಿ ಚೂರಿಯಿಂದ ಮುಖವನ್ನು ಹೂರು ಹೂರು ಮಾಡಿರುವರು. ಅವರ ಧನವೆಲ್ಲ ಹೋಗಿದೆ ಅವರ ಗಾಡಿಯಲ್ಲಿ ಕುಳಿತ ಮೂವರ ಪತ್ತೆಯೇ ಇಲ್ಲ

....

೧೬ ನೇ ಮೇದೊಳಗಾಗಿ ಜರ್ಮನಿಯವರು ಖಂಡಣಿಯ ಹಣವೆಂದು ೫ ಕೋಟಿ ಮಾರ್ಕನ್ನು ದೋಸ್ತರಿಗೆ ಒಪ್ಪಿಸುವರು.

ಚೀಫ ಪ್ರೆ, ಮ್ಯಾ, ರವರು ಬೇನೆಬಿದ್ದದರಿಂದ ಕಲಕತ್ತಾ ಪ್ರೆ, ಜೇಲ ವಿಚಾರಣೆಯು ಮುಂದೆ ಬಿದ್ದಿದೆ.

ಉತ್ತರ ಅರ್ಕಾಟದ ಶ್ರೀ, ಕೊಂಡಾಫೂರ ಅಯ್ಯರರ ಮೇಲೆ ೧೦೮ ಹೊರಟಿದೆ.

ತುರ್ಕಸ್ಥಾನದೊಳಗಿನ ರೇಲ್ವೆ ಮಾರ್ಗದ ಯಜಮಾನಿಗಾಗಿ ತುರ್ಕಸ್ಥಾನದೊಡನೆ ಮಾತು-ಕಥೆಗಳಿದ್ದು ಇತರ ರಾಷ್ಟ್ರಗಳ ಕಂಪನಿಯವರು ಬೇಡಿದರಕ್ಕೇ ಇಟಾಲಿಗೆ ಕೊಡಬೇಕೆಂಬ ನಿರ್ಧಾರವಾದೆಂದು ಇಟಲಿಯವರು ಪ್ರಸಿದ್ಧಿಸಿರುವರು

ನೋಟೀಸು.

ನಾಗವ್ವಾ ಕೋಂ ಹೆಗ್ಗಪ್ಪಾ ತೋಟಿಗೇರ ಸಾಕೀನ ಅಂತರವಳ್ಳಿ ತಾಲ್ಲೂಕ ರಾಣೆಬೆನ್ನೂರ ಈಗಿ ಹಾಲಿವಸ್ತಿ ಕುಸ್ಪೇಲೂರ ಧರಮಪ್ಪಾ ತೋಟಿಗೇರ ಈತನ ಮನಿಯಲ್ಲಿ ಈಕಿಗೆ—

ತೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡಿರುವ ಬುಂಜಪ್ಪಾ ಬಿನ್ನ ಹೆಗ್ಗಪ್ಪಾ ತೋಟಿಗೇರ ಸಾ॥ ಅಂತರವಳ್ಳಿ ತಾಲ್ಲೂಕ ರಾಣೆಬೆನ್ನೂರ ಈತನು ಈ ನೋಟೀಸಿನ ಮೂಲಕ ಪ್ರಸಿದ್ಧರೀತಿಯಿಂದ ತಿಳಿಸುವದೇನಂದರೆ. ನಿನ್ನ ಗಂಡಾ ಪೋತಿ ಹೆಗ್ಗಪ್ಪಾ ಈತನು ನಮ್ಮ ಅಂಣತಮ್ಮಂದಿರ ಪೈಕಿ ಇದ್ದು ಅಜಮಾಸು ವಂದು ವರ್ಷದ ಕೆಳಗೆ ಮೃತಪಟ್ಟಿರುತ್ತಾನೆ ಆತನಿಗೆ ಒಂದು ಹೆಣ್ಣು ಯಲ್ಲವ್ವಾ ಅಂಬುವ ಹೆಣ್ಣು ಹುಡುಗಿ ಎರಡು ವರ್ಷದ್ದು ಇರುತ್ತದೆ.

ನೀನು ನಿನ್ನ ಗಂಡ ಸತ್ತ ಲಾಗಾಯತು ಮನಿ ಓಡಿ ಹೋಂದು ಇರದೇ ಕೆಟ್ಟ ನಡತೆಯುವಳಾಗಿ ವೇಶ್ಯಾಚಾರಕ್ಕೆ ಬಿಚ್ಚಿದವಳು ಆಗಿರತಿದಿ ಮತ್ತು ಪುರಷನ್ನು ತಿರಗಾಡುತ್ತಿ

ನಿನ್ನ ಗಂಡನ ಯುತ್ಲಾ ಇಸ್ಟೇಂಟು ನಿನ್ನ ಮಗಳು ಅಲ್ಪವಯಿ ಯಲ್ಲವ್ವಾ ಮಾಲಿಕಳಾಗಿರತಾಳೆ

ನೀನು ನಿನ್ನ ಗಂಡನ ಜಾ॥ ಜಮೀನುಗಳನ್ನು ಮಾರಾಟ ಮಾಡಿಕೊಂಡು ಹೋಗಬೇಕಂತಾ ಮಸಲತ್ತು ಮಾಡಿ ಊರೂರಿಗೆ ಜಮೀನ ಖರೀದಿಗೆ ತೆಗೆದುಕೋತಿರೇನಂತಾ ಕೇಳಕೋತಾ ತಿರಗಾಡತತ್ತ್ರಿದಿ. ಈ ಬಾಬು ಅಂ॥ ವಯಿ ಹಿತದ ದಸಿಂದಾ ವೂರೊಳಗಿನ ಸಂಭಾವಿತ ಜನರಿಗೆ ತಿಳಿದಿದೆ.

ತಿರಾಯತ ಜನರು ನಿನ್ನನ್ನು ಕರಿಸಿ ನಿನ್ನ ಮಗಳ ಕುತ್ತಿಗೆ ಕೊಯ್ಯಬ್ಯಾಡಾ ನಿನ್ನ ಗಂಡನ ಜಾ॥ ಜಂಗಮ ಮಾಲಿನ ಶಿವಾಯ ವುಳಿದಮುಲ್ಲಾ ಆಸ್ತಿ ಅಂದ್ರ ಪೊಲಾಮನಿ ಬಿಕಾ ತೋಟ ಯಲ್ಲಾ ನನ್ನ ತಾಬಾಕ್ಕೆ ತೆಗೆದುಕೋಬೇಕು ನಾನು ನಿನಗೆ ಏಳುನೂರು ರೂಪಾಯಿ ರೋಖ ಕೊಡತಕ್ಕದ್ದು ನೀನು ಆಸ್ತಿಯಾವದೂ ಮಾರಬಾರದು ಆ ರಕಮಿನ ಒಡ್ಡಿಯಲ್ಲಿ ನೀನು ವ ನಿನ್ನ ಮಗಳು ವುಪಜೀವನಮಾಡತಕ್ಕದ್ದು ಅಲ್ಪವಯಿ ಯಲ್ಲವ್ವಾ ವಯಸ್ಸಿಗೆ ಬಂದ ನಂತರ ನನ್ನ ತಾಬಾದಲ್ಲಿ ನೀನು ಕೊಟ್ಟ ಯುಳ್ಳ ಸ್ಥಾವರ ಆಸ್ತಿ ಅಲ್ಪವಯಿ ಸ್ವಾಧೀನಕ್ಕೆ ನಾನು ಕೊಡಬೇಕು ನೀನು ನಿನ್ನ ಹಯಾತಿವರಿಗೆ ನಾನು ಈಗ ಕೊಟ್ಟ ಯೋಳುನೂರದ ವ್ಯಾಜಿನಲ್ಲಿ ವುಪಜೀವನ ಮಾಡತಕ್ಕದ್ದು ನಿನ್ನ ಪಶ್ಚಾತ ಸದರಿ ರೂಪಾಯಿಗಳು ಅಲ್ಪವಯಿ ಯಲ್ಲವ್ವಗೆ ಮುಟ್ಟತಕ್ಕದ್ದು ಅಂತಾ ತಿರಾಯತರು ಠರಾವ ಮಾಡಿದರು

ಅದಕ್ಕೆ ನೀನು ವಪ್ಪಿ ನಿನ್ನ ತಂದಿ ಸಮಕ್ಷಮಾ ಯುಲ್ಲಾ ಇಸ್ಟೇಂಟು ನನ್ನ ಕಬಜಾಕ್ಕೆ ಅಜಮಾಸ ಆರು ತಿಂಗಳ ಕೆಳಗೆ ಕೊಟ್ಟಿರುತ್ತೀದಿ.

ನಾನು ಕೊಡತಕ್ಕ ಏಳುನೂರು ರೂಪಾಯಿ ತಿರಾಯತರಿಗೆ ಯೋಗ್ಯ ಖಾತ್ರಿ ಮಾಡಿಕೊಟ್ಟು ವಯ್ಯಬೇಕಂತಾ ಗೊತ್ತಾಗಿತ್ತು ಆ ಪ್ರಕಾರ ಇದು ವರಿಗೆ ಬಂದು ರೂಪಾಯಿಗಳು ವಸ್ಸೂಲಿಲ್ಲಾ

ಈಗ ಕೆಟ್ಟ ಜನರ ದುರ್ಬೋಧನೆಯಿಂದಾ ನಿನ್ನ ವೇಸನಕ್ಕೆ ಮೆಚ್ಚಿ ಯಾರಿಗಾದರೂ ಜಮೀನು ಮಾರಾಟ ಮಾಡಿ ರೂಪಾಯಿ ತೆಗೆದುಕೊಂಡು ಹೋಗಬೇಕಂತಾ ಮಸಲತ್ತು ಮಾಡಿದಿ ಅಂತಾ ಕೇಳಿರತೇನೆ

ಅಲ್ಪವಯಿ ಇಸ್ಟೇಂಟು ಯಾವ ರೀತಿಯಿಂದಾನು ವಿಲ್ಲೇವಾಟ ಮಾಡಲಿಕ್ಕೆ ನಿನಗೆ ಅಧಿಕಾರ ಇರುವದಿಲ್ಲಾ ಯಾರಾದರೂ ನಿನ್ನ ಕಡಿಂದಾ ಖರೀದಿ ಬರಿಸಿಕೊಂಡರೆ ಅದು ನಡಿಯುದೇ ಖರೀದಿದಾರರು ಲುಕ್ಸಾನಕ್ಕೆ ಪಾತ್ರರಾದಾರು

ನಂಮ ಕರಾರಿನಿಂದಾ ತಿರಾಯತರ ವಿಸ್ವನೂನ ಯುಲ್ಲಾ ಇಸ್ತಿ ನನ್ನ ಕಬಜಾಕ್ಕೆ ಕೊಟ್ಟಿರುವದರಿಂದ ಅಂ॥ ಯುಲ್ಲವ್ವ ವಯಸ್ಸಿಗೆ ಬರುವವರಿಗೆ ಯಾರ ಕಬಜಾಕ್ಕೂ ಆಸ್ತಿ ನಾನು ಕೊಡುವವನಲ್ಲಾ ನೀನು ಜರ ಭುಲ್ಯಾಸಿಗೆ ಖರೀದಿ ವಗೈರೆ ಯಾವ ವಿಧದಿಂದಲೂ ಬರಕೊಡಬಾರದು

ಈ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದೇನಂದ್ರೆ ಅಂ॥ ಯಲ್ಲವ್ವನ ಮಾಲ್ಕಿ ಇಸ್ಟೇಂಟು ನಾಗವ್ವನ ಕಡಿಯಿಂದಾ ಯಾರೂ ಖರೀದಿ ಬರಸಿಕೊಳ್ಳಬಾರದು ಕದಾಚಿತ ಬರಿಸಿಕೊಂಡರೆ ಲುಕ್ಸಾನಕ್ಕೆ ಕಾರಣವಾದೀರಿ.

ಲಿಂಗೋ ಸೋಮರಾವ ಕುಲಕರ್ಣಿ ಅಂತರವಳ್ಳಿ ಇವರಿಗೆ ಬೇಡಿಕೊಳ್ಳುವದೇನಂದ್ರೆ ಅನಾಧಿಕಾರಿ ಆದ ನಾಗವ್ವನ ಕಡಿಂದಾ ನೀವು ಜಮೀನು ಬರಿಸಿಕೋತೀರಿ ಅಂತಾ ಕೇಳಿದ್ದೇನೆ ಆಕಿಗೆ ಖರೀದಿ ಕೊಡಲಿಕ್ಕೆ ಹಕ್ಕಿಲ್ಲಾ ಆದ್ದರಿಂದಾ ನೀವು ಊರತಂದಿತಾಯಿಗಳು ಅ॥ ಯಲ್ಲವ್ವನ ಇಸ್ಟೇಂಟು ರಕ್ಷಣೆ ಮಾಡತಕ್ಕವರು. ದಯ ಮಾಡಿ ನೀವು ಖರೀದಿ ಬರಿಸಿಕೊಬಾರದೆಂತಲೂ ಯರಡನೇ ಜನರಿಗೆ ಖರೀದಿ ತೆಗೆದುಕೊಳ್ಳಬಾರದೆಂದು ತಿಳಿಸ್ಬೇಕೆಂತಲೂ ಬೇಡಿಕೊಳ್ಳುತ್ತೇನೆ ತಾರೀಖು ೫-೪-೨೨ನೇ ಇಸ್ವಿ

ಈ ಯಡಗೈ ಹೆಬ್ಬೆಟ್ಟಿನ ಗುರ್ತಾ ಬುಂಜಪ್ಪಾ ಬಿನ್ನ ಹೆಗ್ಗಪ್ಪಾ ತೋಟಗೇರ ಸಾ॥ ಅಂತರವಳ್ಳಿ ಈತ ಮಾಡಿದ್ದು ಅದೆ.

ಜಾಹೀರನೋಟೀಸು.

ಧಾರವಾಡ ಡಿ॥ ಕೋರ್ಟಿನ ಡೆ॥ ನಾಝರರ ಕಡಿಂದಾ ಇದರ ಮೂಲಕಾ ಯಾವತ್ತು ಜನರಿಗೆ ತಿಳಿಯಬೇಕಲ್ಲಾ ಅಲ್ಪವಯಿ ಗುಂಡಾಬಾಯಿ ಕೋಂ ಶ್ರೀನಿವಾಸರಾವ ಪಾಟೀಲ- ಕುಲಕರ್ಣಿ ಸಾಕೀನ ಮುಡೂರ ಇವಳ ಬಾಬತು ಹಾನಗಲ್ಲ ತಾಲೂಕ ಮುಡೂರ ವ ಕ್ಯಾಸನೂರ ಗ್ರಾಮಗಳಲ್ಲಿ ಅಲ್ಪವಯಿದು ಸರಕಾರಿ ಜಮೀನಿಯಲ್ಲಿರುವ ಗಂಧದ ಮರಗಳನ್ನು ಲಿಲಾವ ರೀತಿಯಿಂದ ತಾ ೨೫ ಮೇ ಸನ್ನ ೧೯೨೨ ಇಸ್ವಿ ರೋಜ ಗುರುವಾರದಿಂದ ಮುಡೂರ ಗ್ರಾಮದ ಚಾವಡಿಯಲ್ಲಿ ಲಿಲಾವ ಮಾಡಲ್ಪಡುವವು. ಲಿಲಾವಿನಲ್ಲಿ ಬೇಕಕ್ಕವರು ಹಾಜರ ಇರತಕ್ಕದ್ದು. ಲಿಲಾವಿನಲ್ಲಿ ಗಿಡಗಳನ್ನು ತಗೊಂಡವರು ಆಗಿಂದಾಗಲೇ ಹಣ ಕೊಟ್ಟು ಪಾವತಿ ಪಡಕೊಳ್ಳಬೇಕು. ಮಾರತಕ್ಕ ಗಿಡಗಳ ಮಾಹಿತಿ ಆಯಾ ಗ್ರಾಮಗಳ ಗಾಡರಕಡಿಂದಾ [illegible] ತಗೋಬೇಕು. ಇದಕ್ಕೆ ಹೆಚ್ಚಿಗೆ ಏನಾದರೂ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಯಲ್ಲಿ ಸೂಟಿ ದಿವಸಗಳ ಬಿಟ್ಟು ಸಮಕ್ಷಮಾ ಬಂದು ಮಾಹಿತಿ ಪಡಕೊಳ್ಳಬೇಕು

ತಾ॥ ೫-೫-೨೨

ಆರ್, ಹ್ವಿ, ಕುಸುನೂರ.
ಡಿಪುಟಿ ನಾಝರ ಧಾರವಾಡ

ಅತ್ಯಂತ ಧಾತುಪೌಷ್ಟಿಕ
ವೀರವರ್ಧಕ ಕಾಮೋದ್ದೀಪಕ
ಶಕ್ತಿವರ್ಧಕ ಚೂರ್ಣ.

....೦....

ಈ ಚೂರ್ಣದ ಸೇವನೆಯಿಂದ ಅಕಾಲದಲ್ಲಿ (ಬಾಲ್ಯಾವಸ್ಥೆಯಲ್ಲಿ) ಬಲಾತ್ಕಾರದಿಂದ ಇಂದ್ರಿಯ ಪತನವನ್ನು ಮಾಡಿ ಉಂಟಾದ ದುರ್ಬಲತೆಯನ್ನು ಹೋಗಲಾಡಿಸಿ, ಸ್ಥಿರವಾದ ಬಲವನ್ನು ಉಂಟುಮಾಡುತ್ತದೆ. ೧ರು. ೮ ತೊಲಾ ಚೂರ್ಣ

ರಾಮಬಾಣ ಗುಟಿಕಾ

ಪ್ಲೇಗಿನಮೇಲೆ ಇಂಥ ಔಷಧವನ್ನು ಇಂದಿನವರೆಗೆ ಯಾರು ಶೋಧಿಸಿಲ್ಲವೆಂದು ಪ್ರತಿಜ್ಞಾಪೂರ್ವಕ ಹೇಳಬಹುದು. ೧ರು. ೧೬ಮಾತ್ರೆಗಳು

ಬಲಾಬಿನ ಗುಳಿಗೆಗಳು. ೧ರು, ೬೪ ಮಾತ್ರೆಗಳು

ಬಚ್ಚಿ ಹುರುಕಿನ ಮಲಾಮಿನ ಡಬ್ಬಿಗಳು.

೩ನೇ ದಿವಸದಲ್ಲಿ ಗುಣಬಾರದಿದ್ದಲ್ಲಿ. ಹಣವನ್ನು ಪರತ ಕಳುಹಿಸುವೆವು. ೩ ಡಬ್ಬಿಗಳ ಕ್ರಯ ೧ರು

ಕಿರಾತ ಪಾಕ

ಅಸ್ಥಿಗತ ಜ್ವರವನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನು ಮಾಡುವದು. ೧ ಬಾಟ್ಲಿಯ ಬೆಲೆ ೨ರೂಪಾಯಿ.

ಮೂಲವ್ಯಾಧಿಯ ಔಷಧ.

ರಕ್ತಮೂಲವ್ಯಾಧಿ. ಮೊಳಿಯುಳ್ಳ ಮೂಲವ್ಯಾಧಿ ಮುಂತಾದ ಯಾವತ್ತು ತರದ ಮೂಲವ್ಯಾಧಿಗಳನ್ನು ಒಂದುವಾರದೊಳಗಾಗಿ ಗುಣ ಪಡಿಸುತ್ತದೆ- ೧ವಾರದ ಔಷಧದ ಬೆಲೆ ೩ರೂಪಾಯಿ

೧ ಹಿಂಗಾಷ್ಟಕ ಚೂರ್ಣ ೧ರು. ೧೦ ತೊಲೆ.
೨ ಸೀತೋಪಲಾದಿ ಚೂರ್ಣ ೧ರು. ೮ ತೊ.

ದಂತಮಂಜನ

೧ ಕುಪ್ಪಿಯ ಬೆಲೆ. ೩ ಆಣೆ. ೧ ರು. ೬ ಕುಪ್ಪಿಗಳು.

ಡಾ. ಎಸ್. ಎಸ್. ನೇಬಕೂರ
ಆಯುರ್ವೇದಿಸ್ಟ ಕ್ಯಾಂಡ ಕೆಮಿಸ್ಟ
ಧಾರವಾಡ.

ಚಂದಾದಾರರಿಗೆ ವಿನಂತಿ

——(೦)——

೧ ಇನ್ನು ಪೋಸ್ಟಿನ ದರವು ಏರಿಸಲ್ಪಟ್ಟದರಿಂದ ಮಹತ್ವದ ಪ್ರಸಂಗದ ಹೊರತು ಬಂದ ಕಾರ್ಡುಗಳಿಗೆ ಉತ್ತರಹಾಕೆವು,

೨ ನಾವು ಪತ್ರಗಳನ್ನು ಸರಿಯಾಗಿ ಪೋಸ್ಟಿಗೆ ಹಾಕುತ್ತಿರುವದರಿಂದ ಪತ್ರ ಮುಟ್ಟದ ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ಮಾಡದೆ, ಪೋಸ್ಟಿನೊಡನೆ ಮಾಡಬೇಕು.

೩ ಹೊಸದಾಗಿ ಚಂದಾದಾರರಾಗುವವರು ಹಣ ಮನಿಯಾರ್ಡರ ಮಾಡಬೇಕಲ್ಲದೆ, ವ್ಹಿ. ಪಿ. ಯಿಂದ ಬೇಡಿದರೆ ಕಳಿಸಲಾರೆವು. ಆದ್ದರಿಂದ ನಿಷ್ಕಾರಣವಾಗಿ ಅರ್ಧ ಆಣೆಯನ್ನು ಕಳೆದುಕೊಳ್ಳಬಾರದು,

೪ ಚಂದಾಮುಗಿದ ವರ್ಗಣೀದಾರರ ನಂಬರುಗಳನ್ನು (ಅಂದರೆ ಅವರ ಪತ್ರಿಯ ಹಿಂದುಗಡೆಯಲ್ಲಿದ್ದ ಅಂಕಿಗಳನ್ನು) " ಚಂದಾದಾರರಿಗೆ ಸೂಚನೆ " ಈ ಹೆಡ್ಡಿಂಗಿನ ಕೆಳಗೆ ಪ್ರಸಿದ್ಧಿಸುವೆವು. ಆ ನಂಬರುಗಳಿದ್ದವರು ಚಂದಾ ಹಣವನ್ನು ಮನಿಯಾರ್ಡರ ಮಾಡಬೇಕು. ಇಲ್ಲದಿದ್ದರೆ ಪತ್ರವನ್ನು ಬಂದಿಡುವೆವು,

೫ ಮುಂಗಡಹಣವಾಗಲಿ, ಟಿಕ್ಕೀಟು ಪತ್ರವಾಗಲಿ ಬರದೆ ಚಂದಾದಾರರ ಬೇಡಿಕೆಗಳು ಪೂರ್ಣವಾಗವು.

೬ ಇದಕ್ಕೂ ಹೆಚ್ಚಿನ ಮಾಹಿತಿಯು ಏನಾದರೂ ಬೇಕಾದಲ್ಲಿ ಟಿಕ್ಕೀಟು ಇಟ್ಟು ಕೇಳಬಹುದು

ಮ್ಯಾ. ವಿ. ಧಾರವಾಡ.

ಉತ್ತಮ ತರದ ಮಾಲು
ಕ್ರಯ ಸುಲಭ

ಮಕ್ಕಳ ಆರೋಗ್ಯಕ್ಕೆ [illegible] ೩.೨ [illegible] ಸೆಟ್ಟು ೧ಕ್ಕೆ ರೂ ೧-೧೪-೦ ಮಧ್ಯಮ ೩-೦-೦ ಉತ್ತಮ ರೂ ೪-೮-೦ ದೊಡ್ಡದು ೫-೦-೦

ಮಹಾಸ್ವಾಮಿ ನಿಮಗೆ ಕಾಶಿಯಲ್ಲಿ ಯಾರ ಪರಿಚಯವಿದೆ? ಸ್ವಾಮಿ ನನಗೆ ಎಸ್. ಡಿ, ನಾರಾಯಣಾಚಾರ್ಯರ ಕಂಪನಿ ಚೆನ್ನಾಗಿ ತಿಳಿಯುವದು. ನಿಮಗೇನು ಬೇಕು? ನಮಗೆ ಕಾಶೀ ಪೀತಾಂಬರ, ಸೀರೆ, ಖಣ, ಶಾಲ್ಜೋಡಗಳು, ರುದ್ರಾಕ್ಷಿ, ಸ್ಫಟಿಕಲಿಂಗ ಮಣಿ, ಬಾಗಂಟಿ, [illegible], ರೇಶ್ಮೆ ಗೋಲ್ಡ [illegible] ಲಿಂಗ, ವಾಸುದೇವ ಪ್ರತಿ, ಕಪ್ಪುರ ನಾಮದಿ, ಈ ನಮೂನೆದ ವಸ್ತುಗಳು ಬೇಕಾಗಿದೆ, ಹಾಗಾದರೆ ಒಂದಾಣೆ ಟಿಕೀಟು ಕಳುಹಿಸಿ ಕೆಟಲಾಗು ತರಿಸಿ ನೋಡಿರಿ.

ವಿಳಾಸ ಎಸ್ ಡಿ. ನಾರಾಯಣಾಚಾರ್ಯ ಮತ್ತು [illegible], ಬನಾರಸ. (ಕಾಶಿ)

ಪ್ರತ್ಯಕ್ಷ ಫಲ ಪಂಚ ಸಿದ್ಧಿ.

ಇದು ರಾಯಚೂರು ಭೀಮಾವಧೂತರು.

ಶ್ರೀಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ. ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ, ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾವಿ. ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವಗಳು ಪ್ರತಿಯೊಂದು ಸಿದ್ಧಿಮಾಡಿಕೊಂಡು ಬರೆದಿರುವರು

೧ನೇದು ಮಂತ್ರಪ್ರಕರಣದಲ್ಲಿ ಮಂತ್ರ ಪಠಣದಿಂದಲೂ, ಮಂತ್ರ ಯೋಗದಿಂದಲೂ ಯಾವ ದೇವತಾ ದೇವತೆಗಳು ಪ್ರತ್ಯಕ್ಷನಾಗುವದಕ್ಕೆ ಸಿದ್ಧಿ ಮಾಡಿಕೊಳ್ಳುವ ಕ್ರಮವು ಇದೆ.

೨ನೇದು ತಂತ್ರಪ್ರಕರಣದಲ್ಲಿ ದ್ರವ್ಯಪ್ರಾಪ್ತಿ ಆಸನದಿಂದಲ್ಲಿ ರೂಪಾಯಿಗಳು ದೊರಕುವಿಕೆ ಬೆಳ್ಳಿಯನ್ನು ಮಾಡುವದು ವ್ಯಾಪಾರವೃದ್ಧಿ ದಾರಿದ್ರ್ಯನಿವಾರಣ ಇನ್ನೂ ನೂರಾರು ವಿಷಯಗಳು ಇದರಲ್ಲಿ ಕಲಿತವಾಗಿರುತ್ತವೆ. ಅದನ್ನು ಸಿದ್ಧಿ ಮಾಡಿಕೊಳ್ಳುವ ವಿವರವೂ ಇದೆ

೩ನೇದು ಜೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ ಇವನ್ನು ಅನುಭವ ತೆಗೆದುಕೊಂಡು ತಿಳಿಸಿರುವರು

೪ನೇದು ಔಷಧಪ್ರಕರಣದಲ್ಲಿ ಯಾವ ಯಾವ ಗಿಡಮೂಲಿಕೆಗಳಿಂದ ಯಾವ ಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಬಾವಾಜಿಗಳ ಚುಟ್ಕಾ ಸಹ. ಇದರಲ್ಲಿ ಉಂಟು ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳೂ ಸುಲಭವಾಗಿ ಔಷಧಮಾಡುವ ಕ್ರಮವನ್ನು ಚನ್ನಾಗಿ ಬರೆದು ಕೊರುತ್ತದೆ, ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು,

೫ನೇದು ಯಂತ್ರ ಪ್ರಕರಣದಲ್ಲಿ ವಶೀಕರಣ. ಗ್ರಹಪೀಡಾ ನಿವಾರಣ ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನು ಅನೇಕ ವಿಧವಾದ ಅಪೂರ್ವ ಆಶ್ಚರ್ಯ ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದಬಳಿಕ ಎಲ್ಲಾ ದೇವದೇವತೆಗಳೂ ದ್ರವ್ಯಗಳೂ, ವೈದ್ಯರೂ, ಜೋತಿಷ್ಯರೂ, ಮಾಂತ್ರಿಕರೂ ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥ ಗ್ರಂಥವು ಯಾರು ಕಣ್ಣಿನಿಂದ ನೋಡಲಿಕ್ಕಿಲ್ಲಾ ಪ್ರತಿಯೊಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ [illegible] ಕಡಿಮೆಮಾಡಿ ಇರುವದು. ೩-೮-೦ ಟಪಾಲ ಖರ್ಚು ೫ ಆಣೆ. ಇದು ಅಲ್ಲದೆ ನಮ್ಮಲ್ಲಿ ವೇದಾಂತ, ಜೋತಿಷ್ಯ, ನಾಟಕ ಕಾವ್ಯ ಕಥೆಗಳು ಯಕ್ಷಗಾನ ಇನ್ನು ಅನೇಕ ಪುಸ್ತಕಗಳು ಸಿಗುತ್ತವೆ. ೧೫-೧೧-೨೧

ಎ. ಆರ್. ಶಿವನಾಗಪ್ಪಾ ವಾಗ್ವಿಲಾಸ-
ಹುಬ್ಬಳ್ಳಿ,

ಜಾಹಿರಾತಿಗಾಗಿ.

೧೨ ತಿಂಗಳಿಗೆ	೧೪೫ ರೂ.
೬ "	೭೫ ರೂ.
೩ "	೪೦ ರೂ.

ಅರ್ಧ ಹಣಾ ಮುಂಚಿತವಾಗಿ ಕಳಿಸಬೇಕು.

ಈ ಪತ್ರವನ್ನು ವ್ಯಂಕಟೇಶ ರಾಮಚಂದ್ರ [illegible] ಇವರು ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

N. B 1443

ವಿಜಯ

ನಿತ್ಯ ಪತ್ರ

- ಸಂಪಾದಕರು -
ಶ್ರೀ. ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.
(೧೯೨೦)

ಬೆಲೆ ೬ ಪೈ

ವರ್ಷ ೩) ಧಾರವಾಡ, ರವಿವಾರ ತಾರೀಖು ೧೪ ನೇ ಮೇ ೧೯೨೨. (ಸಂಚಿಕೆ ೧೦೮

ಧಾರವಾಡ ಸ್ವದೇಶೀ ನೇಯುವ ಸಂಘ.

—o—

ನಮ್ಮ ಸಂಘದ ನೇಯುವ ಕಾರಖಾನೆಯಲ್ಲಿ ಖಾತ್ರಿಯ ದೇಶೀ ಗಿರಣಿಯ ನೂಲಿನಿಂದ ಅಥವಾ ಕೈನೂಲಿನಿಂದ ಕೈಮಗ್ಗದ ಮೇಲೆ ನೆಯ್ದ ಎಲ್ಲ ತರದ ದೇಶೀ ಶೀರಿ, ಛಾಂಡು, ಧೋತರ ಉಪ್ಪರಣಿಗಳು ಯೋಗ್ಯದರದಿಂದ ದೊರೆಯುತ್ತವೆ.

ಸದ್ಯದಲ್ಲಿ ಊರೊಳಗೆ ದೇಶೀ ಗಿರಣಿಯ ನೂಲಿನ ವಸ್ತ್ರಗಳನ್ನು ವಿಶ್ವಾಸವಿಟ್ಟು ಕೊಳ್ಳಲಿಕ್ಕೆ ಹೋದ ಗಿರಾಕಿಗಳಿಗೆ ಅನೇಕರು ವಿಲಾಯತೀ ಮತ್ತು ಜಪಾನೀ ನೂಲಿನ ವಸ್ತ್ರಗಳನ್ನು ಕೊಟ್ಟು ಮೋಸಿಸುತ್ತಿರುವರು. ಈ ಪ್ರಕಾರ ಜನರು ಮೋಸ ಹೋಗದೇ ಖಾತ್ರಿ ದೇಶೀ ವಸ್ತ್ರಗಳನ್ನು ಕೊಂಡು ಉಪಯೋಗಿಸಿ "ಸ್ವದೇಶೀ" ವ್ರತವನ್ನು ಅಮಲಿನಲ್ಲಿ ತೀವ್ರ ತರಲಿಕ್ಕೆ ಸಹಾಯ ಮಾಡಬೇಕೆಂಬ ಉದ್ದೇಶದಿಂದಲೇ ಈ ಸಂಘವು ಸ್ಥಾಪಿಸಲ್ಪಟ್ಟಿದೆ.

ಈ ಕಾರಖಾನೆಯಲ್ಲಿ ಇದೇ ದೇಶದಲ್ಲಿ ತಯಾರಾದ ಬಣ್ಣಗಳಷ್ಟೇ ಉಪಯೋಗಿಸಲ್ಪಡುತ್ತವೆ. [illegible] ಜನರು ಸಮಕ್ಷ ಅಥವಾ ಪತ್ರದ್ವಾರಾ ವಸ್ತ್ರಗಳನ್ನು ತರಿಸಿಕೊಂಡು ಖಾತ್ರಿ ಮಾಡಿಕೊಳ್ಳಬಹುದು.

ಸಂಘದ ಕಾರಖಾನೆಯು ಪಾಲಗೇರಿ ಕೆಳಗಿನ ಓಣಿಯಲ್ಲಿದ್ದಂಥ ನವಲೂರ ದೇಸಾಯರ ವಾಡೇದ ಹಿಂದಿನಭಾಗದಲ್ಲಿರುವದು.

ಪತ್ರ- ವ್ಯವಸ್ಥಾಪಕ ಸ್ವದೇಶೀ ನೇಯುವ ಸಂಘ
ಮೋತೀತಲಾವಗಲ್ಲಿ ಧಾರವಾಡ

ಸುರಾಜ್ಯವೂ ಇಲ್ಲ.
ಸ್ವರಾಜ್ಯವೂ ಇಲ್ಲ.

(o)

ಸನ್ ೧೮೮೫ ರಲ್ಲಿ ರಾಷ್ಟ್ರೀಯ ಸಭೆಯು ಜನನವಾದಂದಿನಿಂದ ಇದುವರೆಗೆ ಅಂದರೆ ಸನ್ ೧೯೨೨ ರವರೆಗೆ ಮವಾಳರನ್ನುವಂತೆ ಸುರಾಜ್ಯವೂ ಇಲ್ಲ. ಸ್ವರಾಜ್ಯವೂ ಇಲ್ಲ. ಸುರಾಜ್ಯವದಯನ್ನಬೇಕೆ? ವರಿಷ್ಟ ಸ್ಥಳದಲ್ಲಿಲ್ಲ ಹಿಂದೀ ಅಧಿಕಾರಿಗಳಿಲ್ಲ. ಜನರಲ್ಲಿ ಸಂತೋಷಪ್ರವೃತ್ತಿಯಿಲ್ಲ. ಎಲ್ಲೆಡೆಯಲ್ಲಿಯೂ ಅಸಂತೋಷದ ಪ್ರವೃತ್ತಿಯೇ ಕಂಡು ಬರುತ್ತಿದೆ. ಕಳೆದ ೨-೩ ವರ್ಷಗಳಲ್ಲಿಯಂತೂ ದಬ್ಬಾಳಿಕೆಯು ಶಿಖರಕ್ಕೆ ಮುಟ್ಟಿ ಹೋಗಿದೆ. ಸ್ವರಾಜ್ಯವಂತೂ ಇಲ್ಲವೇ ಇಲ್ಲವೆಂಬದನ್ನು ಬೇರೆ ಹೇಳುವ ಕಾರಣವಿಲ್ಲ. ೧೮೮೫ ರಲ್ಲಿ ಆಳರಸರ ಕೈಯಲ್ಲಿ ಎಷ್ಟು ಅಧಿಕಾರವಿತ್ತೋ ಅಷ್ಟೇ ಅಧಿಕಾರವು ಹೊಸ ಸುಧಾರಣೆಯು ಸಿಕ್ಕರೂ ಕೂಡಾ ಈಗಲೂ ಅದೆ.

ಕಾಂಗ್ರೆಸ ಪಕ್ಷದವರಿಗೆ ಇದೆಲ್ಲ ತಿಳಿದೇ ಅವರು ತಮ್ಮ ಧೋರಣವನ್ನಿಟ್ಟಿರುವರು. ಅದಕ್ಕಾಗಿ ಲೋಕ ಬೆಂಬಲದ ಅವಶ್ಯಕತೆಯಿರುವದೆಂಬದನ್ನರಿತು, ಕಾಂಗ್ರೆಸ ತತ್ವಗಳನ್ನು ಮೂರುಮನೆಯ ಹಳ್ಳಿಯವರನೂ ಮುಟ್ಟಿಸಿದರು. ಮರುಳರಾದ ಮವಾಳರು ಇದನ್ನರಿಯದೆ ಮರುಳತನದಿಂದ ಠರಾವು, ವಿನಂತಿ, ಡೆಪ್ಯುಟೇಶನ್, ಸಮಕಾಲಂಗಳಲ್ಲಿಯೇ ಹೊತ್ತುಗಳೆದರು. ಆದರೂ ಅವರ ಇಚ್ಛೆಯು ಕೈಗೂಡಿತೇನು?

ಪರಮಪೂಜ್ಯ ದಾದಾಭಾಯಿ ನವರೋಜಿ, ಸರ ಫಿರೋಜಶಹಾ ಮೆಹತಾ, ನಾಮದಾರ ಗೋಖಲೆಯವರಂಥ ವಿದ್ವದ್ರತ್ನಗಳು ಯಾವ ಸುರಾಜ್ಯಕ್ಕಾಗಿ ಹೆಣಗಿದರೋ, ಆ ಸುರಾಜ್ಯವು ಇದುವರೆಗೆ ಸಹ ದೊರೆತಿಲ್ಲ. ಸರ ವಾಚ್ಛಾ, ನಾ. ಶಾಸ್ತ್ರಿಯವರಂಥವರ ಕಂಠ ಶೋಷದಿಂದಲೂ ತಥ್ಯಾಂಶವು ಕೈಗೂಡಲೊಲ್ಲದು. ಅಂದಬಳಿಕ ಪರಿಷತ್ತಿನಲ್ಲಿಯ ಠರಾವುಗಳಿಂದ ಪ್ರಯೋಜನವೇನೆಂಬದು ಈಗಿನ ಮವಾಳರಿಗೆ ಹೊಳೆಯತೊಡಗಿದೆ. ಲೋಕಮತವು ತಮ್ಮ ಕಡೆಗೆ ಇಲ್ಲದಿರುವದೇ ಇದಕ್ಕೆ ಕಾರಣವೆಂಬುದೂ ಅವರಿಗೆ ಹೊಳೆದಿದೆ. ಈಗ ಅವರು ಲೋಕಮತವು ತಮ್ಮ ಕಡೆಗೆ ಹೊರಳಬೇಕಾದರೆ ಯಾವ ಧೋರಣವನ್ನಿಡಬೇಕೆಂಬದನ್ನು ನಿರ್ಣಯಿಸುವದಕ್ಕಾಗಿ ಒಂದು ಕಮಿಟಿಯನ್ನು ಕೂಡಿಸಿದ್ದಾರೆ.

ಎಲ್ಲಿಯವರೆಗೆ ಮವಾಳರು ಕೌನ್ಸಿಲಿನ ಮೋಹವನ್ನು ತೆಗೆಯರೋ, ಎಲ್ಲಿಯವರೆಗೆ ದಿವಾನಗಿರಿಯ ಅಭಿಲಾಷೆಯನ್ನು ಬಿಡರೋ, ಎಲ್ಲಿಯವರೆಗೆ ನಾವು ದೊಡ್ಡವರು; ಬಲ್ಲವರು, ಎಂಬ ಅಭಿಮಾನವನ್ನು ತೊರೆಯರೋ, ಎಲ್ಲಿಯವರೆಗೆ ಜನರಲ್ಲಿ ಕೂಡಿ ನಡೆಯರೋ ಅಲ್ಲಿಯವರೆಗೆ ಇವರ ಕಮೀಟಿಯಿಂದ ಪ್ರಯೋಜನವೇನು? ಈಗ ಸರಕಾರದಿಂದ ನೂರಾರು ಕಮೀಟಿಗಳು ಕೂಡುವವು. ಅವುಗಳಿಗೇನಾದರೂ ಲೋಕಮತದ ಬೆಂಬಲವ[illegible]ಯೇನು? ಅದರಂತೆಯೇ ಇದೊಂದಾಗುವದು.

ಆದ್ದರಿಂದ ಮವಾಳ ಪಕ್ಷಾಭಿಮಾನಿಗಳಾದ ದೇಶ ಹಿತೈಷಿಗಳೇ! ನೀವು ಹೆಡ್ಡರಲ್ಲ; ದಡ್ಡರಲ್ಲ; ಮರುಳರಲ್ಲ. ನಿಮ್ಮಲ್ಲಿ ಉಜ್ವಲವಾದ ದೇಶಭಕ್ತಿಯಿದೆ. ಸ್ವಬಾಂಧವರ ಬಗ್ಗೆ ಒಳ್ಳೇ ಕಳಕಳಿಯಿದೆ. ಆದರೆ ಫಲವೇನು? ನಿಮ್ಮನ್ನು ಅಲ್ಪ ಸ್ವಾರ್ಥವು ಆವರಿಸಿಕೊಂಡಿದೆ. ಸುಖ-ಸಾಧನಗಳು ಮುತ್ತಿಗೆ ಹಾಕಿವೆ. ಅವುಗಳಿಂದ ನಿಮ್ಮ ಕಣ್ಣುಗಳ ಮೇಲೆ ತೆಳುವಾದ ಪರೆಯು ಬಿದ್ದಿದೆ. ಅವನ್ನಷ್ಟು ಹರಿದೊಗೆಯಿರಿ. ಅಂದರೆ ನೀವು ಕಾಂಗ್ರೆಸ ಪಕ್ಷದವ

ಸಾ: ಒಂದು ಹೆಜ್ಜೆಯನ್ನು ಮುಂದಿಟ್ಟು ಲೋಕಾದರಕ್ಕೆ ಪಾತ್ರರಾಗುವಿರಿ. ನೀವು ಬೇಡವೆಂದರೂ ಕೇಳರಿ ಲೋಕ ಮತವು ನಿಮ್ಮ ಬೆನ್ನನ್ನು ಬಿಡದೆ ತೆರಳುವದು.

ಅಂದರೆ ನಿಮ್ಮ ಸುರಾಜ್ಯವೂ ದೊರಕುವದು, ಸ್ವರಾಜ್ಯವೂ ದೊರಕುವದು. ಹಿಂದುಸ್ತಾನದ ತುಂಬೆಲ್ಲ ಸ್ಥಿರವಾದ ಸುಖಸಾಮ್ರಾಜ್ಯವು ನೆಲೆಗೊಳ್ಳುವದು.

ನೇಕ ನಾಮದಾರ ಶಾಸ್ತ್ರಿಗಳವರ ಪ್ರವಾಸವು.

....o....

ನೇ. ನಾ. ಶಾಸ್ತ್ರಿಗಳವರು ವಿಲಾಯತಿಯ ಪ್ರವಾಸವನ್ನು ತೀರಿಸಿಕೊಂಡು ಬಂದಿರುವರಷ್ಟೇ? ಇನ್ನು ಅವರು ವಸಹಾತಿನ ಪ್ರವಾಸಕ್ಕಾಗಿ ಹೊರಡುವವರಿರುವರು ಅದಕ್ಕಾಗಿ ಅವರ ಪ್ರವಾಸದ ಖರ್ಚೆಂದು ಸಾವಿರಾರು ರೂಪಾಯಿಗಳು ಹಿಂದುಸ್ತಾನದ ತಿಜೋರಿಯಿಂದ ಬಳೆದು ಹೋಗುವವು. ನೇ. ನಾ. ಶಾಸ್ತ್ರಿಗಳವರು ಹಿಂದುಸ್ತಾನ ಸರಕಾರದಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳು. ಹಿಂದೀ ಜನರು ನೇಮಿಸಿದ ಪ್ರತಿನಿಧಿಗಳಲ್ಲ. ಯಾರೇ ಇರಲಿ. ಇವರು ಹೋಗಿ ಮಾಡುವದೇನು?

ನಾ. ಶಾಸ್ತ್ರಿಗಳು ಬಲ್ಲವರು. ಬಲ್ಲಿದರು. ರಾಜಕಾರಣ ಪಟುಗಳು. ಹಿಂದೀ ಜನರ ಕಳಕಳಿಯುಳ್ಳವರು. ಇದೆಲ್ಲ ನಿಜ. ಆದರೆ ಫಲವೇನು? ೧೯೧೮ರಲ್ಲಿ ವಸಹಾತಿಗೆ ಅಧಿಕಾರ ದೊರೆತಿದೆ. ಪರದೇಶದವರನ್ನು ಒಳಗೆ ಕರೆದುಕೊಳ್ಳುವ ಅಥವಾ ಬಿಡುವ ಅಧಿಕಾರವು ದೊರೆತಿದೆ ಅವರ ದೃಷ್ಟಿಯಿಂದ ಹಿಂದುಸ್ತಾನವು ಪರದೇಶವಾಗಿದೆ. ೧೯೨೧ರಲ್ಲಿ ಹಿಂದುಸ್ತಾನಕ್ಕೆ ಹಕ್ಕು ದೊರೆತಿದೆ. ಆದರೆ ಪ್ರಯೋಜನವೇನು? ಎಲ್ಲಿಯ ವರೆಗೆ ವಸಹಾತಿನ ೧೯೧೮ ರ ಕಾಯಿದೆಯು ರಹಿತವಾಗದೋ, ಅಲ್ಲಿಯ ವರೆಗೆ ನಾ. ಶಾಸ್ತ್ರಿಗಳಂಥ ಸಾವಿರಾರು ಜನರು ಅಲ್ಲಿ ಹೋದರೂ ಫಲವಿಲ್ಲ. ಈ ಸಂಗತಿಯು ನಾಮದಾರರಿಗೇ ಗೊತ್ತಿದೆ. ಆದರೇ ಆ ತರದ ಉದ್ಗಾರಗಳನ್ನು ಹೊರಡಿಸಿದ್ದಾರೆ? ಹೀಗಿದ್ದೂ ವಸಹಾತಿನ ಪ್ರವಾಸಕ್ಕೆ ಹೊರಟು ಹಿಂದೀ ಜನರ ದುಡ್ಡನ್ನು ನಿರರ್ಥಕವಾಗಿ ಖರ್ಚುಮಾಡುವದೇಕೆ? ನಾಮದಾರ ಶಾಸ್ತ್ರಿಗಳೇ ವಿಚಾರ ಮಾಡಬಲ್ಲಿರಾ?

ಸುಳ್ಳರಾರು?

ಟಾಯಿಮ್ಸಕಾರರೋ, ಲಾಯಿಡಜಾರ್ಜರೋ?

—o—

ಕಾಮನ್ಸ ಸಭೆಯಲ್ಲಿ ಮಿ. ಚೇಂಬರಲೇನರು. ಎಮ್. ಬಾರ್ಥೊ (ಫ್ರಾನ್ಸದ ಮಂತ್ರಿ) ಮಿ. ಲಾಯಿಡ ಜಾರ್ಜ (ಇಂಗ್ಲಂಡದ ಮಂತ್ರಿ) ರ ಸಂವಾದವೆಂದು ಪ್ರಸಿದ್ಧಿಸಿದ ಟಾಯಿಮ್ಸದ ವಾರ್ತಾದಾಯಕನು, ಅದನ್ನು ತನ್ನ ಕಲ್ಪನೆಯಿಂದಲೇ ಪ್ರಸಿದ್ಧಿಸಿರಬಹುದು. ಅದಕ್ಕೆ ಆಧಾರಗಳಿಲ್ಲೆಂದರು, ಹಾಗೂ ಫ್ರಾನ್ಸ—ಇಂಗ್ಲಂಡಗಳ ನಡುವೆ ಮತಭೇದವಾಗುವಂತಹ ಯಾವ ಸಂಗತಿಗಳೂ ಒದಗಲಿಲ್ಲವೆಂದರು.

" ಫ್ರಾನ್ಸ, ಇಂಗ್ಲಂಡಗಳ ಮಾರ್ಗವು ಭಿನ್ನವಾಯಿತು " ಎಂಬದಾಗಿ ಎಮ್ ಬಾರ್ಥೊ ಇವರೊಡನೆ ಸಂವಾದವನ್ನೇ ನಾನು ಮಾಡಲಿಲ್ಲವೆಂದು ಮಿ. ಲಾಯಿಡ ಜಾರ್ಜರು ಪ್ರಸಿದ್ಧಿಸಿದ್ದು ಲಂಡನ ಟಾಯಿಮ್ಸದ ಸಂಗತಿಯು ಸುಳ್ಳೆಂತಲೂ. ಪಾರಿಸದ ವೃತ್ತಪತ್ರಗಳ ಸಂಗತಿಯು ನಿಜವೆಂತಲೂ ಅವರನ್ನುವರು. ಹಾಗೂ ತಮ್ಮ ಸಂತಾಪವನ್ನೂ ವ್ಯಕ್ತಗೊಳಿಸಿರುವರು.

ಮಿ. ಲಾಯಿಡ ಜಾರ್ಜರ ಪ್ರಸಿದ್ಧ ಪತ್ರಿಕೆಯು ಹೊರಟ ಬಳಿಕ ಟಾಯಿಮ್ಸದ ವಾರ್ತಾದಾಯಕರಾದ ಮಿ. ಸ್ಟೀಡರು ತಾವು ಪ್ರಸಿದ್ಧಿಸಿದ ಸಂಗತಿಯು ಅಕ್ಷರಶಃ ನಿಜವಿದ್ದು, ತಮ್ಮ ತಲೆಯೊಳಗಿನದಲ್ಲವೆಂತಲೂ, ಆ ಭಾಷಣ ಪ್ರಸಂಗದಲ್ಲಿ ಬೇರೆಯವರೂ ಇದ್ದರೆಂತಲೂ ಆಗ ಮಿ. ಲಾಯಿಡ ಜಾರ್ಜರು " ಯಾವ ಪ್ರಸಂಗದಲ್ಲಿ ಫ್ರಾನ್ಸಕ್ಕೆ ಇಂಗ್ಲಂಡದ ಸ್ನೇಹಕ್ಕಿಂತಲೂ ಬೆಲಜಮದ ಸ್ನೇಹವು ಹೆಚ್ಚೆಂದು ಭಾಸವಾಗುವದೋ, ಆ ಪ್ರಸಂಗದಲ್ಲಿ ಬ್ರಿಟನವು ರಾಷ್ಟ್ರಸಂಘವು ಮುರಿಯಿತೆಂದರೆ ಆಶ್ಚರ್ಯವಲ್ಲ " ಎಂಬರ್ಥದ ಉದ್ಗಾರಗಳನ್ನು ತೆಗೆದಿರುವರೆಂತಲೂ ಅನ್ನುವರು.

ಅಂದ ಬಳಿಕ ಇವರಿಬ್ಬರಲ್ಲಿ ಸುಳ್ಳರಾರು? ಟಾಯಿಮ್ಸಕಾರರೋ? ಲಾಯಿಡಜಾರ್ಜರೋ?

ಪಂ ಜವಾಹಿರಲಾಲ ನೇಹರೂರವರ ಬಂಧನ.

—o—

ಪಂ ಜವಾಹಿರಲಾಲರವರು ಪಂ. ಮೋತೀಲಾಲರ ಚೆಟ್ಟಿಗೆಂದು ಅಮನಾ ಪುರಂಗಕ್ಕೆ ಹೋದ ವೇಳೆಯಲ್ಲಿ ಪಂ ಜವಾಹಿರಲಾಲರನ್ನು ಬಂಧಿಸಿರುವರು. ಅಪರಾಧವು ೧೨೪ಅ, ೫೦೬ ಕಲಮುಗಳು.

....

ಮುಳಸೀ ಸತ್ಯಾಗ್ರಹ ಪ್ರಕರಣ.

—o—

ಪುನಃ ೫೯ ವೀರರಿಗೆ ಶಿಕ್ಷೆ.

ಮುಳಸೀ ಸತ್ಯಾಗ್ರಹದ ಪ್ರಕರಣದಲ್ಲಿ ೯-೧೦ ಈ ಎರಡು ತಾರೀಖುಗಳಲ್ಲಿ ಒಟ್ಟು ೫೯ ವೀರರಿಗೆ ಎರಡರಿಂದ ಒಂದು ತಿಂಗಳವರೆಗೆ ಸಶ್ರಮ- ಸಾದಾ ಶಿಕ್ಷೆಗಳಾಗಿವೆ. ಅವರಲ್ಲಿ ಒಬ್ಬ ಸ್ತ್ರೀಯೂ ಇರುವಳು. ಇನ್ನೂ ಹಲವರ ಮೇಲೆ ಖಟ್ಲೆಗಳಿವೆ.

